ಕರ್ನಾಟಕ ವಿಧಾನಸಭೆ

ಶುಕ್ರವಾರ 2ನೇ ಆಗಸ್ಟ್ 1995ರಂದು ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9.50 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು:- (ಶ್ರೀ ಚಂದ್ರಶೇಖರ್ ಎಂ. ಮಾಮನಿ) ಅವರು ಪೀಠವನ್ನು ಅಲಂಕರಿಸಿದ್ದರು.

ವಿತ್ತೀಯ ಕಾರ್ಯಕಲಾಪಗಳು

1996-97ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ

ಉಪಾಧ್ಯಕ್ಷರು:- ಡಿಮಾಂಡ್ ಮೇಲೆ ಶಾಮನೂರು ಶಿವಶಂಕರಪ್ಪನವರು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಇದು ಆದ ಮೇಲೆ ಕ್ವಶ್ಚನ್ ಅವರ್ ಇದೆ, ನಂತರ ರಿಪ್ಲೈ ಇದೆ.

+ ಶ್ರೀ ಶಾಮನೂರು ಶಿವಶಂಕರಪ್ಪ (ದಾವಣಗೆರೆ):- ಮಾನ್ಯ ಉಪಾಧ್ಯಕ್ಷರೆ, ಈ ದಿವಸ ನನಗೆ ಮಾತನಾಡಲಿಕ್ಕೆ ಸಮಯ ಕೊಟ್ಟಿದ್ದಕ್ಕೆ ಮಾನ್ಯ ಉಪಾಧ್ಯಕ್ಷರಿಗೆ ನಾನು ನನ್ನ ಕೃತಜ್ಞತೆಗಳನ್ನು ಅರ್ಪಿಸಿ, ಕೆಲವು ವಿಚಾರಗಳ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯತಕ್ಕಂತಹ ಕೆಲಸವನ್ನು ಮಾಡೋಣ ಎಂದು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ನಾನು ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ಈ ನಗರಸಭೆಗಳ ಬಗ್ಗೆ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಗರಸಭೆಗಳ ಸ್ಥಿತಿ ಏನಾಗಿದೆ ಎನ್ನುವುದನ್ನು ನಾವು ಸ್ವಲ್ಪ ಆಲೋಚನೆ ಮಾಡಿದರೆ ಅದಕ್ಕೆ ಬರತಕ್ಕಂತಹ ಆದಾಯಗಳೆಲ್ಲ ಕುಂಠಿತವಾಗಿ ಯಾವುದೇ ನಗರಸಭೆಯನ್ನು ನಾವು ತೆಗೆದು-ಕೊಂಡರೂ ಸಹ ಆರ್ಥಿಕವಾಗಿ ದುರ್ಬಲ ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಇದಕ್ಕೆ ಸರ್ಕಾ-ರವೇ ಕಾರಣ ಎಂದು ನನ್ನ ಭಾವನೆ. ಏಕೆಂದರೆ ಹಿಂದೆ ಇದ್ದ ಆಕ್ಟ್ರಾಯ್‌ನ್ನು ಸರ್ಕಾರ ತೆಗೆದು-ಹಾಕಿದ್ದು, ಅದಕ್ಕೆ ಸೆಂಟ್ರಲ್ ಗವರ್ನಮೆಂಟ್‌ನವರು ಹೇಳಿದರು ಎನ್ನತಕ್ಕಂತಹ ಕಾರಣವನ್ನು ಇವತ್ತು ಕೇಳುತ್ತಿದ್ದೇವೆ. ಅದರ ಜೊತೆಯಲ್ಲಿ ಈ ಸ್ಟ್ಯಾಂಪ್‌ಡ್ಯೂಟಿಗಳು ರೆವಿನ್ಯೂ ಬಗ್ಗೆ ಬರತಕ್ಕಂತಹ ಧನ-ವನ್ನು ರೆವಿನ್ಯೂ ಮಿನಿಸ್ಟರ್‌ರವರು ಹಿಂದೆ ಓಬಿರಾಯನ ಕಾಲದಲ್ಲಿ ಎಷ್ಟು ಕೊಡುತ್ತಿದ್ದರು ಅಷ್ಟನ್ನೇ ಇದುವರೆಗೆ ಕೊಡುತ್ತಾ ಇರತಕ್ಕಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಅದೇ ರೀತಿ ಮನೋ ರಂಜನಾ ತೆರಿಗೆಯನ್ನು ಕೂಡ ಕಡಿಮೆ ಮಾಡಿ ಇವತ್ತಿನ ದಿವಸ 30 ಪರ್ಸೆಂಟ್ ಕೂಡ ನಗರ ಸಭೆ-ಗಳಿಗೆ ಆದಾಯ ಬರದ ರೀತಿ ಆಗಿರುವುದನ್ನು ನೋಡುತ್ತಿದ್ದೇವೆ. ಅದೇ ರೀತಿ ಈ ಮೋಟಾರ್ ವೆಹಿ-ಕಲ್ ಟ್ಯಾಕ್ಸ್ ಬಗ್ಗೆ ಸಹ ಹಿಂದೆ ಯಾವುದೋ ಕಾಲದಲ್ಲಿ ನಿಗದಿ ಮಾಡಿದ್ದ ಹಣವನ್ನು ಇವತ್ತಿನ ದಿವಸ ಕೊಡುತ್ತಿದ್ದಾರೆ. ಆದರಿಂದ ಅವುಗಳ ಆರ್ಥಿಕ ಸ್ಥಿತಿ ದುರ್ಬಲವಾಗಿ ಜೊತೆಗೆ ಯಾವುದೇ ನಗರಗಳನ್ನು ನೋಡಿದರೂ ಕೂಡ ಆಟೋರಿಕ್ಷಾ ಆಗಲಿ, ಎತ್ತಿನ ಗಾಡಿಯಾಗಲಿ, ಮೋಟಾರ್ ವೆಹಿಕಲ್ಸ್ ಯಾವುದೂ ಕೂಡ ಓಡಾಡುವುದಕ್ಕೆ ಬಾರದೆ ಇರುವಂತಹ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ.

ನಮ್ಮ ಹೆಚ್.ಯು.ಡಿ. ಮಿನಿಸ್ಟರ್ ಆಗಿರತಕ್ಕಂಥವರು ಇದರ ಬಗ್ಗೆ ನಗರಸಭೆಗಳ ಪರವಹಿಸಿ ಹೆಚ್ಚಿಗೆ ಆದಾಯ ಬರತಕ್ಕಂತಹ ವ್ಯವಸ್ಥೆಯನ್ನು ಮಾಡಿದ್ದರೆ ಇಷ್ಟೊಂದು ಆರ್ಥಿಕ ದುರ್ಬಲತೆ ನಗರಸಭೆ-ಗಳಿಗೆ ಪ್ರಾಪ್ತವಾಗುತ್ತಿರಲಿಲ್ಲ ಎಂದು ನನ್ನ ಭಾವನೆ. ಮತ್ತು ಈ ಸ್ಥಳೀಯ ಸಂಸ್ಥೆಗಳ ಆರ್ಥಿಕ ಅಧ್ಯ-ಯನಕ್ಕಾಗಿ ಅನೇಕ ಸಮಿತಿಗಳನ್ನು ಕೂಡ ಸರ್ಕಾರದವರು ಮಾಡಿದರು. ಅದರ ವರದಿಯನ್ನು . . .

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮಾನ್ಯ ಉಪಾಧ್ಯಕ್ಷರೆ, ಮತ್ತೆ ನಾವು ಪದೇ ಪದೇ ಹೇಳಿದರೆ ಇದೇ ಕೆಲಸ ಮಾಡುತ್ತಿದ್ದಾರೆಂದು ತಾವು ನೆನಪಿಸಬಹುದು. ಅವರು ಮಾತನಾಡುತ್ತಿರು-ವುದು ನಗರಸಭೆಗಳ ಬಗ್ಗೆ. ಮಾನ್ಯ ಬಚ್ಚೇಗೌಡರು ಅದಕ್ಕೆ ಸಂಬಂಧಪಟ್ಟ ಸಚಿವರಾ, ನೀವು 'ಹೌದು' ಎಂದರೆ ನಮ್ಮ ಅಬ್ಜೆಕ್ಷನ್ ಇಲ್ಲ. ನೀವು ಏನೇನು ಪೋರ್ಟ್‌ಫೋಲಿಯೋ ಕೊಟ್ಟಿರಿ ಎಂದು ನಿಮಗೆ ಗೊತ್ತಿಲ್ಲ. He is nothing to do with that reply... ಆ ಮಾತು ಬೇರೆ ನಿಮಗೆ ಪದೇ ಪದೇ 100 ಸಾರಿ ಹೇಳಿದರೂ, ಬರೆದುಕೊಂಡು ರಿಪ್ಲೈ ಕೊಡುವಾಗ ಆದರೂ ಹೇಳಬೇಕಲ್ಲ. ಇಂ-ತಿಂಥ ಸದಸ್ಯರು ಈ ಡಿಮಾಂಡ್ ಮೇಲೆ ಮಾತನಾಡಿದರು, ಈ ಬೇಡಿಕೆಯನ್ನು ನಾನು ಪರಿಶೀಲನೆ ಮಾಡುತ್ತೇನೆ ಅಥವಾ ಮಾಡುವುದಿಲ್ಲ ಎಂದು ಹೇಳಬೇಕಲ್ಲ.

ಉಪಾಧ್ಯಕ್ಷರು:- ಅವರು ಬರುವತನಕ ಬಚ್ಚೇಗೌಡರು ಬರೆದುಕೊಳ್ಳುತ್ತಾರೆ.

ಶ್ರೀ ಎಸ್. ಶಿವಶಂಕರಪ್ಪ:- ಈ ರಸ್ತೆಗಳ ಬಗ್ಗೆ ನಮ್ಮ ವಿಧಾನಸಭಾ ಸದಸ್ಯರಿಗೆ ಒಂದು ವರ್ಷಕ್ಕೆ 30 ಲಕ್ಷ ರೂಪಾಯಿಗಳ ರಸ್ತೆಯನ್ನು ನೀವು ಗುರುತು ಮಾಡಿ ನಾವು ಅದಕ್ಕೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಸರ್ಕಾರ ಆಶ್ವಾಸನೆಯನ್ನು ಮಾಡಿತ್ತು. ಆದರೆ ಎಲ್ಲಿಯೂ ಕೂಡ ಹಣವನ್ನು ರಿಲೀಸ್ ಮಾಡಿರತಕ್ಕಂಥದ್ದು ಕಾಣುವುದಿಲ್ಲ. ಏಕೆಂದರೆ ಕೇಂದ್ರ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಪಾರ್ಲಿಮೆಂಟ್ ಸದಸ್ಯರಿಗೆ ಕೊಡುತ್ತಾರೆ. ಅವರು ತಮಗೆ ಬೇಕಾದಲ್ಲಿ ಅವರ ಕ್ಷೇತ್ರದಲ್ಲಿ ಎಲ್ಲಿ ಬೇಕಾದರೂ ಅವರು ಹಣವನ್ನು ಕೊಡತಕ್ಕಂತಹ ವ್ಯವಸ್ಥೆಯನ್ನು ನಾವು ನೋಡುತ್ತಿ-ದ್ದೇವೆ. ಅದೇ ಮಾದರಿಯಲ್ಲಿ 30 ಲಕ್ಷ ಕೊಡುತ್ತೇವೆಂದು ಹೇಳಿದಿರಿ, ಆದರೆ ಆ 30 ಲಕ್ಷ ಹಣವನ್ನು ರಿಲೀಸ್ ಮಾಡದೆ ಇರುವುದರಿಂದ ಇವತ್ತು ನಮ್ಮ ಕ್ಷೇತ್ರದಲ್ಲಿ ಯಾವುದೇ ಕೆಲಸಗಳು ಕುಂಠಿತ ಆಗಿ-ರುವುದನ್ನು ನಾವು ನೋಡುತ್ತಿದ್ದೇವೆ. ಮತ್ತು ಇನ್ನೊಂದು ಪ್ರಮುಖವಾದ ವಿಚಾರ ಎಂದರೆ ಎ.ಪಿ.-ಎಮ್.ಸಿ.ಯಿಂದ ಕೆಲವು ಭಾಗ ರಸ್ತೆಗಳನ್ನು ಮಾಡುವುದಕ್ಕೆ ನಾವು ಹಣವನ್ನು ಕೊಡುತ್ತೇವೆಂಬ ಮಾತು ಪೇಪರ್‌ನಲ್ಲಿ ಎಲ್ಲಾ ಬಂದಿತ್ತು. ನಾವೆಲ್ಲರೂ ಕೂಡ ಇಂತಿಂತಹ ರಸ್ತೆಗಳನ್ನು ಮಾಡಿ ಎಂದು ಎ.ಪಿ.ಎಂ.ಸಿ. ಸೆಕ್ರೆಟರಿಯವರಿಗೆ ಮತ್ತು ಮಾನ್ಯ ಮಂತ್ರಿಯವರಿಗೆ ಕೂಡ ಕೊಟ್ಟೆವು. ಆದರೆ ಆಮೇಲೆ ಅವರು ಒಂದು ಸರ್ಕ್ಯುಲರ್ ತೋರಿಸಿದರು. ಅದರಲ್ಲಿ ಏನು ಇದೆ ಎಂದರೆ ವಿಧಾನಸಭಾ ಮತ ಕ್ಷೇತ್ರದಲ್ಲಿ ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಿಂದ ತೆಗೆದುಕೊಂಡಂತಹ 50 ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವುದು ಹಾಗೂ ಉತ್ತರ ಕನ್ನಡ ಹಾಗೂ ಚಿಕ್ಕಮಗಳೂರು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಳಿಯಾಳ ಮತ್ತು ಶೃಂಗೇರಿ ಮತ ಕ್ಷೇತ್ರದ ಈ ಕಾಮಗಾರಿಯನ್ನು ಪ್ರತಿ ತಾಲ್ಲೂಕಿಗೆ 50 ಕಿ.ಮೀ.

ನಂತೆ ಅಭಿವೃದ್ಧಿ ಪಡಿಸುವುದು. ಇನ್ನು 22 ಕ್ಷೇತ್ರಗಳನ್ನು ಬಿಟ್ಟು ಉಳಿದ ಭಾಗಕ್ಕೆ ಮಾತ್ರ ಈ ಹಣವನ್ನು ಕೊಡುತ್ತೇವೆ ಎನ್ನತಕ್ಕಂತಹ ಒಂದು ಮಾತನ್ನು ಅಲ್ಲಿರತಕ್ಕಂತಹ ಅಧಿಕಾರ ವರ್ಗದವರು ಹೇಳುತ್ತಿದ್ದಾರೆ. ಏಕೆಂದರೆ ಇವತ್ತು ನಗರಸಭೆಯಲ್ಲಿ ಆರ್ಥಿಕ ಪರಿಸ್ಥಿತಿ ಸರಿಯಿಲ್ಲ. ಎ.ಪಿ.ಎಂ.ಸಿ. ಯಲ್ಲಿ ಅದರಲ್ಲಿಯೂ ಪ್ರಮುಖವಾಗಿ ದಾವಣಗೆರೆ ಎ.ಪಿ.ಎಂ.ಸಿ. ಯಲ್ಲಿ ಅತಿ ಹೆಚ್ಚಿನ ರೀತಿಯಲ್ಲಿ ಹಣ ಶೇಖರಣೆ ಆಗಿದೆ. ಆ ಹಣವನ್ನು ಖರ್ಚು ಮಾಡುವುದಕ್ಕೆ, ದಾವಣಗೆರೆ ಸಿಟಿ ಬರುತ್ತದೆ, ನಿಮ್ಮದು ಅರ್ಬನ್ ಏರಿಯಾ ಕೊಡುವುದಕ್ಕಾಗುವುದಿಲ್ಲ ಎನ್ನತಕ್ಕಂತಹ ಮಾತನ್ನು ನಾವು ಇವತ್ತು ಕೇಳುತ್ತಿ-ದ್ದೇವೆ. ಆ ಅರ್ಬನ್ ಏರಿಯಾಕ್ಕೆ ಅಂದರೆ ಎ.ಪಿ.ಎಂ.ಸಿ.ಗೆ ಬರತಕ್ಕಂತಹ ಫಸಲು ನಗರಸಭೆ ರಸ್ತೆ-ಯಲ್ಲಿಯೇ ಬರಬೇಕು ಎನ್ನುವುದನ್ನು ಕೂಡ ಸರ್ಕಾರ ಗಮನದಲ್ಲಿಡಬೇಕಾಗಿತ್ತು. ಆದರೂ ಕೂಡ ನಾವು ಏನೋ ಸರಿ ಮಾಡುತ್ತೇವೆಂದು ಮಂತ್ರಿಗಳು ಹೇಳುತ್ತಿದ್ದಾರೆ. ದಯವಿಟ್ಟು ಎ.ಪಿ.ಎಂ.ಸಿ.ಗೆ ಸಂಬಂಧಪಟ್ಟಂತಹ ಮಾನ್ಯ ಮಂತ್ರಿಗಳು ಈ ಅರ್ಬನ್ ಏರಿಯಾದಲ್ಲಿ ಬರತಕ್ಕಂತಹ ಕ್ಷೇತ್ರಕ್ಕೂ ಕೂಡ ಇದನ್ನು ವಿಸ್ತರಣೆ ಮಾಡಿ ಆಜ್ಞೆ ಮಾಡಬೇಕು. ಆಗ ಸ್ವಲ್ಪವಾದರೂ ಕೂಡ ರಸ್ತೆಗಳು ಸುಧಾ-ರಿಸತಕ್ಕಂತಹ ಪರಿಸ್ಥಿತಿ ಬರುತ್ತದೆ ಎನ್ನತಕ್ಕಂತಹ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ನೀರಿನ ಕೊರತೆ ಇದು ಒಂದು ಭಾಗದಲ್ಲೇ ಅಲ್ಲ ಎಲ್ಲ ಕಡೆಗೂ ಇದೆ ಎನ್ನುವುದು ತಮ-ಗೆಲ್ಲಾ ಗೊತ್ತಿದೆ ಹಾಗೂ ಇಲ್ಲಿಯ ಅನೇಕ ಮಾನ್ಯ ಸದಸ್ಯರುಗಳು ಅದರ ಬಗ್ಗೆ ಕೂಡ ಹೇಳಿದ್ದಾರೆ. ನೀರಿನ ಅಭಾವದ ಬಗ್ಗೆ ಮತ್ತು ಈ ಹಿಂದೆ ಆಗಿರತಕ್ಕಂಥ ಎಸ್ಟಿಮೇಟ್ ಸೆಕೆಂಡ್ ಸ್ಟೇಜ್ ಆಗಲಿ, ಫರ್ಸ್ಟ್ ಸ್ಟೇಜ್ ಆಗಲಿ ಯಾವುದೇ ನೀರಿನ ಸಪ್ಲೈ ಬಗ್ಗೆ ಅನೇಕ ವರ್ಷಗಳು ಕಳೆದರೂ ಕೂಡ ಅದು ಯಾವ ಸ್ಥಿತಿಯಲ್ಲಿತ್ತೋ ಅದೇ ಸ್ಥಿತಿಯಲ್ಲಿದೆ. ಉದಾಹರಣೆಗೆ ದಾವಣಗೆರೆಯನ್ನು ತೆಗೆದುಕೊಂಡರೆ 1991ನೇ ಸಾಲಿನಲ್ಲಿ ಹರಿಹರದಿಂದ ತುಂಗಭದ್ರಾ ನದಿಯಿಂದ ನೀರನ್ನು ಕೊಡುತ್ತೇವೆಂದು ಹೇಳಿ ಹದಿಮೂರು ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿ, ಅರ್ಧ ಭಾಗ ಹಣವನ್ನು ಎಲ್.ಐ.ಸಿ. ಯಿಂದ ಲೋನ್ ತೆಗೆದುಕೊಳ್ಳುತ್ತೇವೆ, ಕಾಲು ಭಾಗ ಹಣವನ್ನು ನಗರಸಭೆಯವರು ಕೊಡಬೇಕು ಇನ್ನು ಕಾಲು ಭಾಗ ಹಣವನ್ನು ಸರ್ಕಾರ ಕೊಡುತ್ತದೆಂದು ಹೇಳುತ್ತಿದ್ದರು. ಆದರೆ ಈ ಆರ್ಥಿಕವಾಗಿ ದುರ್ಬಲವಾಗಿರತಕ್ಕಂಥ ನಗರಸಭೆಗಳಿಂದ ದುಡ್ಡು ಕೊಡುವುದಕ್ಕೆ ಆಗುತ್ತಿಲ್ಲ ಎಂದು ಎಲ್ಲರಿಗೂ ಗೊತ್ತಿದೆ. ಅಂತಹ ಪರಿಸ್ಥಿತಿಯಲ್ಲಿ ಕೂಡ ನಮ್ಮ ನಗರಸಭೆಯವರು ಸುಮಾರು ಅರವತ್ತು ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಸಂದಾಯ ಮಾಡಿದ್ದಾರೆ. ಅದೇ ರೀತಿ ಸರ್ಕಾರ ಕೂಡ ಮೂರುವರೆ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ ಕೇವಲ ಐವತ್ತು ಲಕ್ಷ ರೂಪಾಯಿಯನ್ನು ಕೊಟ್ಟಿದೆ ಹಾಗೂ ಮೂರು ವರ್ಷಗಳಾದರೂ ಕೂಡ ನೀರಿನ ಕೊರತೆಯ ಬಗ್ಗೆ ಸರ್ಕಾರ ನಿರ್ಲಕ್ಷ್ಯ ಭಾವನೆಯನ್ನು ತೋರುತ್ತಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಪ್ರಮುಖವಾಗಿ ನಗರಕ್ಕೆ ಬೇಕಾಗಿರುವುದು ಕುಡಿಯುವ ನೀರು, ಸರಿಯಾದ ರಸ್ತೆಗಳು, ಎಲೆಕ್ಟ್ರಿಕ್ ದೀಪ ಹಾಗೂ ಸ್ವಚ್ಛತೆ ಈ ನಾಲ್ಕನ್ನು ಮಾತ್ರ ಜನರು ಅಪೇಕ್ಷೆ ಮಾಡುತ್ತಾರೆ. ಅಂಥದ್ದಕ್ಕೆಲ್ಲಾ ಸರ್ಕಾರ

ನಿಗಾ ಕೊಡದೇ ಇದ್ದರೆ ಜನರು ಏನು ತಿಳಿದುಕೊಳ್ಳಬೇಕು ಹಾಗೂ ನಾವು ಆರಿಸಿ ಬಂದವರಿಗೆ ಜನಗಳನ್ನು ಎದುರಿಸಲಿಕ್ಕೆ ಬಹಳ ಕಷ್ಟವಾಗಿದೆ ಎನ್ನತಕ್ಕಂಥದ್ದನ್ನು ಸರ್ಕಾರದವರು ಅರಿತುಕೊಳ್ಳ-ಬೇಕು. ಮತ್ತು ನಗರಸಭೆಗೆ ಆರಿಸಿ ಬಂದಂಥ ನಗರಸಭಾ ಸದಸ್ಯರುಗಳ ಪರಿಸ್ಥಿತಿ ಕೂಡ ತುಂಬಾ ಚಿಂತಾಜನಕವಾಗಿದೆ. ಏಕೆಂದರೆ ಯಾವುದೇ ಕೆಲಸಗಳನ್ನು ಮಾಡಲಿಕ್ಕೂ ಕೂಡ ಹಣವಿಲ್ಲದೆ ಎಲ್ಲ-ದಕ್ಕೂ ನಾವು ನೇರವಾಗಿ ಸರ್ಕಾರವನ್ನು ನಂಬಿಕೊಂಡು ಸರ್ಕಾರಕ್ಕೆ ಮೇಲಿಂದ ಮೇಲೆ ಕೈ ಒಡ್ಡು-ವಂಥ ಪರಿಸ್ಥಿತಿಯನ್ನು ಸರ್ಕಾರ ಸೃಷ್ಟಿಮಾಡಿದೆಯೆಂದರೆ ತಪ್ಪಾಗಲಿಕ್ಕಿಲ್ಲ. ನೀರಿನ ಕೊರತೆಯನ್ನು ನೀಗಿಸಲಿಕ್ಕೆ ಮೊನ್ನೆ ನಮ್ಮ ಮಾನ್ಯ ಮಂತ್ರಿಗಳಾದ ಬಚ್ಚೇಗೌಡರು ಒಂದು ಹೇಳಿಕೆಯನ್ನು ಕೊಟ್ಟರು. ನಾಲ್ಕು ನೂರು ಕೋಟಿ ರೂಪಾಯಿಗಳ ಹಣ ಬಂದಿದೆ. ಅದರಲ್ಲಿ ನಲವತ್ತು ಸಿಟಿಗಳಿಗೆ, ಪಟ್ಟಣಗಳಿಗೆ ನೀರಿನ ಸೌಕರ್ಯವನ್ನು ಒದಗಿಸುತ್ತೇವೆಂದು ಹೇಳಿದ್ದು ಒಂದು ಪತ್ರಿಕೆಯಲ್ಲಿ ಬಂದಿದೆ. ಅದು ಎಷ್ಟರ ಮಟ್ಟಿಗೆ ಸತ್ಯ. ಯಾವುದೇ ಕಾಮಗಾರಿಯನ್ನು ಪೂರ್ಣಗೊಳಿಸಲಿಕ್ಕೆ ಒಂದು ದಿನಾಂಕವನ್ನು ನಿಗದಿ-ಪಡಿಸಿ ಅದರ ಪ್ರಕಾರ ನಾವು ಇಂತಹ ದಿವಸ ನೀರನ್ನು ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಬೇಕೆಂದು ನಾನು ಇಚ್ಛೆಪಡುತ್ತೇನೆ. ಮತ್ತು ಅದೇ ರೀತಿ ಇವೊತ್ತು ಎಲ್ಲಿ ನೋಡಿದರೂ ಕೂಡ ನಗರದಲ್ಲಿ ಎಲೆಕ್ಟ್ರಿಸಿಟಿಯ ಒಂದು ಕಂಬವನ್ನು ಕಿತ್ತು ಇನ್ನೊಂದು ಕಡೆ ಹಾಕಬೇಕು ಎಂದರೆ ಒಂದು ಸಾವಿರದಿಂದ ಒಂದು ಸಾವಿರದ ಇನ್ನೂರು ರೂಪಾಯಿ ಹಣ ಕೊಡಬೇಕಾಗುತ್ತದೆ. ಆದರೆ ಕೆ.ಇ.ಬಿ. ಯವರು ನಗರಸಭೆಯವರಿಗೆ ಬಾಡಿಗೆಯನ್ನು ಕೊಡುವುದಿಲ್ಲ. ಆದರೆ ಕಂಬವನ್ನು ಕಿತ್ತು ಬೇರೆ ಕಡೆ ಹಾಕಬೇಕೆಂದರೆ ಹಣವನ್ನು ಕೇಳುತ್ತಾರೆ. ಇವೊತ್ತು ಎಕ್ಸ್‌ಟೆನ್‌ಶ್ನ್ ಆಗಿರತಕ್ಕಂಥ ಏರಿಯಾಗಳಲ್ಲಿ ಹೊಸ ಕಂಬಗಳನ್ನು ಹಾಕಬೇಕಾದರೂ ಕೂಡ ಹಣವನ್ನು ಕೊಡಬೇಕು ಎನ್ನುವ ಕಿರಿಕಿರಿ ಇದೆ. ಈ ನಗರಸಭೆಯಿಂದ ಜನಗಳಿಗೆ ಒದಗಿಸಬೇಕಾದ ಸೌಲಭ್ಯಗಳನ್ನು ಒದಗಿಸದೇ ಇರುವಂಥ ಪರಿಸ್ಥಿತಿ-ಯನ್ನೂ ಇವೊತ್ತು ನಾವು ನೋಡುತ್ತಿದ್ದೇವೆ. ಆದ್ದರಿಂದ ಹೆಚ್.ಯು.ಡಿ. ಮಂತ್ರಿಗಳು ಕೆ.ಇ.ಬಿ.ರವ-ರೊಂದಿಗೆ ವ್ಯವಹರಿಸಿ ಒಂದೊಂದು ಕಂಬಕ್ಕೆ ಸಾವಿರ, ಸಾವಿರದ ಇನ್ನೂರು ರೂಪಾಯಿಗಳನ್ನು ಏನು ಕೇಳುತ್ತಿದ್ದಾರೆ ಅದನ್ನು ಕೇಳದ ರೀತಿಯಲ್ಲಿ ಕೇವಲ ನಾಮಿನಲ್ ಆಗಿ ಐವತ್ತೋ, ನೂರೋ ರೂಪಾ-ಯಿಗಳನ್ನು ವಸೂಲು ಮಾಡಿ ಎಲೆಕ್ಟ್ರಿಸಿಟಿಯನ್ನು ಒದಗಿಸತಕ್ಕಂಥ ಒಂದು ಕೆಲಸವನ್ನು ಮಾಡುವ ರೀತಿ ಮಾನ್ಯ ಮಂತ್ರಿಗಳು ತಮ್ಮ ವರ್ಚಸ್ ಅನ್ನು ಬೀರಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿ ಆಶ್ರಯ ಯೋಜನೆ. ಪಟ್ಟಣಗಳಲ್ಲಿ ಆಶ್ರಯ ಯೋಜನೆಯಡಿಯಲ್ಲಿ ಸೈಟ್ ಇಲ್ಲದ-ವರಿಗೆಲ್ಲರಿಗೂ ಕೂಡ ನಾವು ಸೈಟ್‌ಗಳನ್ನು ಕೊಡುತ್ತೇವೆ, ಮನೆಗಳನ್ನು ಕೂಡ ಕಟ್ಟಿಸಿಕೊಡುತ್ತೇವೆ ಎಂದು ಸರ್ಕಾರದವರು ಆಶ್ವಾಸನೆಯನ್ನು ಕೊಟ್ಟುಕೊಂಡು ಬರುತ್ತಿದ್ದಾರೆ. ಆದರೆ ಉದಾಹರಣೆಗೆ ನಮ್ಮ ದಾವಣಗೆರೆಯನ್ನು ತೆಗೆದುಕೊಂಡರೆ ಇವೊತ್ತಿನ ದಿವಸ ಹಿಂದೆ ಇದ್ದಂಥ ಸರ್ಕಾರದವರು ಕೇವಲ 1100 ಸೈಟ್‌ಗಳನ್ನು ಮಾತ್ರ ಹಂಚಿದ್ದರು. ಆದರೆ ಅದರಲ್ಲೂ ಕೂಡ ಲಿಸ್ಟ್‌ನಲ್ಲಿ ಇರುವುದೇ ಒಬ್ಬರ ಹೆಸರು, ಆ ಪತ್ರವನ್ನು ಕೊಟ್ಟಿರುವುದೇ ಇನ್ನೊಬ್ಬರ ಹೆಸರಿಗೆ, ಈ ರೀತಿ ಅನೇಕ ದುರ್ವ್ಯವ-ಹಾರಗಳು ನಡೆಯುತ್ತಿರುವುದನ್ನು ನಾವು ಇವೊತ್ತು ನೋಡುತ್ತಿದ್ದೇವೆ. ಇಂತಹ ಪರಿಸ್ಥಿತಿಯಲ್ಲಿ

ಆಶ್ರಯ ಯೋಜನೆ ಇದೆ. ಮೊದಲು ಆಶ್ರಯ ಯೋಜನೆಗೆ ಶಾಸಕರು ಅಧ್ಯಕ್ಷರಾಗಿರುತ್ತಿದ್ದರು, ಆದರೆ ಈಗ ನಾವು ಶಾಸಕರನ್ನು ನಂಬುವುದಿಲ್ಲ ಅಧಿಕಾರಿಗಳನ್ನು ನಂಬುತ್ತೇವೆಂದು ಸರ್ಕಾರ ಅಧಿಕಾರಿಗಳಿಗೆ ಅದನ್ನೆಲ್ಲಾ ವಹಿಸಿಕೊಟ್ಟಿದೆ ಆದರೆ ಅಧಿಕಾರಿಗಳು ಎಷ್ಟೊಂದು ಸೈಟ್‌ಗಳನ್ನು ಕೊಟ್ಟಿದ್ದಾರೆ. ಅವುಗಳ ಪ್ರಯೋಜನ ಏನಾದರೂ ಜನಗಳಿಗೆ ಮುಟ್ಟಿದೆಯೋ ಎಂದು ನೋಡಿದರೆ ಶೂನ್ಯ ಎಂದು ಹೇಳ-ಬಹುದೇ ಹೊರತು ಈ ಸರ್ಕಾರ ಬಂದು ಒಂದೂವರೆ ವರ್ಷವಾದರೂ ಕೂಡ ಇದುವರೆಗೆ ಒಂದೂ ಸೈಟ್ ವಿತರಣೆಯಾಗದೇ ಇರತಕ್ಕ ಈ ಒಂದು ಪರಿಸ್ಥಿತಿ ಇವೊತ್ತು ಇದೆ. ಇವೊತ್ತು ಡೆವಲಪ್-ಮೆಂಟ್ ಅಥಾರಿಟಿಗಳನ್ನು ಪ್ರಾರಂಭ ಮಾಡಿದ್ದಾರೆ. ಅದರಲ್ಲಿ ಎಷ್ಟು ಜನರಿಗೆ ಸೈಟ್‌ಗಳನ್ನು ವಿತರಣೆ ಮಾಡಿದ್ದಾರೆ? ಎಷ್ಟು ಲ್ಯಾಂಡನ್ನು ಅಕ್ವೈರ್ ಮಾಡಿದ್ದಾರೆ? ಖರೀದಿ ಮಾಡಿದ್ದಾರೆ? ಎಷ್ಟು ಜನರಿಗೆ ಅಕ್ವೈರ್ ಮಾಡಿರುವಂಥವರಿಗೆ ಹಣವನ್ನು ಕೊಟ್ಟಿದ್ದಾರೆ? ಹತ್ತು ಹನ್ನೆರಡು ವರ್ಷಗಳಾದರೂ ಕೂಡ ಅವರಿಗೆ ಹಣವನ್ನು ಕೊಡದೇ ಇರತಕ್ಕಂಥ ಪರಿಸ್ಥಿತಿಯನ್ನು ಇವೊತ್ತು ನಾವು ದಾವಣಗೆರೆಯಲ್ಲಿ ನೋಡುತ್ತಿದ್ದೇವೆ. ಇವೊತ್ತು ಜನಗಳು ನಮಗೆಲ್ಲಾ ಸೈಟ್‌ಗಳು ಸಿಗುತ್ತವೆ, ಎಂದು ತುಂಬಾ ಅಪೇಕ್ಷೆ-ಯನ್ನು ಇಟ್ಟುಕೊಂಡಿದ್ದಾರೆ. ಆದರೆ ಅವರಿಗೆ ಸೈಟೂ ಇಲ್ಲ, ಮನೆಯೂ ಇಲ್ಲ, ಎರಡೂ ಇಲ್ಲ, ಅಂತಹ ದುಸ್ಥಿತಿಯನ್ನು ಇಂದು ನಾವು ನೋಡುತ್ತಿದ್ದೇವೆ. ಆದಕಾರಣ ಸೂರು ಅಥವಾ ಆಶ್ರಯ ಯೋಜನೆ ಯಾವುದಾದರೊಂದು ಹೆಸರಿನಲ್ಲಿ ಬಡವರಿಗೆ ಕೆಳವರ್ಗದವರಿಗೆ ಈ ಸೈಟುಗಳನ್ನು ಕೊಟ್ಟು ಅವರಿಗೆ ಕಟ್ಟಿಸಿಕೊಡತಕ್ಕಂಥ ಒಂದು ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ.

ಇನ್ನು ಇವೊತ್ತು ಬೇಕಾದಷ್ಟು ಸ್ಲಮ್‌ಗಳು ಇವೆ. ಅವುಗಳ ಅಭಿವೃದ್ಧಿಯಂತೂ ಆಗಿಲ್ಲ. ಇವತ್ತು ಎಲ್ಲಿ ಸ್ಲಮ್‌ಗಳಿವೆ ಅಲ್ಲಿ ಬೋರವೆಲ್ ಹಾಕಿಸುತ್ತೇವೆ, ಲೈಟ್ ಹಾಕಿಸುತ್ತೇವೆ ಎಂದು ಸರ್ಕಾರದವರು ಹೇಳುತ್ತಾರೆ. ಆದರೆ ಬೇರೆ ಕಡೆ ಅವರಿಗೆ ಸೈಟ್‌ಗಳನ್ನು ಕೊಟ್ಟು ಆ ಸ್ಲಮ್‌ಗಳನ್ನು ನಿರ್ನಾಮ ಮಾಡ-ತಕ್ಕಂಥ ಒಂದು ವ್ಯವಸ್ಥೆಯನ್ನು ಹಮ್ಮಿಕೊಳ್ಳತಕ್ಕಂಥ ಒಂದು ಪರಿಸ್ಥಿತಿ ಇವತ್ತು ಬಂದಿದೆ. ಆ ಸ್ಲಮ್-ಗಳು ಇಲ್ಲದಂಥ ರೀತಿಯಲ್ಲಿ ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಆಡಳಿತದ ದೃಷ್ಟಿಯಿಂದ ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದಿರುವಂಥ ಜಿಲ್ಲಾ ಕೇಂದ್ರ-ಗಳನ್ನು ಹೆಚ್ಚು ಮಾಡುತ್ತೇವೆಂದು ಪ್ರತಿಯೊಂದು ಸರ್ಕಾರದವರು ಹೇಳಿಕೊಂಡು ಬರುತ್ತಿದ್ದಾರೆ. ಕಳೆದ ವರ್ಷ ನಮ್ಮ ರೆವಿನ್ಯೂ ಮಿನಿಸ್ಟರ್ ಆಗಿರತಕ್ಕಂಥ ಜಾಲಪ್ಪನವರೂ ಕೂಡ ಈ 1996ನೇ ಸಾಲಿನಲ್ಲಿ ನಾವು ಜಿಲ್ಲೆಗಳನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಭೆಯಲ್ಲಿ ಹೇಳಿದ್ದರು. ಮತ್ತು ಮೊನ್ನೆ ದಾವಣಗೆರೆಯಲ್ಲಿ ನಡೆದ ಜನತಾದಳದ ಸಭೆಯಲ್ಲಿ ಕೂಡ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಅತಿ ಶೀಘ್ರದಲ್ಲಿ ಈ ಜಿಲ್ಲೆಗಳನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಈ ಜಿಲ್ಲೆಗಳನ್ನು ಮಾಡತಕ್ಕಂಥ ಅವಶ್ಯಕತೆ ಎಷ್ಟಿದೆ ಎಂಬ ಅಂಶವನ್ನು ಸರ್ಕಾರಕ್ಕೆ ಮನವರಿಕೆ ಮಾಡಲು ನಾನು ಬಯಸುತ್ತೇನೆ. ತಮಗೆ ತಿಳಿದಿರುವ ಹಾಗೆ ತಮಿಳುನಾಡಿನಲ್ಲಿ ಎರಡು ವರ್ಷಕ್ಕೊಮ್ಮೆ, ಮೂರು

ವರುಷಕ್ಕೊಮ್ಮೆ ಎರಡೆರಡು ಜಿಲ್ಲೆಗಳು ಹೆಚ್ಚು ಆಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಬಿಹಾರ-ದಂಥ ಹಿಂದುಳಿದ ರಾಜ್ಯದಲ್ಲೇ ಮೊದಲು 24 ರಿಂದ 26 ಜಿಲ್ಲೆಗಳಿದ್ದದ್ದು ಇವೊತ್ತಿನ ದಿವಸ 80 ಜಿಲ್ಲೆಗಳು ಇರುವುದನ್ನು ನಾವು ನೋಡುತ್ತಿದ್ದೇವೆ. ಆದರೆ ಕರ್ನಾಟಕದಲ್ಲಿ ಚಿಕ್ಕ ಜಿಲ್ಲೆಯಾದಂಥ ಬೀದರ್ ಜಿಲ್ಲೆ ಮತ್ತು 18 ಕ್ಷೇತ್ರಗಳನ್ನೊಳಗೊಂಡ ಧಾರವಾಡ ಜಿಲ್ಲೆಯನ್ನೂ ಕೂಡ ನಾವು ನೋಡುತ್ತೇವೆ. ಆ ದಿಸೆಯಲ್ಲಿ ತಕ್ಷಣ 5 ಜಿಲ್ಲೆಗಳನ್ನು ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇದಕ್ಕೆ ಪೂರ್ವಭಾವಿಯಾಗಿ ಅಲ್ಲಿಗೆ ಬೇಕಾಗಿರತಕ್ಕಂಥ ಮಿನಿ ವಿಧಾನಸೌಧವನ್ನು ಮತ್ತು ಕಛೇರಿಗಳಿಗೆ ಬೇಕಾಗಿರತಕ್ಕಂಥ ಕಟ್ಟಡಗಳ ಬಗ್ಗೆ ವ್ಯವಸ್ಥೆಯನ್ನು ಶೀಘ್ರವೇ ಹಾಕಿಕೊಂಡು ಮುಂದೆ ಜಿಲ್ಲೆಯಾದಾಗ ನಮಗೆ ಜಾಗದ ಕೊರತೆ ಇದೆ ಮತ್ತೇನೋ ಕೊರತೆ ಇದೆ ಎನ್ನುವ ಪರಿ-ಪಾಠಕ್ಕೆ ಹೋಗದೇ ಕೂಡಲೇ ಮುಂಜಾಗ್ರತೆಯನ್ನು ವಹಿಸಿ ಈ ಒಂದು ವ್ಯವಸ್ಥೆಯನ್ನು ಮಾಡಿ ಜಿಲ್ಲೆಗಳನ್ನು ಆದಷ್ಟು ಶೀಘ್ರವಾಗಿ ಮಾಡಿ ಆಡಳಿತ ಯಂತ್ರವನ್ನು ಚುರುಕುಗೊಳಿಸಬೇಕೆಂದು ಅತಿ ವಿನಯದಿಂದ ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಅದೇ ರೀತಿ ಹಿಂದೆ ಗೃಹ ಸಚಿವರಾಗಿದ್ದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು 20 ಪೋಲಿಸ್ ಠಾಣೆಗಳನ್ನು ಮಾಡುತ್ತೇವೆಂದು ಹೇಳಿದ್ದರು. ಆಗ ನಾವು ಹೇಳಿದ್ದೆವು, ಇನ್ನೂ ಹತ್ತಿಪ್ಪತ್ತು ಪೋಲಿಸ್ ಠಾಣೆಗಳನ್ನು ಹೆಚ್ಚು ಮಾಡಿ ಅದರಲ್ಲೂ ಸೆನ್ಸಿಟಿವ್ ಪ್ರದೇಶಗಳಲ್ಲಿ ಆದಷ್ಟು ಶೀಘ್ರವಾಗಿ ಪೋಲಿಸ್ ಠಾಣೆಗಳನ್ನು ತೆಗೆಯಿರಿ ಎಂದು ಹೇಳಿದ್ದೆವು. ಆದರೆ ಇದುವರೆಗೂ ಕೂಡ ಹೊಸ ಪೋಲಿಸ್ ಠಾಣೆಗಳನ್ನು ಎಲ್ಲಿ ಮಾಡಿದ್ದಾರೋ ಗೊತ್ತಿಲ್ಲ. ಅಂಥ ಪರಿ-ಸ್ಥಿತಿಯನ್ನು ನಾವು ಇಂದು ನೋಡುತ್ತಿದ್ದೇವೆ. ತಮಗೆಲ್ಲಾ ತಿಳಿದಿರುವ ಹಾಗೆ ದಾವಣಗೆರೆ ತುಂಬಾ ಸೆನ್ಸಿಟಿವ್ ಪ್ರದೇಶ. ಆದ್ದರಿಂದ ನಾವು ಈಗಾಗಲೇ ಬರೆದುಕೊಟ್ಟಿರುವಂತೆ ಆ ಪ್ರದೇಶದಲ್ಲಿ ಎರಡು ಅಥವಾ ಮೂರು ಪೋಲಿಸ್ ಠಾಣೆಗಳನ್ನು ತೆರೆಯಬೇಕೆಂದು ಇಂದಿನ ಗೃಹ ಮಂತ್ರಿಗಳಿಗೆ ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ತಮಗೆಲ್ಲರಿಗೂ ತಿಳಿದಂತೆ ವಿದ್ಯಾಕ್ಷೇತ್ರದಲ್ಲಿ ಹಲವಾರು ಜನರು ಸೇವೆ ಸಲ್ಲಿಸಿದ್ದಾರೆ. ಈಗಾಗಲೇ ನನ್ನ ಹಲವು ಸ್ನೇಹಿತರುಗಳು ವಿದ್ಯಾಕ್ಷೇತ್ರದ ಬಗ್ಗೆ ಮಾತನಾಡಿದ್ದಾರೆ. ಆದರೆ ವಿದ್ಯಾ-ಕ್ಷೇತ್ರದಲ್ಲಿ ಅನೇಕ ಜನ ಸ್ವಾಮಿಗಳು, ಮಠಾಧೀಶರೂ ಮತ್ತು ಪ್ರೈವೇಟ್ ಏಜೆನ್ಸಿಯವರು ಮಾಡಿರ-ತಕ್ಕಂಥ ಒಳ್ಳೆಯ ಕೆಲಸವನ್ನು ಮತ್ತು ಶ್ಲಾಘನೀಯವಾದ ಕೆಲಸಗಳ ಬಗ್ಗೆ ಇವೊತ್ತಿನ ದಿವಸ ಯಾರೂ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸದೇ ಇರತಕ್ಕಂಥದ್ದರ ಬಗ್ಗೆ ತುಂಬಾ ವ್ಯಥೆಯಾಗತಕ್ಕಂಥ ಪರಿಸ್ಥಿತಿ-ಯನ್ನು ನಾವು ನೋಡುತ್ತಿದ್ದೇವೆ. ಸರ್ಕಾರ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ 1896ನೇ ಇಸ-ವಿಯಲ್ಲಿ ಹಾನಗಲ್‌ನ ಕುಮಾರಸ್ವಾಮಿಯವರು ಪ್ರಾಥಮಿಕ ಶಾಲೆ ಮತ್ತು ಪ್ರೌಢಶಾಲೆಗಳನ್ನು ಸ್ಥಾಪನೆ ಮಾಡಿ ಅಲ್ಲಿನ ಹಿಂದುಳಿದ ಜನತೆಗೆ ವಿದ್ಯಾಭ್ಯಾಸವನ್ನು ಕೊಟ್ಟಂಥ ಪರಿಸ್ಥಿತಿಯನ್ನು ನಾವು ಇವೊತ್ತು ಯೋಚನೆ ಮಾಡಬೇಕು. ಅದೇ ರೀತಿ 1912ನೇ ಇಸವಿಯಲ್ಲಿ ಕೆ.ಎಲ್.ಇ. ಸೊಸೈಟಿಯವರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿ ದೊಡ್ಡದಾಗಿ ಎಲ್ಲ ಭಾಗದ ಜನಗಳಿಗೆ ವಿದ್ಯಾರ್ಜನೆಯನ್ನು ಕೊಟ್ಟಿ-ರುವುದನ್ನು ನಾವು ಯೋಚನೆ ಮಾಡಬೇಕು. ಅದೇ ರೀತಿಯಾಗಿ ನಮ್ಮ ಹಳೇ ಮೈಸೂರಿನ ಭಾಗದಲ್ಲಿ

ಸಿರಿಗೆರೆ ಸ್ವಾಮಿಗಳು, ಮುರುಗೇ ಸ್ವಾಮಿಗಳು, ತುಮಕೂರಿನ ನಮ್ಮ ಗಂಗಾಧರಪ್ಪನವರು ಎಷ್ಟೊಂದು ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆದು ವಿದ್ಯೆ ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ಹುಬ್ಬಳ್ಳಿ ಮೂರು ಸಾವಿರ ಮಠ, ಹಾನಗಲ್ ಸ್ವಾಮಿಗಳು, ನಾಗನೂರು ಸ್ವಾಮಿಗಳು ಮತ್ತು ಇನ್ನೂ ಅನೇಕ ಮಠಾಧೀಶರು ಮಾಡಿರತಕ್ಕಂಥ ಒಂದು ಒಳ್ಳೆಯ ಕೆಲಸವನ್ನು ಮತ್ತು ಶ್ಲಾಘನೀಯವಾದ ಕೆಲಸಗಳ ಬಗ್ಗೆ ಸರ್ಕಾರ ಮಾಡದೇ ಇರತಕ್ಕಂಥ ಸಂದರ್ಭದಲ್ಲಿ ಮಾಡಿರುವಾಗ ಅವುಗಳ ಬಗ್ಗೆ ಯಾವೊಬ್ಬ ಸದಸ್ಯರಾದರೂ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸದೇ ಇರುವಂಥ ಪರಿಸ್ಥಿತಿಯನ್ನು ನೋಡಿದರೆ ನನಗೆ ವ್ಯಸನವಾಗುತ್ತದೆ. ಇದು ನನ್ನ ಅಭಿಪ್ರಾಯ. ಇಂಥ ವ್ಯವಸ್ಥೆಯನ್ನು ಸರ್ಕಾರ ಒಪ್ಪಿಕೊಂಡು ಬಂದಿದೆ. ಪ್ರೈವೇಟ್ ಕಾಲೇಜುಗಳನ್ನು ನಡೆಸತಕ್ಕಂಥ ಮತ್ತು ಅದಕ್ಕೆ ಟೆಕ್ನಿಕಲ್ ಕೋರ್ಸ್‌ಗಳು ಎಂದು ನಾವು ಏನು ಹೇಳುತ್ತೇವೋ ಮೆಡಿಕಲ್ ಆಗಲೀ, ಡೆಂಟಲ್ ಆಗಲೀ ಅಥವಾ ಇಂಜಿನಿಯರಿಂಗ್ ಆಗಲೀ ಈ ಕಾಲೇಜುಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಅನುಮತಿಯನ್ನು ಕೊಟ್ಟಾದ ಮೇಲೆ ಕಾಲೇಜುಗಳನ್ನು ನಡೆಸತಕ್ಕಂಥ ಮ್ಯಾನೇಜ್‌ಮೆಂಟಿನವರು ಈಗಿರತಕ್ಕಂಥ ದುಸ್ಥಿತಿ ಬರುತ್ತದೆ ಎಂದು ಅಂದು ಅವರು ನಂಬಿರಲಿಲ್ಲ. ಇವರು ಮುಂದಾಲೋಚನೆಯನ್ನು ಮಾಡಿರಲಿಲ್ಲ. ಅನೇಕ ವರ್ಷಗಳ ಹಿಂದೆ ಇಂಜಿನಿಯರಿಂಗ್ ಕಾಲೇಜುಗಳನ್ನು ತೆರೆದಿರತಕ್ಕಂಥ ವ್ಯವಸ್ಥೆಯನ್ನು ನಾವು ನೋಡುತ್ತಿದ್ದೇವೆ. ಇದರಲ್ಲಿ ಬಿ.ಎಂ.ಎಸ್. ಕಾಲೇಜಿನವರಾಗಲೀ ಅಥವಾ ಜಿ.ಎಸ್.ಎಸ್. ಕಾಲೇಜಿನವರಾಗಲೀ ಅವ-ರೆಲ್ಲಾ ಕಾಲೇಜನ್ನು ತೆಗೆದಾಗ ಇಂಜಿನಿಯರಿಂಗ್ ಕಾಲೇಜುಗಳಿಗೆ ಕೆಲವು ವರ್ಷ ಫೀಸನ್ನೂ ಕೂಡ ಮ್ಯಾನೇಜ್‌ಮೆಂಟಿನವರೇ ಕಟ್ಟಿ ಕಾಲೇಜಿಗೆ ಸೇರಿಸಿಕೊಂಡಿರುವ ಪರಿಸ್ಥಿತಿಯನ್ನು ನಾವು ನೋಡಿದ್ದೇವೆ. ಮತ್ತು ಅದೇ ರೀತಿ ಬಡವರಿಗೆ ಮತ್ತು ತಮಗೆ ಬೇಕಾದವರಿಗೆ ಸೀಟುಗಳನ್ನು ಕೊಟ್ಟು ಇವೊತ್ತು ಅಂಥವರು ದೇಶದ ಅತ್ಯುತ್ತಮ ಪ್ರಜೆಗಳಾಗಿ ನಾಳೆ ಕರ್ನಾಟಕದ ಪತಾಕೆಯನ್ನು ಎತ್ತಿ ಹಿಡಿಯ-ತಕ್ಕಂಥ ಇಂಜಿನಿಯರ್‌ಗಳನ್ನು ತಯಾರು ಮಾಡಿರತಕ್ಕಂಥ ಸಂಸ್ಥೆಗಳು ಮತ್ತು ಅಂಥ ಸಂಸ್ಥೆಗಳಿಂದ ಬಂದಿರತಕ್ಕಂಥವರು ಇವೊತ್ತಿನ ದಿವಸ ಅತ್ಯುತ್ತಮ ಇಂಜಿನಿಯರುಗಳಾಗಿದ್ದಾರೆ ಎಂಬುದನ್ನು ನಾವು ಮರೆಯಬಾರದು. ಅದೇ ರೀತಿ ಮೆಡಿಕಲ್ ಕಾಲೇಜನ್ನು ತೆರೆದಾಗ ಕೇವಲ 2 ಸಾವಿರ ರೂಪಾಯಿ-ಗಳಿಗೆ ಪೈ ರವರು ಹಳ್ಳಿಹಳ್ಳಿಗಳಿಗೆ ಮತ್ತು ಮನೆಮನೆಗಳಿಗೆ ಹೋಗಿ ಮುಂದಿನ ವರ್ಷ ನಿಮ್ಮ ಮಗನನ್ನು ಡಾಕ್ಟರ್ ಮಾಡಿ, ನಮ್ಮ ಕಾಲೇಜಿಗೆ ಸೇರಿಸಿರಿ ಎಂದು ಹೇಳಿಕೊಂಡು ಹಳ್ಳಿಹಳ್ಳಿಗಳಿಗೆ ಪ್ರಯಾಣ ಮಾಡಿ ಸೀಟ್‌ಗಳನ್ನು ರಿಸರ್ವ್ ಮಾಡಿ ಆ ಭಾಗದ ಜನಗಳನ್ನು ಡಾಕ್ಟರ್‌ಗಳನ್ನಾಗಿ ಮಾಡಿ ಆ ಒಂದೊಂದು ಮನೆತನದವರನ್ನೂ ಕೂಡ ಉದ್ಧಾರ ಮಾಡಿರತಕ್ಕಂಥ ಪರಿಸ್ಥಿತಿಯನ್ನು ನಾವು ನೋಡ ಬೇಕಾಗುತ್ತದೆ. ಇವೊತ್ತಿನ ದಿವಸ ಯಾವುದೇ ಪ್ರೈವೇಟ್ ಕಾಲೇಜುಗಳನ್ನು ತೆಗೆದುಕೊಂಡು ಅದನ್ನು ಸರ್ಕಾರದ ಕಾಲೇಜಿಗೆ ಹೋಲಿಸಿ ನೋಡಿದರೆ ಅಂತರ ಬಹಳ ಜಾಸ್ತಿ ಇದೆ. ಇವೊತ್ತಿನ ದಿವಸ ಯಾವುದೇ ಸರ್ಕಾರೀ ಆಸ್ಪತ್ರೆಗಳನ್ನು ತೆಗೆದುಕೊಂಡರೂ ಇದರಲ್ಲಿ 'ನಿಮಾನ್ಸ್' ಒಂದನ್ನು ಬಿಟ್ಟರೆ ಬೇರೆ ಯಾವುದೇ ಸರ್ಕಾರೀ ಆಸ್ಪತ್ರೆಯಲ್ಲಿ ಅತ್ಯುತ್ತಮವಾದ ಉಪಕರಣಗಳನ್ನು ಹೊಂದಿಲ್ಲ ಎಂದರೆ ತಪ್ಪಾಗಲಾರದು. ಏಕೆಂದರೆ ಇವೊತ್ತಿನ ದಿವಸ ಪ್ರೈವೇಟ್ ಕಾಲೇಜುಗಳಲ್ಲಿ ಸ್ಕ್ಯಾನಿಂಗ್, ಓಪನ್

ಹಾರ್ಟ್ ಸರ್ಜರಿಯಂಥ ಆಧುನಿಕ ಸಲಕರಣೆಗಳು ಇರತಕ್ಕ ವ್ಯವಸ್ಥೆಯನ್ನು ನಾವು ಇಂದು ನೋಡುತ್ತಿದ್ದೇವೆ. ಸರ್ಕಾರ ಈ ನಿಟ್ಟಿನಲ್ಲಿ ಬಡವರಿಗೆ ಆದರಲ್ಲೂ ಜಿಲ್ಲಾ ಆಸ್ಪತ್ರೆಗಳು ಏನು ಇರುತ್ತವೆ ಅಲ್ಲಿ ಈ ಸ್ಕ್ಯಾನಿಂಗ್ ಮೆಶಿನ್‌ಗಳನ್ನು ಮತ್ತು ಅತ್ಯುತ್ತಮವಾದ ಸಲಕರಣೆಗಳನ್ನು ಮತ್ತು ಉಪಕರಣ-ಗಳನ್ನು ಒದಗಿಸಿ ಅಲ್ಲಿರತಕ್ಕಂಥ ಹಳ್ಳಿಗಾಡಿನ ಜನಗಳ ಆರೋಗ್ಯ ಉತ್ತಮವಾಗಿರಲು ಹೆಚ್ಚಿನ ಆರೋಗ್ಯ ಸೇವೆಯನ್ನು ಕೊಡಲು ಕ್ರಮಗಳನ್ನು ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ಯಾವುದೇ ಸರ್ಕಾರೀ ಆಸ್ಪತ್ರೆಯಲ್ಲಿ ಔಷಧಿಗಳ ಬಗ್ಗೆ ಕಣ್ಣು ಹರಿಸಿದಾಗ, ಉದಾ-ಹರಣೆಗೆ ದಾವಣಗೆರೆಯ ಚಿಟಗೇರಿ ಜನರಲ್ ಆಸ್ಪತ್ರೆಯನ್ನು ತೆಗೆದುಕೊಂಡರೆ ಅಲ್ಲಿಗೆ ಕಳೆದ ವರ್ಷ 37 ಲಕ್ಷ ರೂಪಾಯಿಗಳನ್ನು ಔಷಧಿಗಳಿಗಾಗಿ ಒದಗಿಸಿತ್ತು. ಆದರೆ ಈ ವರ್ಷ ಕೇವಲ 7 ಲಕ್ಷ ರೂಪಾಯಿಗಳನ್ನು ಒದಗಿಸಿದೆ. ಒಂದು ಕಡೆ ಔಷಧಿಗಳ ಬೆಲೆಗಳು ಸುಮಾರು 20 ರಿಂದ 30 ಪರ್ಸೆಂಟ್ ಹೆಚ್ಚಾಗುತ್ತಿದೆ. ಇಂಥ ಸನ್ನಿವೇಶವಿರುವಾಗ ಇವರು ಮಾಡುವ ಅಲಾಟ್‌ಮೆಂಟ್ ಕೂಡ ಕಡಿಮೆ ಮಾಡಿದರೆ ಜನಗಳಿಗೆ ಹೇಗೆ ಔಷಧಿಗಳು ದೊರೆಯುತ್ತದೆ ಎನ್ನುವುದನ್ನೂ ಮತ್ತು ಔಷಧಿಗಳು ದೊರಕದೇ ಇರುವ ಪರಿಸ್ಥಿತಿಯನ್ನೂ ಕೂಡ ನಾವು ನೋಡಬೇಕಾಗಿದೆ. ಆದ್ದರಿಂದ ಎಲ್ಲೆಲ್ಲಿ ಅತ್ಯವ-ಶ್ಯಕವಾಗಿ ಹೆಚ್ಚು ಔಷಧಿಗಳು ಬೇಕಾಗಿದೆಯೋ ಆ ಕಡೆ ಹೆಚ್ಚಿನ ಹಣವನ್ನು ಒದಗಿಸಿ ಒಳ್ಳೆಯ ಗುಣ-ಮಟ್ಟದ ಔಷಧಿಗಳು ದೊರೆಯತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೆನ್ನುವ ವಿಚಾರಗಳನ್ನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ. ದಾವಣಗೆರೆಯಲ್ಲಿ 1962ನೇ ಇಸವಿಯಲ್ಲಿ ಅಲ್ಲಿರತಕ್ಕಂಥ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕಂಥ ಜನಗಳಿಗೆ ಕ್ವಾರ್ಟ್‌ಸ್ ಕಟ್ಟಬೇಕೆಂದು ಹೇಳಿ ದೊಡ್ಡದಾದ ಸೈಟ-ನ್ನು ಕೊಟ್ಟು 34 ವರ್ಷಗಳಾದರೂ ಕೂಡ ಇದುವರೆಗೂ ಆ ಜಾಗ ಹಾಗೇ ಇದೆ. ಅದರಲ್ಲಿ ಸದ್ಯ ಇನ್ನೂ ಗುಡಿಸಲುಗಳು ಬಂದಿಲ್ಲ. ಆದ್ದರಿಂದ ಈ ಸಾರಿಯಾದರೂ ಕೂಡ 800 ಕೋಟಿ ರೂ.ಗಳ ಹಣ ಏನು ವಿಶ್ವ ಬ್ಯಾಂಕ್‌ನಿಂದ ಬಂದಿದೆ ಎಂದು ಏನು ಹೇಳುತ್ತಿದ್ದಿರೋ ಇದರಲ್ಲಿ ಆ ನೌಕರರುಗಳಿಗೆ ವಸತಿಗಳನ್ನು ಕಟ್ಟಿಸಿ ಕೊಡತಕ್ಕಂಥ ಕಾರ್ಯವನ್ನು ಹಮ್ಮಿಕೊಂಡು ಅತಿ ಶೀಘ್ರದಲ್ಲಿಯೇ ಕ್ವಾರ್ಟ್-ಸ್‌ಗಳು ಅಲ್ಲಿ ಬರುವುದಕ್ಕೆ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಹೇಳುತ್ತೇನೆ.

10.20 ಎ.ಎಂ

ಮತ್ತು ಈಗ ರಾಜೀವ್‌ಗಾಂಧಿ ಹೆಲ್ತ್ ಯೂನಿವರ್ಸಿಟಿ ಎಂದು ಸರ್ಕಾರ ಏನು ಪ್ರಾರಂಭ ಮಾಡಿ-ದೆಯೋ ಇದು ಒಂದು ಒಳ್ಳೆಯ ಶ್ಲಾಘನೀಯವಾದ ಕೆಲಸವನ್ನು ಸರ್ಕಾರ ಮಾಡಿದೆ ಎಂದು ಹೇಳುವುದಕ್ಕೆ ನಾನು ಹಿಂದು ಮುಂದು ನೋಡುವುದಿಲ್ಲ. ಏಕೆಂದರೆ 1972ನೇ ಇಸವಿಯಲ್ಲಿ ಇಡೀ ಭಾರತದಲ್ಲಿ ಮೊಟ್ಟಮೊದಲಿಗೆ ಈ ಹೆಲ್ತ್ ಯೂನಿವರ್ಸಿಟಿಯನ್ನು ಮಾಡಬೇಕು ಎಂದು ಹೇಳಿ ದಿವಂಗತ ಹೆಚ್. ಸಿದ್ಧವೀರಪ್ಪನವರು ಪ್ರಯತ್ನ ಮಾಡಿದಾಗ ಆಗಲೇ ಈ ಹೆಲ್ತ್ ಯೂನಿವರ್ಸಿಟಿ ಆಗಿ ಬಿಡುತ್ತದೆ ಎನ್ನುವ ಭಾವನೆ ನಮ್ಮ ಕರ್ನಾಟಕದ ಜನರಿಗೆ ಬಂದಿತ್ತು. ಆದರೆ ಅವರು ದಿವಂಗತರಾದ ಮೇಲೆ 1996ನೇ ಇಸವಿಯಲ್ಲಿ ಸರ್ಕಾರ ಇದನ್ನು ಕೈಗೆತ್ತಿಕೊಂಡು ಆದರಲ್ಲೂ ನಮ್ಮ ಹೆಲ್ತ್

ಯೂನಿವರ್ಸಿಟಿಗೆ ನಾವು ಏನು act ಮಾಡಬೇಕು ಎಂದು ಇದ್ದೆವೋ ಅದನ್ನು ಕರ್ನಾಟಕದಿಂದ ಕಾಪಿ ಮಾಡಿಕೊಂಡು ಹೋಗಿ ಆಂಧ್ರದಲ್ಲಿ ಮತ್ತು ತಮಿಳುನಾಡಿನಲ್ಲಿ ಹೆಲ್ತ್ ಯೂನಿವರ್ಸಿಟಿ ಆಗಿದೆ, ತುಂಬಾ ನಿಧಾನವಾಗಿಯಾದರೂ ಕೂಡ ಈ ಹೆಲ್ತ್ ಯೂನಿವರ್ಸಿಟಿಯನ್ನು ನಮ್ಮಲ್ಲಿ ಮಾಡಿರುವುದು ಒಂದು ಒಳ್ಳೆಯ ಕೆಲಸ ಎಂದು ನನ್ನ ಭಾವನೆ. ನಿನ್ನೆ ನಮ್ಮ ಒಬ್ಬ ಸ್ನೇಹಿತರು ಮಾತನಾಡುತ್ತಿದ್ದರು. ಮೆಡಿಕಲ್ ಕಾಲೇಜಿನವರಿಗೆ ಹೆಚ್ಚಿನ ಸೀಟುಗಳನ್ನು ಸರ್ಕಾರ ಕೊಟ್ಟು ಅಲ್ಲಿ 200 ಕೋಟಿ ರೂಪಾಯಿ ಅವಾಂತರವಾಗಿದೆ, ಯಾರೋ ತಿಂದು ಹೋಗಿದ್ದಾರೆ ಎನ್ನುವ ರೀತಿಯಲ್ಲಿ ಹೇಳಿದ್ದನ್ನು ನಾವು ಕೇಳಿದ್ದೇವೆ. ಆದರೆ ಸರ್ಕಾರ ಕರ್ನಾಟಕದ ವಿದ್ಯಾರ್ಥಿಗಳಿಗೆ ಹೆಚ್ಚು ಸೀಟು ಸಿಗಲಿ ಎನ್ನುವ ಅಭಿಪ್ರಾಯದಿಂದ 1993ನೇ ಇಸವಿಯವರೆಗೂ ಏನು ಸೀಟುಗಳನ್ನು ಆ ಕಾಲೇಜ್‌ಗಳು ಪಡೆದಿದ್ದವು ಅದನ್ನೇ ಇಟ್ಟುಕೊಂಡು ಬಂದರೆ ಅಭ್ಯಂತರ ಇಲ್ಲ. ಇವತ್ತು ನಾವು ಮೆಡಿಕಲ್ ಕೌನ್ಸಿಲ್ ಮಾಡಿರತಕ್ಕಂಥ ಸೀಟುಗಳನ್ನು ನಿರ್ಬಂಧ ಮಾಡಿದರೆ 800 ಜನ ನಮ್ಮ ಕರ್ನಾಟಕದ ವಿದ್ಯಾರ್ಥಿಗಳಿಗೆ ಸೀಟು ದೊರಕದೆ ಇರುವಂತಹ ಪರಿಸ್ಥಿತಿ ಬರುತ್ತದೆ ಎಂದು ಸರ್ಕಾರ ಆ ಒಂದು ತೀರ್ಮಾನವನ್ನು ಮಾಡಿರುವುದು ನಮಗೆಲ್ಲಾ ಗೊತ್ತಿರತಕ್ಕಂಥ ವಿಷಯ. ನಾವು ಪೇಪರ್‌ನಲ್ಲಿ ಎಲ್ಲಾ ಓದಿದ್ದೇವೆ, ಮಹಾರಾಷ್ಟ್ರದಲ್ಲಾಗಲೀ, ತಮಿಳುನಾಡಿನಲ್ಲಾಗಲೀ ಅಥವ ಆಂಧ್ರದಲ್ಲಾಗಲೀ, ಈ ಮೆಡಿಕಲ್ ಸೀಟು, ಡೆಂಟಲ್ ಸೀಟು, ಇಂಜಿನೀಯರಿಂಗ್ ಸೀಟುಗಳನ್ನು ನಾನ್ ಕರ್ನಾಟಕದ ವಿದ್ಯಾರ್ಥಿಗಳಿಗೆ ಕೊಡತಕ್ಕಂಥ ಪದ್ಧತಿ ಇಲ್ಲ. ಆದರೆ ನಮ್ಮಲ್ಲಿ ಇರತಕ್ಕಂಥ ದೊಡ್ಡ ದೊಡ್ಡ ಬುದ್ಧಿವಂತ ವಕೀಲರು ಬೇರೆ ನಾನ್–ಕರ್ನಾಟಕದ ಜನರ ಮೇಲೆ ಇರತಕ್ಕಂಥ ಪ್ರೀತಿ ವಿಶ್ವಾಸದಿಂದ ಸುಪ್ರೀಂ ಕೋರ್ಟ್‌ನವರೆಗೂ ಹೋಗಿ 15 ಪರ್ಸೆಂಟ್ ನಾನ್–ಕರ್ನಾಟಕದವರಿಗೆ ಸೀಟು ಕೊಡಬೇಕು ಎನ್ನುವಂತಹ ಜಡ್ಜ್‌ಮೆಂಟ್ ಆಗಿರುವುದನ್ನು ಕೂಡ ನಾವು ನೋಡುತ್ತಿದ್ದೇವೆ. ಬೇರೆ ಯಾವ ರಾಜ್ಯಗಳಲ್ಲೂ ಈ ಪರಿಸ್ಥಿತಿ ಇಲ್ಲ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ 15 ಪರ್ಸೆಂಟ್ ಕೊಡಬೇಕು ಎನ್ನುವಂತಹ ಪರಿಸ್ಥಿತಿ ಇರುವುದರಿಂದ ಸರ್ಕಾರ ಬೇರೆ ರಾಜ್ಯಗಳಲ್ಲಿ ಏನು ನಡೆದಿದೆ ಅದನ್ನು ನೋಡಿ ಅದೇ ರೀತಿ ಒಂದು ಕಾಯಿದೆಯನ್ನು ಮಾಡಿದರೆ ಆ ಸೀಟುಗಳೂ ಕೂಡ ನಮ್ಮ ಕರ್ನಾಟಕದ ವಿದ್ಯಾರ್ಥಿಗಳಿಗೆ ದೊರೆಯುವಂತಹ ಒಂದು ಅವಕಾಶವಿರುವುದರಿಂದ ಸರ್ಕಾರ ಇದರ ಬಗ್ಗೆ ಯೋಚನೆ ಮಾಡಿ ಒಂದು ಕಾನೂನನ್ನಾದರೂ ತಂದು ಕರ್ನಾಟಕದ ವಿದ್ಯಾರ್ಥಿಗಳಿಗೆ ಸಿಗತಕ್ಕಂಥ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಮತ್ತು ನಿಮಗೆಲ್ಲಾ ಗೊತ್ತಿರುವ ಪ್ರಕಾರ ಇಂಜಿನಿಯರಿಂಗ್ ಕಾಲೇಜುಗಳಲ್ಲಿ 5 ಪರ್ಸೆಂಟ್ ಸೀಟುಗಳನ್ನು ಮ್ಯಾನೇಜ್‌ಮೆಂಟ್‌ಗೆ ಕೊಟ್ಟಿದ್ದಾರೆ. 5 ಪರ್ಸೆಂಟ್ ಎಂದರೆ ಒಂದೊಂದು ಬ್ರಾಂಚ್‌ನಲ್ಲಿ 30 ಅಥವಾ 40 ಸೀಟುಗಳು ಇರಬಹುದು. ಅದರಲ್ಲಿ ಎರಡು ಸೀಟು ಇವತ್ತಿನ ದಿವಸ ಮ್ಯಾನೇಜ್‌ಮೆಂಟ್‌ನವರಿಗೆ ಬರಬಹುದು. ಆ ಎರಡು ಸೀಟುಗಳಿಂದ ಕಾಲೇಜ್‌ನ್ನು ಒಂದು ಉತ್ತಮ ಮಟ್ಟದಲ್ಲಿ ನಡೆಸಬಹುದೇ ಎನ್ನುವುದನ್ನು ಕೂಡ ಸರ್ಕಾರ ಯೋಚನೆ ಮಾಡಬೇಕು. ಮತ್ತು ಸರ್ಕಾರ ಹಿಂದೆ 25 ಪರ್ಸೆಂಟ್ ಸೀಟುಗಳನ್ನು ಮ್ಯಾನೇಜ್‌ಮೆಂಟ್‌ನವರಿಗೆ ಕೊಡಬೇಕು, ಇನ್ನು 75 ಪರ್ಸೆಂಟ್ ಪೂರ್ತಿ ಕರ್ನಾಟಕ

ದವರಿಗೆ ಸೀಟುಗಳು ದೊರಕಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ. ಅದೇ ನಿರ್ಧಾರವನ್ನು ತೆಗೆದುಕೊಂಡು ಸರ್ಕಾರದ ಕಾಲೇಜುಗಳಿಗಿಂತ ಉತ್ತಮ ಗುಣಮಟ್ಟದಲ್ಲಿ ಇರುವಂತಹ ಈ ಪ್ರೈವೇಟ್ ಕಾಲೇಜುಗಳ ಮಟ್ಟ, ಇದರ ಸ್ಟಾಂಡರ್ಡ್ ಕಡಿಮೆ ಆಗದ ರೀತಿಯಲ್ಲಿ ಒಂದು ವ್ಯವಸ್ಥೆ-ಯನ್ನು ಸರ್ಕಾರ ಮಾಡಬೇಕು ಮತ್ತು ಮೈಸೂರಿನಲ್ಲಿ ಇರತಕ್ಕಂಥ ಯೂನಿವರ್ಸಿಟಿಯನ್ನು ಬೆಂಗಳೂರಿಗೆ ವರ್ಗ ಮಾಡಲಾಯಿತು ಎಂದು ನಮ್ಮ ಮಿತ್ರರು ಹೇಳಿದರು. ನಾವೂ ಸಹ ಮೆಡಿಕಲ್ ಹೆಲ್ತ್ ಯೂನಿವರ್ಸಿಟಿಯನ್ನು ದಾವಣಗೆರೆಗೆ ಕೊಡಿ ಎಂದು ಕೇಳಿದ್ದೆವು. ಅವರು ಮೈಸೂರಿನ ಪ್ರತಿನಿಧಿ ಮೈಸೂರಿಗೆ ಬರಲಿ ಎಂದು ಅವರಿಗೆ ಆಸೆ. ಆದರೆ ನಮಗೆ ನಮ್ಮಲ್ಲಿ ಬರಲಿ ಎಂದು ಆಸೆ. ಆದರೆ ಇವತ್ತಿನ ದಿವಸ ಅದನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡಿರುವುದು ಸಂತೋಷ. ಅದು ನಮಗೆ ದೊರಕದೇ ಇದ್ದರೂ ಕೂಡ ಒಂದು ಅತ್ಯುತ್ತಮವಾದ ಕೆಲಸ ಎಂದು ನನ್ನ ಭಾವನೆ. ಏಕೆಂದರೆ ಗುಲ್ಬರ್ಗ, ಬೀದರ್ ಮತ್ತು ಬೆಳಗಾಂ ಕಡೆಗಳಿಂದ ಬರತಕ್ಕಂಥ ಜನ ಮೈಸೂರಿಗೆ ಹೋಗಬೇಕಾಗುತ್ತಿತ್ತು. ಅದರ ಬದಲಾಗಿ ಬೆಂಗಳೂರಿನಲ್ಲಿ ಹೆಚ್ಚು ಅನುಕೂಲತೆಗಳು ಇರುವುದರಿಂದ ಒಳ್ಳೆಯ ಕೆಲಸವನ್ನು ಸರ್ಕಾರ ಮಾಡಿದೆ ಎನ್ನುವ ಅಭಿಪ್ರಾಯವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ವಿಚಾರವೇನೆಂದರೆ ಪ್ರೈವೇಟ್ ಮೆಡಿಕಲ್ ಕಾಲೇಜ್‌ಗಳಲ್ಲಿ ಮತ್ತು ಕೆಲವು ಯೂನಿವರ್ಸಿಟಿಗಳಲ್ಲಿ ಅಪಾಯಿಂಟ್‌ಮೆಂಟ್ ಆದ ಕೆಲವು ಹುದ್ದೆಗಳನ್ನು ರೆಕಗ್ನೈಸ್ ಮಾಡಿಲ್ಲ ಎನ್ನುವ ಅಭಿಪ್ರಾಯಗಳನ್ನು ನಮ್ಮ ಮಿತ್ರರು ಹೇಳಿದರು. ಆದರೆ ಯಾವುದೇ ಒಂದು ಹೊಸ ಯೂನಿವರ್ಸಿಟಿ ಬಂದಾಗ ಅವು ಡೆವಲಪ್‌ಮೆಂಟ್ ಆಗುವುದಕ್ಕೆ ಸ್ವಲ್ಪ ಕಾಲ ಹಿಡಿಯುತ್ತದೆ. ಅದು ವೈಸ್ ಚಾನ್ಸಲರ್ ಮರ್ಜಿಗೆ ಬಿಟ್ಟಿರತಕ್ಕಂಥ ವಿಚಾರ. ಅದನ್ನು ಅವರು ಜಾಗ್ರತೆ ಮಾಡಬೇಕಾಗಿರುತ್ತದೆ. ಅದನ್ನು ನಾವು ಆಕ್ಷೇಪಣೆ ಮಾಡುವುದರಲ್ಲಿ ಅರ್ಥವಿಲ್ಲ ಎಂದು ನನ್ನ ಭಾವನೆ. ನನಗೆ ಅನಿಸುತ್ತದೆ ಯಾರೋ ಒಬ್ಬರು ಡೈರೆಕ್ಟರ್ ಅಫ್ ಮೆಡಿಕಲ್ ಎಜುಕೇಷನ್ ಆಗಬೇಕು ಎಂದು ಇದ್ದು ಆಗದೇ ಇರತಕ್ಕಂಥ ವ್ಯಕ್ತಿ ಅಥವಾ ವೈಸ್ ಚಾನ್ಸಲರ್ ಆಗಬೇಕು ಎಂದಿದ್ದು ಆಗದೇ ಇರುವಂತಹ ವ್ಯಕ್ತಿ ಅಥವಾ ಈ ಮೆಡಿಕಲ್ ಕಾಲೇಜಿನಲ್ಲಿ ಅಥವಾ ಡೆಂಟಲ್ ಕಾಲೇಜ್‌ನಲ್ಲಿ ಸೀಟು ಸಿಗದೆ ಇರುವಂತಹ ವ್ಯಕ್ತಿ ನಮ್ಮ ಸ್ನೇಹಿತರಿಗೆ ಬ್ರೀಫ್ ಮಾಡಿರಬೇಕೇನೋ ಎಂದು ನನಗೆ ಅನಿಸುತ್ತದೆ. ಅದು ಎಷ್ಟರಮಟ್ಟಿಗೆ ಸತ್ಯವೋ ನನಗೆ ಗೊತ್ತಿಲ್ಲ.

ಶ್ರೀ ಎ. ರಾಮದಾಸ್:- ಮಾನ್ಯ ಉಪಾಧ್ಯಕ್ಷರೇ, ಇದು ಯಾರೋ ಒಬ್ಬ ವ್ಯಕ್ತಿ ಹೇಳುವಂತಹ ವಿಚಾರ ಅಲ್ಲ. ದಯಮಾಡಿ ಸದಸ್ಯರು ಒಂದು ನಿಮಿಷ ಈಲ್ಡ್ ಆಗಬೇಕು. ಇದರಲ್ಲಿ ಯಾರೋ ಸೀಟು ಸಿಗಲಿಲ್ಲ ಎಂದು ಹೇಳಿ ಯಾರೋ ಒಬ್ಬರು ನನಗೆ ಇನ್ಸ್‌ಟಿಗೇಟ್ ಮಾಡಿದ್ದಾರೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಯಾರೋ ಒಬ್ಬ ವ್ಯಕ್ತಿ ವೈಸ್ ಚಾನ್ಸ್‌ಲರ್ ಆಗುತ್ತಾರೆ ಅಥವಾ ಡಿ.ಎಂ.ಎ ಆಗುತ್ತಾರೆ ಎಂದು ಅದಕ್ಕೆ ಅವಕಾಶ ಸಿಕ್ಕಿಲ್ಲ ಎಂದು ಹೇಳಿ ಅವರು ಇನ್ಸ್‌ಟಿಗೇಟ್ ಮಾಡಿ ಅವರು ನನಗೆ ಏನೋ ಹೇಳಿದ್ದಾರೆ ಎನ್ನುವಂತಹ ಭಾವನೆ ಬರುವಂತಹ ಮಾತುಗಳನ್ನು ಕೇಳುವುದಕ್ಕೆ ನನಗೆ ಇಷ್ಟವಿಲ್ಲ. ನಾನು ಹೇಳುವಂತಹ ಸಮಯದಲ್ಲಿ, ಕಳೆದ ಸಲ ಇವರು ಹೇಳಿದರು, ರಾಜ್ಯದಲ್ಲಿರುವಂತಹ

ವಿದ್ಯಾರ್ಥಿಗಳಿಗೋಸ್ಕರವಾಗಿ ರಾಜ್ಯ ಸರ್ಕಾರ ಎಂ.ಸಿ.ಐ.ನ ಪರ್ಮಿಷನ್ ಇಲ್ಲದೆ ಹೋದರೂ ಕೂಡ ಜಾಸ್ತಿ ಮಾಡಿದರು ಎಂದು. ಆದರೆ ಸನ್ಮಾನ್ಯ ಸದಸ್ಯರಿಗೆ ಹೇಳುವುದಕ್ಕೆ ಇಚ್ಛಿಪಡುವುದೇನೆಂದರೆ, ರಾಜ್ಯ ಸರ್ಕಾರದ ವಿದ್ಯಾರ್ಥಿಗಳಿಗೆಂದು ಕೊಟ್ಟಂತಹ ಸೀಟನ್ನು ಪಿ.ಸಿ. ಡೆಂಟಲ್ ಕಾಲೇಜಿನವರು ಇರಾನಿನ 10 ವಿದ್ಯಾರ್ಥಿಗಳಿಗೆ ಸೀಟು ಕೊಟ್ಟರು ಎಂದು ಇವತ್ತು ಅದರ ಅಫಿಲಿಯೇಷನ್ ಹಾಳಾಗುತ್ತಿದೆ. ಆದರೆ ರಾಜ್ಯ ಸರ್ಕಾರದ ವಿದ್ಯಾರ್ಥಿಗಳ ಹೆಸರನ್ನು ಹೇಳಿಕೊಂಡು ಎಂ.ಎಸ್. ರಾಮಯ್ಯ ಮೆಡಿಕಲ್ ಕಾಲೇಜಿನಲ್ಲಿ ಮಲೇಶಿಯಾದ ನೂರು ವಿದ್ಯಾರ್ಥಿಗಳಿಗೆ 50 ಸಾವಿರ ಡಾಲರುಗಳಿಗೆ ಒಂದೊಂದು ಸೀಟುಗಳನ್ನು ಮಾರಿದ್ದಾರೆ. ಆ ದೃಷ್ಟಿಯನ್ನು ಇಟ್ಟುಕೊಂಡು ಆ ವಿಚಾರಗಳನ್ನು ಹೇಳಿದ್ದೇವೆಯೇ ಹೊರತು ಯಾರೋ ನಮ್ಮನ್ನು ಇನ್ಸ್‌ಟಿಗೇಟ್ ಮಾಡಿರುವಂತಹ ವಿಚಾರ ಅಲ್ಲ ಇದು. ದಯಮಾಡಿ ಆ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಎರಡನೆಯದು ಮೈಸೂರಿನಲ್ಲಿ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕು ಎಂದು ಸರ್ಕಾರದಿಂದ ಆದೇಶವಾಗಿತ್ತು. ಆರ್ಡರ್ ಆಗುವುದಕ್ಕೆ ಮುಂಚೆ ಇವತ್ತು ಒಂದು ಆರ್ಡಿನೆನ್ಸ್ ಹೊರಡಿಸಿ ಮೈಸೂರಿನಲ್ಲಿ ಇರುವಂತಹ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿಗೆ ವರ್ಗಾಯಿಸುವಂತಹ ಪ್ರಯತ್ನವಾಗಿದೆ ಎನ್ನುವ ಮಾತನ್ನು ಹೇಳಿದೆ. ಆರ್ಡರ್ ಆಗಿದ್ದಕ್ಕೋಸ್ಕರ ಅಲ್ಲಿ ಉಳಿಸಿ ಎಂದು ಹೇಳುವುದು, ಕೊನೇ ಒಂದು ಮಾತು;

ಉಪಾಧ್ಯಕ್ಷರು:- ತಾವು ಭಾಷಣ ಮಾಡುತ್ತಿದ್ದೀರಲ್ಲ, ತಾವು ಈಗ ಹೇಳಿದಿರಲ್ಲ. ಅವರು ಮಾತನಾಡಲಿ.

ಶ್ರೀ ಎ. ರಾಮದಾಸ್:- ಆ ಮಾತಿನ ಹಿಂದೆ ನಿಗೂಢವಾದಂತಹ ಅರ್ಥವಿದೆ. ನಾವು ಯಾವುದೇ ಒಂದು ಕಾಲೇಜಿನಲ್ಲಿ ಸೀಟನ್ನು ಕೇಳುವಂತಹ ಪ್ರಮೇಯದ ಬಗ್ಗೆ ಎಲ್ಲೂ ನಾನು ಮಾತನಾಡಿಲ್ಲ.

ಶ್ರೀ ಎಸ್. ಶಿವಶಂಕರಪ್ಪ:- ಮಾನ್ಯ ಉಪಾಧ್ಯಕ್ಷರೇ, ಆ ವಿಚಾರ ನನಗೂ ಕೂಡ ಸ್ವಲ್ಪ ಮಟ್ಟಿಗೆ ಗೊತ್ತಿರುವುದರಿಂದ ನನಗೆ ಯಾರೂ ಬ್ರೀಫ್ ಮಾಡಬೇಕಾದ್ದಿಲ್ಲ. ಸೀಟಿನ ವಿಚಾರಗಳನ್ನು ನಮ್ಮ ಸ್ನೇಹಿತರು ಹೇಳಿದಾಗ ನಮ್ಮ ಕ್ಷೇತ್ರದಲ್ಲಿ ಇರತಕ್ಕಂಥ ಕೆಲಸಗಳ ಬಗ್ಗೆ ನಾವು ಹೆಚ್ಚು ನಿಗಾ ವಹಿಸಿ ಆ ಕಡೆ ಇರತಕ್ಕಂಥ ನಮ್ಮ ಸರ್ಕಾರದವರು ಮನಸ್ಸು ಏನಾದರೂ ಮಾಡಿ ಹೆಚ್ಚು ಹಣವನ್ನು ಬಿಡುಗಡೆ ಮಾಡಿ ನಗರದ ಅಭಿವೃದ್ಧಿಗಳ ಕಡೆಗೆ ಹೆಚ್ಚು ಗಮನವನ್ನು ಹರಿಸುತ್ತಿದ್ದರು ಎಂದು ನನ್ನ ಭಾವನೆ. ಏಕೆಂದರೆ ನಾವು ಸಭೆಯಲ್ಲಿ ಏನು ಬೇಕಾದರೂ ಟೀಕೆ ಮಾಡಬಹುದು ಎಂದು ಹೇಳಿ ಬರೀ ಒಂದೇ ದಿಕ್ಕಿನಲ್ಲಿ ನಡೆಯುವುದು ಸೂಕ್ತವಲ್ಲ ಎಂಬುದು ನನ್ನ ಅಭಿಪ್ರಾಯ. ಆ ದಿಸೆಯಲ್ಲಿ ನನಗೆ ಗೊತ್ತಿರತಕ್ಕಂಥ ಅಭಿಪ್ರಾಯವನ್ನು ನಾನು ಸ್ವಚ್ಛವಾಗಿ ಹೇಳಿದ್ದೇನೆ, ನಮ್ಮ ಸದಸ್ಯರ ಅಭಿಪ್ರಾಯ ಅದೇ ಇರಬಹುದು. ಆದ್ದರಿಂದ ಇದರಲ್ಲಿ ತಪ್ಪು ತಿಳಿದುಕೊಳ್ಳಬೇಕಾದುದು ಏನೂ ಇಲ್ಲ. ಏಕೆಂದರೆ ಮೆಡಿಕಲ್ ಕೌನ್ಸಿಲ್, ಡೆಂಟಲ್ ಕೌನ್ಸಿಲ್ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಯಾವ ದೃಷ್ಟಿಯಿಂದ ಈ ಸೀಟುಗಳನ್ನು ಇಟ್ಟುಕೊಂಡು ಬಂದಿದ್ದರು ಎಂಬುದನ್ನು ನಾವು ಮುಖ್ಯವಾಗಿ ಯೋಚನೆ ಮಾಡಬೇಕು. ಅದನ್ನು ಬಿಟ್ಟು, ಈಗ ಸರ್ಕಾರ ಇದೆ ಹೆಚ್ಚು ಸೀಟು ಮಾಡಿದ್ದರೆ ಅವರಿಗೆ ದಂಡ ಹಾಕುತ್ತಾರೆ ಅಥವಾ

ಅವರ ಕಾಲೇಜಿನ ಮಾನ್ಯತೆಯನ್ನು ರದ್ದುಪಡಿಸುತ್ತಾರೆ. ಒಂದೋ, ಎರಡೋ ಕಾಲೇಜುಗಳು ಏನೊ ತಪ್ಪು ಮಾಡಿದ್ದಾವೆ ಎಂದರೆ ಇಡೀ ಇರತಕ್ಕಂಥ ಎಲ್ಲಾ ಕಾಲೇಜುಗಳನ್ನು ತೆಗಳುವುದು ಸರಿಯಲ್ಲ ಎಂಬುದು ನನ್ನ ಅಭಿಪ್ರಾಯ. ಈ ನಿಟ್ಟಿನಲ್ಲಿ ನಾವು ಒಳ್ಳೆಯದನ್ನು ಒಳ್ಳೆಯದಿದೆ ಎಂದು ಹೇಳತಕ್ಕಂಥ ಮನಸ್ಸನ್ನು ನಾವು ಮಾಡಬೇಕು. ಕೆಟ್ಟದ್ದು ಇದ್ದಾಗ ಇದು ಸರಿಯಿಲ್ಲ ಎಂದು ಹೇಳತಕ್ಕಂಥ ಭಾವನೆ-ಯನ್ನು ನಾವು ಮಾಡಬೇಕು. ಅದನ್ನು ಬಿಟ್ಟು ಒಬ್ಬರು ವಿಶ್ವವಿದ್ಯಾನಿಲಯವನ್ನು ಅಲ್ಲೇ ಮೈಸೂರಿನಲ್ಲೇ ಇಡಬೇಕು ಎಂದು ಹೇಳಿದರೆ ನಾನು ದಾವಣಗೆರೆಗೆ ಬೇಕು ಎಂದು ಹೇಳುತ್ತೇನೆ. ನಾನು ಬೇಕಾದರೆ ಒಂದು ಬಿಲ್ಡಿಂಗ್ ಅಡ್ಮಿನಿಸ್ಟ್ರೇಟಿವ್ ಬ್ಲಾಕ್ ಕಟ್ಟಿಸಿಕೊಡುತ್ತೇನೆ. ಸರ್ಕಾರ ಮನಸ್ಸು ಮಾಡಿ ದಾವಣ-ಗೆರೆಗೆ ಕೊಡಲಿ, ಆ ದಿಸೆಯಲ್ಲಿ ಒಂದು ಏರ್‌ಪೋರ್ಟ್ ಕೊಡಲಿ, ಒಂದು ಏರ್‌ಪೋರ್ಟ್‌ನ್ನು ನಮ್ಮ ಸಂಸ್ಥೆಯಿಂದ ಮಾಡಿಸಿಕೊಡುತ್ತೇವೆ. ನಾವು ಬೇಕಾದರೆ ಅದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಒದಗಿ-ಸತಕ್ಕಂಥ ವ್ಯವಸ್ಥೆಯನ್ನೂ ಕೂಡ ಮಾಡುತ್ತೇವೆ. ಈ ದಿಸೆಯಲ್ಲಿ ಸದ್ಯ ಮೈಸೂರಿನಿಂದ ಬೆಂಗಳೂರಿಗೆ ಇರತಕ್ಕಂಥ ವರ್ಗಾವಣೆಯನ್ನು ಮಾಡಿರತಕ್ಕಂಥದ್ದು ಸೂಕ್ತ ಎಂದು ಹೇಳಿ, ನಮ್ಮ ಮೆಡಿಕಲ್ ಕಾಲೇಜ್‌ನಲ್ಲಿರತಕ್ಕಂಥವರು ಮತ್ತು ಇಲ್ಲಿಗೆ ಬರಲಿಕ್ಕೆ ಅನುಕೂಲತೆ ಇದೆ ಎಂಬ ವಿಚಾರವನ್ನು ನಾವು ಮನಗಾಣಬೇಕು ಎಂದು ಹೇಳಿ ಈ ಸಂದರ್ಭದಲ್ಲಿ ಹೇಳುತ್ತಾ, ಆದಷ್ಟು ಶೀಘ್ರವೇ ಸರ್ಕಾರ ಈ ಅಧಿವೇಶನ ನಡೆಯುತ್ತಿರುವಾಗಲೇ ಈ ಜಿಲ್ಲೆಗಳ ಪುನರ್ ವಿಂಗಡಣೆಯನ್ನು ಮಾಡುತ್ತೇವೆ ಎನ್ನ-ತಕ್ಕಂಥ ಘೋಷಣೆಯನ್ನು ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಬೇಕು ಮತ್ತು ಅದಕ್ಕೆ ಅಗತ್ಯವಾಗಿ-ರತಕ್ಕಂಥ ಸೌಲಭ್ಯಗಳನ್ನು ಒದಗಿಸುವುದಕ್ಕೆ, ಮಿನಿ ವಿಧಾನಸೌಧಗಳನ್ನು ಕಟ್ಟಿಸಲಿಕ್ಕೆ ಮತ್ತು ಎಲ್ಲಾ ಸರ್ಕಾರದ ಕಛೇರಿಗಳನ್ನು ಕಟ್ಟಿಸತಕ್ಕಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಈ ಅಧಿವೇಶನದೊಳ-ಗಾಗಿಯೆ ಸರ್ಕಾರದವರು ಹೇಳಬೇಕು, ಭರವಸೆಯನ್ನು ಕೊಡುವುದು ಬೇಡ, ನಾವು ಮಾಡಿದ್ದೇವೆ ಎಂದು ಹೇಳಿ ಸರ್ಕಾರಿ ಆಜ್ಞೆಯನ್ನು ಮಾಡತಕ್ಕಂಥ ಒಂದು ಒಳ್ಳೆಯ ಕೆಲಸವನ್ನು ಸರ್ಕಾರ ಮಾಡಲಿ ಎಂದು ಆಶಿಸಿ ನನಗೂ ಕೂಡ ಇವೊತ್ತು ಇನ್ನೂ ಮಾತನಾಡಲಿಕ್ಕೆ ತುಂಬಾ ವಿಚಾರಗಳಿವೆ, ಆದರೆ ನಾನೊಬ್ಬನೆ ಮಾತನಾಡಿದರೆ ನಮ್ಮ ನಾಯಕರು ಸಮಯವನ್ನು ಹೆಚ್ಚಿಗೆ ತೆಗೆದುಕೊಂಡಿರಿ ಎಂದು ಹೇಳುತ್ತಾರೆ, ಅದಕ್ಕೋಸ್ಕರ ಅರ್ಧಗಂಟೆ ಕಾಲಾವಕಾಶ ಎಂದು ಹೇಳಿದ್ದರು. ಆದರೂ 35-40 ನಿಮಿಷ ಮಾತನಾಡಿದ್ದೇನೆ. ಈ ಬಗ್ಗೆ ನಮ್ಮ ಸದಸ್ಯರುಗಳು ಸರಿಯಾದ ಚಿಂತನೆಯನ್ನು ಮಾಡಲಿ ಮತ್ತು ಆಶ್ರಯ ಯೋಜನೆಯ ಮನೆಗಳು ಸಹಜವಾಗಿ ದೊರಕುವಂತೆ ಸರ್ಕಾರ ನಿಗಾ ವಹಿಸಲಿ ಎಂದು ಹೇಳಿ ಆಶಿಸಿ ನನಗೆ ಮಾತನಾಡಲು ಅವಕಾಶವನ್ನು ಮಾಡಿ ಕೊಟ್ಟ ಉಪಾಧ್ಯಕ್ಷರನ್ನು ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ, ಜೈ ಹಿಂದ್, ಜೈ ಕರ್ನಾಟಕ.

ಶ್ರೀ ವಾಟಾಳ್ ನಾಗರಾಜ್:- ಅವರು ಪ್ರಶ್ನೆ ಮಾಡಿದಾಗ ಜಿಲ್ಲಾ ಕೇಂದ್ರಗಳ ಬಗ್ಗೆ ಪ್ರಶ್ನೆಯನ್ನು ಮಾಡಿದರು.

ಉಪಾಧ್ಯಕ್ಷರು:- ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್:- ಉಪಾಧ್ಯಕ್ಷರೆ, ಅದನ್ನೆ ತಮ್ಮ ಗಮನಕ್ಕೆ ತರುತ್ತಿದ್ದೆ, ಏಕೆಂದರೆ ಜಿಲ್ಲಾ ಕೇಂದ್ರಗಳದ್ದು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದುಹೋಗಿದೆ, ನಮ್ಮಲ್ಲಿ ಚಾಮರಾಜನಗರ-ವನ್ನು ಒಂದು ಜಿಲ್ಲೆ ಮಾಡಬೇಕೆಂದು ಹುಂಡೇಕರ್ ಗದ್ದಿಗೇಗೌಡರ ಸಮಿತಿಯಲ್ಲಿ ಸೇರಿದೆ. ಆದರಿಂದ ಕೂಡಲೇ ಮಾಡುವುದಕ್ಕೆ ಸರ್ಕಾರ ತೀರ್ಮಾನ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಆರ್.ವಿ. ದೇಶಪಾಂಡೆ:- ಇದಕ್ಕೂ ಕೂಡ ರಿಪ್ಲೈ ಕೊಡುತ್ತಾರೆ.

ಶ್ರೀ ಎಸ್. ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ ಈ ಜಿಲ್ಲಾ ಪುನರ್‌ವಿಂಗಡಣೆಯಾಗುವ ಸಂದ-ರ್ಭದಲ್ಲಿ ಬಹುಶಃ ಯಾವುದ್ಯಾವುದೋ ಒತ್ತಡಕ್ಕಾಗಿ ಅದು ಹಾಗೇ ಇದೆ. ಅದರಲ್ಲಿ ಏನಾಗುತ್ತದೆ-ಯೆಂದರೆ, ನಿಜವಾಗಿಯೂ ಕೆಲವರಿಗೆ ತೊಂದರೆಯಾಗುತ್ತದೆ, ಆದ್ದರಿಂದ ಅದನ್ನು ಪುನರ್ ಪರಿ-ಶೀಲಿಸಬೇಕಾಗುತ್ತದೆ. ಏಕೆಂದರೆ ಬಹಳ ಅನುಕೂಲ ಆಗುತ್ತಿದ್ದಂಥ ಜಿಲ್ಲೆಗಳನ್ನು ತೆಗೆದು ಆ ಒಂದು ತಾಲ್ಲೂಕು, ಹೋಬಳಿಗಳನ್ನು ತೆಗೆದು ಬೇರೆ ಕಡೆ ಹಾಕಿದಾಗ ಬಹಳ ತೊಂದರೆಯಾಗುತ್ತದೆ. ಆದ್ದ-ರಿಂದ ಅದನ್ನು ಪುನರ್ ಪರಿಶೀಲಿಸಬೇಕಾಗುತ್ತದೆ. ಆದುದರಿಂದ ದಯವಿಟ್ಟು ಹಿಂದೆ ಏನು ಮಾಡಿ-ದ್ದಾರೆ ಅದನ್ನು ಕಂಟಿನ್ಯೂ ಮಾಡುವುದು ಬೇಡ ಅದನ್ನು ಪುನರ್‌ಪರಿಶೀಲನೆಗೆ ವ್ಯವಸ್ಥೆ ಮಾಡಿಕೊಡಿ.

ಶ್ರೀ ಆರ್.ವಿ. ದೇಶಪಾಂಡೆ:- ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಂಡು, ಅಲ್ಲಿಯ ಪರಿಸ್ಥಿತಿ-ಯನ್ನು ನೋಡಿಕೊಂಡು ಮಾಡಲಾಗುತ್ತದೆ.

+ **ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ):-** ಸನ್ಮಾನ್ಯ ಸಭಾಧ್ಯಕ್ಷರೆ, ಇವೊತ್ತು ಏನು ನಮ್ಮ ಮುಂದೆ 19 ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆ ನಡೆದಿದೆ. ಈ ಇಲಾಖೆಗಳ ಕಾರ್ಯ ವೈಖರಿಯನ್ನು ನೋಡಿದಾಗ ನಾಗರೀಕರು ಈ ಇಲಾಖೆಗಳಿಂದ ಏನು ಸೇವೆಯ ಪುಣ್ಯ ಪಡೆದಿದ್ದಾರೆ ಎಂಬುದನ್ನು ನೋಡಿದಾಗ ಈ ಬೇಡಿಕೆಗಳನ್ನು ವಿರೋಧಿಸುವುದು ನಮ್ಮ ಆದ್ಯ ಕರ್ತವ್ಯವಾಗುತ್ತದೆ ಎನ್ನುವುದು ನನ್ನ ಪ್ರಾಮಾಣಿಕ ಅನಿಸಿಕೆ. ನಿನ್ನೆ ಗೆಳೆಯ ರಾಮದಾಸ್‌ರವರು ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಇಲಾಖೆಗೆ ಬಂದಿರುವ ಏಡ್ಸ್ ಕಾಯಿಲೆ ಏನು ಇದೆ ಅದರ ಬಗ್ಗೆ ಬಹಳ ಗಾಬರಿಯಾಗು-ವಂಥ ವಿಚಾರಗಳನ್ನು ಈ ಸಭೆಯಲ್ಲಿ ಮಂಡಿಸಿದರು. ಪ್ರಾಯಶಃ ನನಗನಿಸುತ್ತದೆ, ಬೇರೆ ಯಾವ್ಯಾವ ಇಲಾಖೆಗಳಿವೆ ಆ ಇಲಾಖೆಗಳೂ ಕೂಡ ಈ ಆರೋಗ್ಯ ಇಲಾಖೆಗಿಂತ ಭಿನ್ನ ಏನೂ ಇಲ್ಲ ಎಂದು ಅನಿಸುತ್ತದೆ. If there is any difference, the difference is in degrees and not in kind. ಎಲ್ಲಾ ಇಲಾಖೆಗಳು ಕಜಿನ್ಸ್, ಅಣ್ಣತಮ್ಮಂದಿರು, ಅವರದೊಂದಷ್ಟು ಮಾಹಿತಿ ಸಿಕ್ಕಿದೆ, ಬ್ಲಡ್ ಮೆಡಿಷಿನ್ ಇಲ್ಲ ಎಂದು, ಇನ್ನು ಕೆಲವರದ್ದು ಬೇರೆ ಸಿಗುತ್ತದೆ. ಇವೊತ್ತು ಪಟ್ಟಣ ಹಾಗೂ ನಗರಗಳ ಬೆಳವಣಿಗೆ ಏನು ಇದೆ ಅದು ಆತಂಕಕಾರಿ ಮಟ್ಟವನ್ನು ಮುಟ್ಟುತ್ತಿದೆ ಒಂದು ಅಂದಾಜಿನ ಪ್ರಕಾರ ಇವೊತ್ತು ಕರ್ನಾಟಕದಲ್ಲಿ ಒಟ್ಟು ಜನಸಂಖ್ಯೆಯ ಶೇಕಡ 34 ಜನ ಪಟ್ಟಣ ಹಾಗೂ ನಗರ-ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. 2005ನೇ ಇಸವಿಯ ಹೊತ್ತಿಗೆ ಈ ಪ್ರಮಾಣ ಶೇಕಡ 50 ಆಗ-ಬಹುದು ಎಂದು ಒಂದು ಅಂದಾಜಿದೆ. ಪಟ್ಟಣ ಹಾಗೂ ನಗರಗಳ ಅಭಿವೃದ್ಧಿಗಳ ಬಗೆಗೆ ಗಮನ

ಕೊಡುತ್ತಿರುವ ಈ ಇಲಾಖೆಗಳು ಏನು ಇವೆ, ಈ ಇಲಾಖೆಗಳು ಈ ರೀತಿಯ ಬೆಳವಣಿಗೆಯನ್ನು, ಹಾಗು ಮುಂಬರುವ ಪರಿಸ್ಥಿತಿಯನ್ನು ಎದುರಿಸುವಷ್ಟು ಶಕ್ತಿ ಅವರ ಹತ್ತಿರ ಇದೆಯೇ? ಎದಿರಿಸುವಷ್ಟು ಮನೋಭಾವ ಇದೆಯೇ ಎನ್ನುವುದು ಒಂದು ಪ್ರಶ್ನೆ. 1985ನೇ ಇಸವಿಯಲ್ಲಿ ಅಂದು ಪ್ರಧಾನಿ-ಯಾಗಿದ್ದ ದಿವಂಗತ ರಾಜೀವ್‌ಗಾಂಧಿಯವರು ಕಲ್ಕತ್ತ ನಗರದ ಬಗ್ಗೆ ಒಂದು ಉಲ್ಲೇಖ ಮಾಡಿದ್ದರು, Calcutta is a dieing city ಎಂದು ಹೇಳಿದ್ದಾಗ ಅವೊತ್ತು ಬಹಳಷ್ಟು ಕಲ್ಕತ್ತ ಜನ ಅಸಮಾ-ಧಾನವನ್ನು ವ್ಯಕ್ತಪಡಿಸಿದ್ದರು. ಆದರೆ ಇವೊತ್ತು ಕರ್ನಾಟಕದ ಎಲ್ಲಾ ಪಟ್ಟಣ ಮತ್ತು ನಗರಗಳು ಅವಸಾನ ಹೊಂದುವ ದಿಕ್ಕಿನಲ್ಲಿ ದಾಪುಗಾಲು ಹಾಕುತ್ತಿದೆ ಎಂದು ಹೇಳಿದರೆ ತಪ್ಪಾಗಲಾರದು. ಯಾವುದೇ ಮೂಲಭೂತ ಅವಶ್ಯಕತೆ ಏನು ಇದೆ ಅದನ್ನು ಪೂರೈಸಲಾಗದೆ ನಾವು ಏನೇನೊ ಸಬೂಬು ಹೇಳಿಕೊಂಡು ಹೋಗುತ್ತಿದ್ದೇವೆ. ಯಾವುದೇ ಒಂದು ಇಲಾಖೆಯ ಹತ್ತಿರ ಒಂದು ಸಮ-ಸ್ಯೆಗೆ ಪರಿಹಾರ ಇದೆಯೇ ಎಂದು ನಾವೇನೇ ಹುಡುಕುತ್ತಾ ಹೋದರೆ ನಮ್ಮ ಸಮಸ್ಯೆಗಳಿಗೆ, ನಾಗರೀ-ಕರ ಸಮಸ್ಯೆಗಳಿಗೆ ಪರಿಹಾರವನ್ನು ಕೊಡುವುದು ಬಿಟ್ಟು ಅವರು ತಮ್ಮ ಇಲಾಖೆಯ ಸಮಸ್ಯೆಗಳನ್ನು ಹೇಳುವುದಕ್ಕೆ ಶುರುಮಾಡುತ್ತಾರೆ. ನಮ್ಮ ಹತ್ತಿರ ಅದಿಲ್ಲ, ಜನ ಇಲ್ಲ, ಹಣ ಇಲ್ಲ, ಇತ್ಯಾದಿ, ಇತ್ಯಾದಿ ಹೇಳುವುದಕ್ಕೆ ಹೋಗುತ್ತಾರೆ. ಒಟ್ಟಿನಲ್ಲಿ ಇವೊತ್ತು ನಗರದಲ್ಲಿ ವಾಸಿಸುವುದು ಒಂದು ಶಾಪ ಆಗಿ-ಬಿಟ್ಟಿದೆ, ಅದು ಶಾಪವಾಗಿ ಪರಿಣಮಿಸುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವೊತ್ತು ನಗರದ ಮತ್ತು ಪಟ್ಟಣದ ಆಡಳಿತ ನಡೆಸುತ್ತಿರುವ ಇಲಾಖೆಗಳು ಏನು ಇವೆ ಆ ಇಲಾಖೆಗಳ ನಡುವೆ ಒಂದು ಸ್ಪರ್ಧೆ ಇದೆ, ಏನು ಅದು ಸ್ಪರ್ಧೆ? ಯಾವರೀತಿ ನಾಗರೀಕನ ಬಾಳನ್ನು ಇನ್ನಷ್ಟು ನರಕಸದೃಶ ಮಾಡುವುದು ಎಂದು. There is a mad competition. ಬಹಳ ಚೆನ್ನಾಗಿ ಸ್ಪರ್ಧೆ ಕೂಡ ಮಾಡುತ್ತಿದ್ದಾರೆ. ಅವರಿಗೆ ನಾಗರೀಕ ಸಮಸ್ಯೆಗೆ ಪರಿಹಾರವನ್ನು ಹುಡುಕಬೇಕು ಎನ್ನುವುದಕ್ಕಿಂತ ತಮ್ಮ ಅಧಿಕಾರಿಯನ್ನು ಇನ್ನಷ್ಟು ಹತ್ತಿರ ಮಾಡಿಕೊಳ್ಳಬೇಕು, ಇನ್ನಷ್ಟು ನಾಗರೀಕರ ಮೇಲೆ ಸವಾರಿಯನ್ನು ಮಾಡಬೇಕು ಎಂಬ ಮನೋಭಾವ ಎಲ್ಲಾ ಶ್ರೇಣಿಯ ಅಧಿಕಾರಗಳಲ್ಲಿ ನಾವು ಕಾಣುತ್ತಾ ಬಂದಿದ್ದೇವೆ. ಅದಕ್ಕೆ ದುರಾದೃಷ್ಟ ಅಂದರೆ ರಾಜಕೀಯ ಕ್ಷೇತ್ರದಲ್ಲಿ ಆಡಳಿತ ನಡೆಸುತ್ತಿರುವವರ ಸಹಕಾರ ಕೂಡ ಇವೊತ್ತು ಕಾಣುತ್ತಿದೆ. ಬೆಂಗಳೂರಿನ ಬಗ್ಗೆ ನಾನು ಕಳೆದ 13 ವರ್ಷಗಳಿಂದ ನೋಡಿಕೊಂಡು ಬರುತ್ತಾ ಇದ್ದೇನೆ, ಈಗ ಇನ್ನಷ್ಟು ಜಾಸ್ತಿಯಾಗುತ್ತಾ ಇದೆ, ಇಲ್ಲಿ ಒಂದು ಅಪವಿತ್ರ ಮೈತ್ರಿ ಕೂಟ ಇದೆ, there is unholdy alliance ಯಾರ ಯಾರ ನಡುವೆ ಎಂದರೆ ಒಂದು, ಕರಪ್ಟ್ ಬ್ಯೂರೊಕ್ರಾಪ್ಸ್ ಏನಿದ್ದಾರೆ, ಭ್ರಷ್ಟ ಅಧಿಕಾರ ವರ್ಗ, ಅವರ ಜೊತೆಗೆ ಸ್ವಾರ್ಥ ರಾಜಕಾರಣಿಗಳು, ಅದರ ಜೊತೆಗೆ ಸಂ-ವೇದನಾ ರಹಿತ ಬಂಡವಾಳಶಾಹಿಗಳು ಅದು ಕಾಂಟ್ರಾಕ್ಟರ್ಸ್ ಆಗಬಹುದು, ಸಪ್ಲೈಯರ್ಸ್ ಆಗ-ಬಹುದು ಏನೇ ಆಗಬಹುದು. ಈ ಮೂವರದ್ದು, corrupt bureaucrats, selfish politi-cians, insensitive contractors or suppliers or capitalists ಈ ಮೂವರದ್ದು ಅಪವಿತ್ರ ಮೈತ್ರಿ ಕೂಟ ಏನು ಇದೆ. ಇದು ನಗರಗಳನ್ನು, ಪಟ್ಟಣಗಳನ್ನು ಇವೊತ್ತು ನರಕಸದೃಶ ಮಾಡಿಬಿಟ್ಟಿದೆ. ಈಗ ಗವಾಸ್ಕರ್‌ರವರು ಕ್ರಿಕೆಟ್ ಬಗ್ಗೆ ಕಾಮೆಂಟ್ ಮಾಡುತ್ತಾರೆ, ಕ್ರಿಕೆಟ್ ಪ್ಲೇಯರ್

ಅಲ್ಲವೇ ಅವರು, ಹಾಗೆ. ಇವೊತ್ತು ನಾಗರೀಕರಿಗೆ ಯಾವುದೇ ಸಂಸ್ಥೆಯ ಬಗ್ಗೆ ವಿಶ್ವಾಸ ಉಳಿದಿಲ್ಲ. ಆ ನಾಗರೀಕನ ಬಗ್ಗೆ ಕೂಡ ಇಲಾಖೆಯವರಿಗೆ ಯಾವುದೇ ಒಂದು ಸಹಾನುಭೂತಿ ಉಳಿದಿಲ್ಲ. ಹಿಂದೆ ಎಲ್ಲ ಒಂದು ಗಾದೆ ಇತ್ತು 'ಮುಖ ನೋಡಿ ಮಣೆ ಹಾಕುತ್ತಿದ್ದರು' ಎಂದು. ಇವೊತ್ತು ಕಛೇರಿಗಳಿಗೆ ಹೋದರೆ ಜೇಬನ್ನು ನೋಡಿ ಕೂರಲು ಕುರ್ಚಿಯನ್ನು ಕೊಡುತ್ತಾರೆ. ಕುರ್ಚಿಯನ್ನು ಕೊಡುವುದೇ ಇಲ್ಲ ಜೇಬು ನೋಡುತ್ತಾರೆ, ಅವನ್ಯಾವನೊ ಶಾಸಕನ ಪತ್ರನೊ ಅಥವಾ ಇನ್ಯಾರದೊ ಕಾರ್ಪೋರೇಟರ್ ಪತ್ರನೋ ಇದ್ದರೆ ಸ್ವಲ್ಪ ಅವನ ಮಾತು ಕೇಳುವ ಒಂದು ಪರಿಸ್ಥಿತಿ ಇದೆ. ಅನೇಕ ಇಲಾಖೆಗಳಿಗೆ, ನಾಗರೀಕ ಪೋಲಿಸ್ ಸ್ಟೇಷನ್‌ಗೆ ಹೋಗುವುದಕ್ಕೆ ಹೇಗೆ ಹೆದರಿಕೊಳ್ಳುತ್ತಾನೋ ಅದೇ ರೀತಿ ಹೆದರಿಕೊಳ್ಳುವ ಪರಿಸ್ಥಿತಿಯನ್ನು ನಾವು ಇವೊತ್ತು ನಗರದಲ್ಲಿ ಕಾಣುತ್ತಿದ್ದೇವೆ. ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನಗರವನ್ನು ನೋಡಿಕೊಳ್ಳುವುದಕ್ಕೆ 3-4 ಇಲಾಖೆಗಳು ಅಥವಾ ಸಂಸ್ಥೆಗಳು ಇವೆ. ಅವು ಬೆಂಗಳೂರು ಮಹಾನಗರಪಾಲಿಕೆ ಇರಬಹುದು, ಬೆಂಗಳೂರು ಜಲಮಂಡಳಿ ಇರಬಹುದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವಿರಬಹುದು. ಇವೆಲ್ಲವೂ ಬೆಂಗಳೂರು ನಗರವನ್ನು ನೋಡಿಕೊಳ್ಳುವುದಕ್ಕೆ ಇರುವಂತಹ ಸ್ವಾಯತ್ತ ಸಂಸ್ಥೆಗಳಾಗಿವೆ. ಅಟಾನಮಸ್ ಬಾಡಿಸ್; ಬಹಳ ಸಾರಿ ಅವು ಸ್ವಾಯತ್ತ ಸಂಸ್ಥೆಗಳಾಗಿ ಇವೆಯೋ ಎಂದು ನೋಡಿದಾಗ ಅವು ಸರ್ಕಾರದ ಇಲಾಖೆಗಳಾಗಿ ಕೆಲಸ ಮಾಡುತ್ತಿವೆ. ಯಾವುದೇ ರೀತಿಯಿಂದ ಸ್ವತಃ ಹೆಜ್ಜೆಯನ್ನು ಇಡುವುದು, ಸ್ವತಃ ನಿರ್ಧಾರವನ್ನು ತೆಗೆದುಕೊಳ್ಳುವುದು ಅಥವಾ ಸ್ವತಃ ಅಭಿವೃದ್ಧಿ ಕಾರ್ಯಗಳ ಕಡೆಗೆ ಗಮನ ಕೊಡುವುದು ಆ ಸಂಸ್ಥೆಗಳಿಂದ ಆಗುತ್ತಿಲ್ಲ. ದುರಂತವೇನೆಂದರೆ, ಆಡಳಿತ ನಡೆಸುತ್ತಿರುವವರೂ ಕೂಡ ಅವು ಸ್ವಾಯತ್ತ ಸಂಸ್ಥೆಗಳಾಗಿ ಉಳಿಯಬೇಕೆಂದು ಬಯಸುತ್ತಿಲ್ಲ. ಸುಮಾರು 20 ಅಥವಾ 30 ವರ್ಷಗಳ ಹಿಂದೆ ಈ ದೇಶದಲ್ಲಿ ಒಂದು ವಾದ ಬಂತು. ಕಮಿಟೆಡ್ ಜ್ಯುಡಿಶಿಯರಿ ಇರಬೇಕೆಂದು, ನ್ಯಾಯಾಲಯಗಳು ಇಲ್ಲವೇ ಅವು ಕಮಿಟೆಡ್ ಆಗಿ ಇರಬೇಕೆಂದು committed judiciary, committed to whom? Committed not to common man, committed not to the Constitution, but to the ruling party's ideology. ಆ ಒಂದು ಸಿದ್ಧಾಂತ ಬಹಳ ವ್ಯಾಪಕವಾದಂತಹ ಪ್ರಚಾರದಲ್ಲಿ ಇತ್ತು. ಇವತ್ತು ಕರ್ನಾಟಕದಲ್ಲಿ ನಾವು ನೋಡುತ್ತಿರುವಂಥಾದ್ದು ಕಮಿಟೆಡ್ ಬ್ಯೂರೋಕ್ರಸಿ ಕಡೆ. ಆ ಬ್ಯೂರೊಕ್ರಾಟ್ಸ್ ಏನಿದ್ದಾರೆ ಅವರು ಆಡಳಿತ ನಡೆಸುತ್ತಿರುವ ಪಕ್ಷದ ಕಾರ್ಯಕರ್ತರ ರೀತಿಯಲ್ಲಿ ಕೆಲಸ ಮಾಡಬೇಕೆಂದು ಸರ್ಕಾರಗಳು ಬಯಸುತ್ತವೆ. ಆದುದರಿಂದ ಎಲ್ಲಾ ಹಂತದಲ್ಲೂ ಅದು ನಗರಪಾಲಿಕೆ ಇರಬಹುದು, ಜಲಮಂಡಳಿ ಇರಬಹುದು, ಅಭಿವೃದ್ಧಿ ಪ್ರಾಧಿಕಾರವಿರಬಹುದು, ನಗರದ ಕಡೆ ಗಮನ ಕೊಡುವಂತಹ ಸಂಗತಿಯನ್ನು ಯಾರೋ ಕೆಲವು ವ್ಯಕ್ತಿಗಳ ಆದೇಶಗಳಿಗೆ ಮಣಿದು ಇವತ್ತು ಕೆಲಸ ಮಾಡುತ್ತಿರುವುದನ್ನು ನಾವು ನೋಡುತ್ತಾ ಬರುತ್ತಿದ್ದೇವೆ. ನನ್ನ ಪ್ರಕಾರ ಸ್ವಾಯತ್ತ ಸಂಸ್ಥೆ ಎನ್ನುವುದರ ಬಗ್ಗೆ it is a misnomer. There is no autonomous institution here. ಒಂದು ಉದಾಹರಣೆಯನ್ನು ಹೇಳುತ್ತೇನೆ. ಬೆಂಗಳೂರು ಸಿಟಿ ಕಾರ್ಪೊರೇಷನ್ ಇದೆ. ನಾನು ಸುಮ್ಮನೆ ಲೆಕ್ಕ ಹಾಕಿದಂತೆ 1983ನೇ ಇಸವಿಯಿಂದ 1996ರ ವರೆಗೆ 13 ವರ್ಷಗಳಲ್ಲಿ ನಾವು ಎಷ್ಟು

ಕಮೀಷನರ್‌ಗಳನ್ನು ನೋಡಿದ್ದೇವೆಂದರೆ 13 ಜನರನ್ನು ನೋಡಿದ್ದೇವೆ. ಇವತ್ತು ಅಲ್ಲಿ 13ನೇ ಕಮೀಷನರ್ ಇದ್ದಾರೆ. ಕಳೆದ ಒಂದು ವರ್ಷದಲ್ಲಿ ಕಾರ್ಪೊರೇಷನ್ ಚುನಾವಣೆ ಆಗಬೇಕಾಗಿತ್ತು, ಆಗಲಿಲ್ಲ. ಒಂದು ವರ್ಷದಲ್ಲಿ ನಾಲ್ಕು ಜನ ಆಡಳಿತಾಧಿಕಾರಿಗಳನ್ನು ನಾವು ನೋಡಿದ್ದೇವೆ. ಒಬ್ಬ ಆಯುಕ್ತನಿಗೆ ಹೆಚ್ಚೆಂದರೆ ಹನ್ನೊಂದು ತಿಂಗಳುಗಳು ಕಾಲಾವಕಾಶವನ್ನು ನೀವು ಕೊಡುತ್ತೀರಿ, ಏಕೆ? ಯಾರನ್ನೊ ಅಧಿಕಾರಿಯನ್ನು ಪೋಸ್ಟ್ ಮಾಡುತ್ತಿರಿ, if he is not liable he will be transferred. He will be shunted out. ಈ ವ್ಯಕ್ತಿ ಹೋಗಿ ನಗರಪಾಲಿಕೆಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಆ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ಅದಕ್ಕೆ ಪರಿಹಾರವನ್ನು ಹುಡುಕುವುದಕ್ಕೇ 6 ರಿಂದ 8 ತಿಂಗಳುಗಳು ಬೇಕು. ನೀವು 11 ತಿಂಗಳುಗಳಲ್ಲಿ ಅವರನ್ನು ಬದಲಾವಣೆ ಮಾಡುತ್ತಿದ್ದೀರಿ. ನಾನು ಹೌಸಿಂಗ್ ಬೋರ್ಡ್‌ಗೆ ಹೋಗಿದ್ದೆ. ಅಲ್ಲಿ ಅಯಕ್ತರ ಕಛೇರಿಯಲ್ಲಿರುವಂತಹ ಬೋರ್ಡನ್ನು ನೋಡಿದೆ. 1971ನೇ ಇಸವಿಯಿಂದ 1996ನೇ ಇಸವಿಯವರೆಗೂ ಅಂದರೆ 25ವರ್ಷಗಳು, ಈಗ ಬಂದಿರುವವರು 25ನೇ ಆಯುಕ್ತರು, ನಾನು ಅವರನ್ನು ನೀವು ರಜತ ಮಹೋತ್ಸವವನ್ನು ಮಾಡುವುದಕ್ಕೆ ಬಂದಿದ್ದೀರಾ, ಎಂದು ಹಾಸ್ಯ ಮಾಡಿದೆ. ನಿಮ್ಮನ್ನು ರಜತ ಮಹೋತ್ಸವನ್ನು ಆಚರಿಸಲು ಕಳುಹಿಸಿದ್ದಾರಾ ಎಂದು ಕೇಳಿದೆ. ಬಿ.ಡಿ.ಎ.ನಲ್ಲಿ 1985 ರಿಂದ 96ರವರೆಗೆ ಅಂದರೆ 11ವರ್ಷಗಳಲ್ಲಿ 11 ಜನ ಕಮೀಷನರ್‌ಗಳು 16 ಜನ ಚೇರ್‌ಮನ್‌ಗಳು ಹೀಗೆ ಆದರೆ ಯಾರು ತಾನೆ ಯಾವುದಾದರೂ ಸಂಸ್ಥೆಯನ್ನು ಉದ್ಧಾರ ಮಾಡಲು ಸಾಧ್ಯವಿದೆಯೇ? ಯಾರಿಗಾದರೂ ಅಲ್ಲಿ ಆಡಳಿತ ನಡೆಸುವುದಕ್ಕೆ ಸ್ವಲ್ಪ ಕಾಲಾಕಾಶವಾದರೂ ಬೇಡವೇ? ಅವರಿಗೆ ಸಮಯವಾದರೂ ಕೊಡಬೇಕಲ್ಲಾ, ಅದನ್ನು ಕೂಡ ಕೊಡುತ್ತಾ ಇಲ್ಲ. ಇವತ್ತು ಏನಾಗಿದೆ ಎಂದರೆ, ನಿಮ್ಮ ಆದೇಶಕ್ಕೆ ಯಾರಾದರೂ ಅಧಿಕಾರಿಗಳು ಮಣಿಯದೆ ಇದ್ದರೆ ಅವರನ್ನು ಯಾವುದಾದರೂ ಕೆಲಸಕ್ಕೆ ಬರದಂತಹ ಸಂಸ್ಥೆಗಳು ಕಿಯಾನಿಕ್ಸ್ , ಬೀಗ ಹಾಕುವಂತಹ ಇಂತಹ ಸಂಸ್ಥೆಗಳಿಗೆ ಕಳುಹಿಸುತ್ತೀರಿ, ಅಂತೂ ಅವರನ್ನು ಅಲ್ಲಿ ಉಳಿಯಗೊಡುವುದಿಲ್ಲ. ಒಟ್ಟಿನಲ್ಲಿ ಸಂಸ್ಥೆಗಳು ಉದ್ಧಾರವಾಗುವುದಕ್ಕಿಂತ, ನಗರದ ಅನುಕೂಲ, ನಾಗರಿಕರ ಅನುಕೂಲವಾಗುವುದಕ್ಕಿಂತ ಆಳುವ ಪಕ್ಷಕ್ಕೆ ಅನುಕೂಲವಾಗಬೇಕೆನ್ನುವ ಧೋರಣೆ ಇವತ್ತು ನಗರಗಳನ್ನು, ಪಟ್ಟಣಗಳನ್ನು ದುಃಸ್ಥಿತಿಗೆ ಕರೆದೊಯ್ಯುತ್ತಿದೆ. ಇನ್ನು ಅರ್ಬನ್ ಡೆವಲಪ್‌ಮೆಂಟ್ ಬಗ್ಗೆ ಮಾತನಾಡುವಾಗ ಮೊದಲು ನಾನು ಬೆಂಗಳೂರಿಗೆ ಸೀಮಿತವಾಗಿ ಮಾತನಾಡುತ್ತಿದ್ದೇನೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಇದೆ. ಇವತ್ತು ಬೆಂಗಳೂರು ನಾಗರಿಕರು ಎಲ್ಲರೂ ಒಂದು ಮಾತನ್ನು ಹೇಳುತ್ತಿದ್ದಾರೆ. ಮಾನ್ಯ ಪುಟ್ಟಣ್ಣಯ್ಯನವರು ಮೈಕ್‌ನ ಮೂಲಕ ಒಂದು ಕಿವಿ ಮಾತನ್ನು ಹೇಳಿದರು. ದಯಮಾಡಿ ಬೆಂಗಳೂರು ನಗರವನ್ನು ಬೆಳೆಯುವುದಕ್ಕೆ ಬಿಡಬೇಡಿ ಎಂದು ಹೇಳಿದರು. ನಾನು ನೂರಕ್ಕೆ ನೂರರಷ್ಟು ಅವರ ಜೊತೆಯಲ್ಲಿದ್ದೇನೆ. ನಾವೆಲ್ಲರೂ ಸೇರಿಕೊಂಡು ಈ ಬೆಂಗಳೂರು ನಗರವನ್ನು ಬೆಳೆಯುವುದಕ್ಕೆ ಇನ್ನಷ್ಟು ವಿಸ್ತಾರವಾಗುವುದಕ್ಕೆ ಬಿಡಬಾರದು. ನಾವು ಯಾರು ಇದರ ಬಗ್ಗೆ ಯೋಚನೆ ಮಾಡುತ್ತಿದ್ದೇವೆ? ಯಾವುದಾದರೂ ಹೊಸ ಕೈಗಾರಿಕೆ ಬೇಕೆಂದರೆ, ಹೊಸ ವಿಶ್ವವಿದ್ಯಾಲಯವಾಗಬೇಕಾದರೆ, ಯಾವುದಾದರು ಆಗಬೇಕಾದರೆ ಬೆಂಗಳೂರೇ ಬೇಕು. ರೈಲ್ವೆ

ನೈರುತ್ಯ ವಲಯವಾಗಬೇಕೆಂದರೂ ಬೆಂಗಳೂರು ಬೇಕು. ಎಲ್ಲಕ್ಕೂ ಬೆಂಗಳೂರೇ ಬೇಕು. ಬೆಂಗಳೂರಿನಲ್ಲಿರುವವರಿಗೆ ನಿವೇಶನ ಬೇಕು, ಹೀಗೆ ಆದಾಗ ಬೆಂಗಳೂರು ಬೆಳೆಯುವುದನ್ನು ನಿಲ್ಲಿಸುವುದಕ್ಕೆ ಯಾರಿಂದ ಸಾಧ್ಯವಾಗುತ್ತದೆ. ಇವತ್ತು ಆಡಳಿತ ನಡೆಸುವವರು ಕನಿಷ್ಟ ಒಂದೆರಡು ಹೆಜ್ಜೆಗಳನ್ನಿಟ್ಟರೆ ಇವತ್ತು ಬೆಂಗಳೂರನ್ನು ವಿಸ್ತಾರ ಮಾಡುವುದಕ್ಕೆ ನಾವು ಪ್ರೋತ್ಸಾಹ ಕೊಡುವುದಿಲ್ಲವೆನ್ನುವ ವಿಚಾರವನ್ನು ಮಾಡಬಹುದು. ದಯಮಾಡಿ ನಾವು ತೀರ್ಮಾನವನ್ನು ಮಾಡೋಣ. ನಾನು ಇವತ್ತು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ಉತ್ತರ ಕರ್ನಾಟಕದಲ್ಲಿ ಒಂದು ಕೂಗು ಎದ್ದಿದೆ. ನೈರುತ್ಯ ವಲಯದ್ದು ಹೈಕೋರ್ಟ್ ಬೆಂಚ್ ಬಗ್ಗೆ ಸ್ವಲ್ಪ ಒತ್ತಾಸೆಯನ್ನು ಕೊಟ್ಟರೆ ಅಷ್ಟು ಜನರು ನ್ಯಾಯಕ್ಕೋಸ್ಕರ ಹಣವನ್ನು ಖರ್ಚು ಮಾಡಿಕೊಂಡು ಬೆಂಗಳೂರಿಗೆ ಬರುವುದು ಉಳಿಯುತ್ತದೆ. ನನಗೆ ಮಾನ್ಯ ನಂಜೇಗೌಡರು ಮೊದಲೆ ಒಂದು ಮಾತನ್ನು ಹೇಳಿದರು. ಬೆಂಗಳೂರು ನಗರವನ್ನು ಯಾವುದೇ ದೃಷ್ಟಿಯಿಂದ ರಾಜ್ಯದ ರಾಜಧಾನಿಯಾಗಲು ಯೋಗ್ಯವಾದಂಥ ನಗರವಲ್ಲವೆಂದು ಹೇಳಿದರು. ಅದು ಅಕ್ಷರಶಃ ಸತ್ಯ. ಕುಡಿಯುವ ನೀರು 130 ಕಿ.ಮೀ. ದೂರದಿಂದ ಬರಬೇಕು, 300 ಅಡಿಯ ಕೆಳಗಡೆಯಿಂದ ನೀರು ಪಂಪ್ ಆಗಬೇಕು. ಬೆಂಗಳೂರಿನಲ್ಲಿ ಒಂದೊಂದು ಹನಿ ನೀರು ಕೂಡ ವಿದ್ಯುತ್ ಇಲ್ಲದೆ ಬರುವುದಿಲ್ಲ. ಅದು ಪಂಪ್ ಆಗಿಯೇ ಬರಬೇಕು. ಈ ರೀತಿಯಾದಂತಹ ಪರಿಸ್ಥಿತಿ ಇದೆ. ನಾವು ಈಗಾಗಲೇ ಆಗಸ್ಟ್ ಮೊದಲನೆಯ ವಾರದಲ್ಲಿ ಇದ್ದೇವೆ. ಬೆಂಗಳೂರಿನಲ್ಲಿ ಕುಡಿಯವ ನೀರಿನ ಬಗ್ಗೆ ಬಹಳ ಆತಂಕದ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ತಿಪ್ಪಗೊಂಡನ ಹಳ್ಳಿಯಲ್ಲಿ ನೀರು ಇಲ್ಲದೆ ಒಣಗಿ ಹೋಗಿದೆ. ಕಾವೇರಿ ನದಿಯ ನೀರನ್ನು ಎಷ್ಟು ಕಡೆಗೆ ಒದಗಿಸುತ್ತಿದ್ದಾರೋ ಗೊತ್ತಿಲ್ಲ. ನಾನು ಈ ಪ್ರಪಂಚದ ಇತಿಹಾಸದಲ್ಲಿ ನಾರ್ತ್ ಜೋನ್, ಸೌಥ್ ಜೋನ್ ಎಂದು ಭಾಗವಾಗಿರುವುದನ್ನು ನೋಡಿದ್ದೇನೆ. ನಾರ್ತ್‌ನವರಿಗೆ ಸೌಥ್‌ನವರನ್ನು ಕಂಡರೆ ಆಗುವುದಿಲ್ಲ. ಅದೇ ರೀತಿಯಲ್ಲಿ ಬೆಂಗಳೂರಿನಲ್ಲಿ ಕೂಡ ನಾರ್ತ್–ಸೌಥ್ ಎಂದು ಡಿವೈಡ್ ಆಗಿರುವುದನ್ನು ನೋಡುತ್ತಿದ್ದೇವೆ. ಸೌಥ್‌ನಲ್ಲಿರುವವರಿಗೆ ಪುಷ್ಕಳವಾದ ನೀರು ಸಿಗುತ್ತಿದ್ದರೆ, ನಾರ್ತ್‌ನವರಿಗೆ ಆ ರೀತಿಯಾಗಿ ನೀರು ಕೊಡುತ್ತಿಲ್ಲ. ನೀರನ್ನು ಸಮಾನವಾಗಿ ಹಂಚಿಕೆ ಮಾಡುವುದಕ್ಕಾಗದಿದ್ದರೆ ನಾವು ಒಂದು ಬೋರ್ಡ್ ಎಂದು ಇಟ್ಟುಕೊಳ್ಳಬೇಕೇ? ಅದರ ಬದಲು ಯಾರಾದರೂ ಒಬ್ಬ ವಾಲ್ ಮೆನ್ ಮಾಡುತ್ತಾನೆ. ಒಂದು ಬೋರ್ಡ್ ಇಷ್ಟು ದೊಡ್ಡ ಎಸ್ಟಾಬ್ಲಿಶ್‌ಮೆಂಟ್ ಇಟ್ಟುಕೊಂಡು ಕುಡಿಯುವ ನೀರನ್ನು ಸಮಾನವಾಗಿ ಹಂಚುವುದಕ್ಕೆ ಆಗದಿದ್ದಲ್ಲಿ ಇದಕ್ಕೆ ಒಂದು ಸಂಸ್ಥೆ ಎಂದು ಕರೆಯಬೇಕಾ ಎನ್ನುವುದು ಒಂದು ಪ್ರಶ್ನೆ. ಇವತ್ತು ಬೆಂಗಳೂರು ನಾಗರಿಕರು ಕುಡಿಯುವ ನೀರು ನಲ್ಲಿಯಲ್ಲಿ ಬರುತ್ತದೋ, ಅಥವ ಇಲ್ಲವೋ ಎಂದು ಗಮನ ಕೊಟ್ಟು ಕಾಯಬೇಕಾಗಿರುತ್ತದೆ. ಏಕೆಂದರೆ ಈ ನೀರು ಬರುವಂಥಾದ್ದು ಮಧ್ಯರಾತ್ರಿಯ ಒಂದು ಗಂಟೆ, 2 ಗಂಟೆಯಲ್ಲಿ. ಆಗ ಹೆಣ್ಣುಮಕ್ಕಳು ಬಿಂದಿಗೆಯನ್ನು ಹಿಡಿದು ಹೊರಗಡೆ ನಿಂತುಕೊಳ್ಳಬೇಕು. ಆಗಲೂ ನೀರು ಬರುತ್ತದೋ ಅಥವ ಇಲ್ಲವೊ ಗೊತ್ತಿಲ್ಲ. ಅದರ ಬದಲಿಗೆ ಬೆಂಗಳೂರಿನಲ್ಲಿ ಏನು ಮಾಡಿದ್ದಾರೆ ಎನ್ನುವುದನ್ನು ಈ ಸದನದ ಮುಖಾಂತರ ನಮ್ಮ ಕೆಲವು ಸ್ನೇಹಿತರಿಗೆ ಹೇಳುತ್ತೇನೆ. ಇಲ್ಲಿ ಬಹಳ ಒಳ್ಳೆಯ ವ್ಯಾಪಾರವೆಂದರೆ ಒಂದು ಟ್ಯಾಂಕರ್‌ಅನ್ನು ತೆಗೆದು-

ಕೊಂಡು ನೀರನ್ನು ಸರಬರಾಜು ಮಾಡುವುದು. ಇದು ಬಹಳ ಒಳ್ಳೆಯ ವ್ಯಾಪಾರವಾಗಿದೆ. ಅದು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಇರಲಿ, ಬಿ.ಸಿ.ಸಿ. ಇರಲಿ, ಆ ನೀರಿನ ಗುಣಮಟ್ಟವನ್ನು ಯಾರೂ ಕೂಡ ಪರೀಕ್ಷೆ ಮಾಡುತ್ತಿಲ್ಲ. ಆ ನೀರು ಏನು ಎಂಬುದು ಗೊತ್ತಾಗುತ್ತಿಲ್ಲ. ಆ ನೀರನ್ನೇ ಆಸ್ಪತ್ರೆಗಳಿಗೆ, ಹೋಟೆಲ್‌ಗಳಿಗೆ, ಕಲ್ಯಾಣ ಮಂಟಪಗಳಿಗೆ ಒದಗಿಸುತ್ತಿದ್ದಾರೆ. ಆ ದೃಷ್ಟಿಯಿಂದ ಇವತ್ತು ಬೆಂಗಳೂರಿನಲ್ಲಿ ಟೈಫಾಯಿಡ್, ಕಾಮಾಲೆ ಈ ರೀತಿಯಾದಂತಹ ಎಲ್ಲಾ ಖಾಯಿಲೆಗಳು ಜಾಸ್ತಿಯಾಗುತ್ತಿವೆ. ಇದನ್ನು ಕಣ್ಣುಬಿಟ್ಟು ನೋಡುವವರಿಗೆ ಗೊತ್ತಾಗುತ್ತಿದೆ. ಆದುದರಿಂದ ಈ ಸಂದರ್ಭದಲ್ಲಿ ಬೆಂಗಳೂರು ನಗರದ ಅಭಿವೃದ್ಧಿಯ ಉಸ್ತುವಾರಿ ಹೊತ್ತಿರುವಂಥವರಿಗೆ ಕೇಳಿಕೊಳ್ಳುವುದೇನೆಂದರೆ, ಈ ಟ್ಯಾಂಕರ್‌ಗಳಲ್ಲಿ ಏನು ನೀರು ಸರಬರಾಜು ಮಾಡುತ್ತಿದ್ದಾರೆ, ಆ ನೀರನ್ನು ಪರೀಕ್ಷೆ ಮಾಡುವಂತಹ ಹೆಜ್ಜೆಯನ್ನು ತೆಗೆದುಕೊಳ್ಳಿ. ಇದು ಯಾವ ರೀತಿ ಎಂದರೆ, ಸರ್ಕಾರ ಆಸ್ಪತ್ರೆಗಳಲ್ಲಿ ಕೆಲಸ ಮಾಡುವಂತಹ ವೈದ್ಯರುಗಳು ಅವರದೇ ಆದಂತಹ ನರ್ಸಿಂಗ್ ಹೋಂಗಳನ್ನು ಇಟ್ಟುಕೊಂಡಿರುತ್ತಾರೋ ಅದೇ ರೀತಿಯಲ್ಲಿ ಬೆಂಗಳೂರು ವಾಟರ್ ಸಪ್ಲೈ ಇಂಜಿನೀಯರ್ಸ್ ಅವರದೇ ಆದ ಟ್ಯಾಂಕ್‌ಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದಾರೆ ಎಂಬ ಬಲವಾದ ಶಂಕೆ ಇದೆ. ಇದನ್ನು ಕೂಡ ನೀವು ನಿವಾರಿಸಬೇಕು. ಇವತ್ತು ಬೆಂಗಳೂರು ವಾಟರ್ ಸಪ್ಲೈನಲ್ಲಿ ನಾನು ಆಗಲೇ ಹೇಳಿದ ಹಾಗೆ ಒಂದೊಂದು ಹನಿಯೂ ಕೂಡ ಪಂಪ್ ಆಗಬೇಕು. ಇಡೀ ದೇಶದಲ್ಲಿ ಇಂದೂರು ಬಿಟ್ಟರೆ ಬೆಂಗಳೂರು ಮಾತ್ರ ಈ ವಿದ್ಯುತ್ ಮೇಲೆ ಅವಲಂಬಿಸಿರುವುದು, ಬೇರೆ ಎಲ್ಲಾ ಗ್ರಾವಿಟ್‌ನಲ್ಲಿ ಬರುತ್ತದೆ. ಈ ರೀತಿ ಇರುವಾಗ ವಾಟರ್ ಸಪ್ಲೈಗೂ ಕೂಡ ನೀವು ಕೆ.ಇ.ಬಿ. ರೇಟನ್ನು ಹಾಕುವಾಗ ಬೇರೆಯವರಿಗೆ ಹಾಕುವ ಹಾಗೆ ಹಾಕಿದರೆ ಪ್ರತಿ ತಿಂಗಳು ಐದೂವರೆ ಕೋಟಿ ರೂಪಾಯಿಗಳಿಂದ 6 ಕೋಟಿ ರೂಪಾಯಿಗಳ ಎಲೆಕ್ಟ್ರಿಸಿಟಿ ಬಿಲ್ ಕಟ್ಟಬೇಕಾಗುತ್ತದೆ. ಅವರು ಬರುವಂತಹ ರೆವಿನ್ಯೂವೆಲ್ಲಾ ಅದಕ್ಕೆ ಹಾಕಬೇಕಾಗಿದೆ. ಇನ್ನು ಹಳೆಯ ಪೈಪ್‌ಗಳನ್ನು ಬದಲಾಯಿಸುವುದರಲ್ಲಿ ಲೀಕ್ ಆಗುವಂತಹ ದೊಡ್ಡ ಪೈಪ್‌ಗಳನ್ನು ದುರಸ್ತಿ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾನು ಈ ಸಂದರ್ಭದಲ್ಲಿ ಕೇಳುವುದು ಏನೆಂದರೆ ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ಗೆ ಏನು ವಿದ್ಯುತ್ ಸರಬರಾಜು ಆಗುತ್ತಿದೆ, ಅದಕ್ಕೆ ಉಚಿತವಾಗಿ ವಿದ್ಯುತ್ ಸರಬರಾಜು ಮಾಡಬೇಕು. ಅಕಸ್ಮಾತ್ ಆಗದಿದ್ದರೆ ರಿಯಾಯಿತಿ ದರದಲ್ಲಿಯಾದರೂ ಕೂಡ ಇದು ಒಂದು ಸೇವಾ ಸಂಸ್ಥೆಯಾಗಿರುವುದರಿಂದ ನಾಗರಿಕರಿಗೆ ನೀರು ಕೊಡುವಂತಹ ಸಂಸ್ಥೆಯಾಗಿರುವುದರಿಂದ ಅವರಿಗೆ ಕೆ.ಇ.ಬಿ. ಬಿಲ್‌ನಲ್ಲಿ ರಿಯಾಯಿತಿಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಆಗ್ರಹ ಮಾಡುತ್ತೇನೆ. ನಾನು ಆಗಲೇ ಹೇಳಿದಂತೆ ಇವು ಎಷ್ಟರಮಟ್ಟಿಗೆ ಸ್ವಾಯತ್ತ ಸಂಸ್ಥೆಗಳು ಎಂಬುದು ನನಗೆ ಗೊತ್ತಿಲ್ಲವೆಂದು ಹೇಳಿದೆ. ಬಿ.ಡಬ್ಲ್ಯೂ.ಎಸ್.ಎಸ್.ಬಿ. ಒಂದು ಸ್ವಾಯತ್ತ ಸಂಸ್ಥೆ. ಅದು ನಮಗೇ ನೀರು ಕೊಡುವುದಕ್ಕೆ ಆಗುತ್ತಿಲ್ಲ. ಇಲ್ಲಿಂದ 40 ಕಿ.ಮೀ. ಆಚೆ ಇರುವಂತಹ ದೇವನಹಳ್ಳಿಗೆ ಬರಬಹುದಾದ ಇಂಟರ್ ನ್ಯಾಷನಲ್ ಏರ್ ಪೋರ್ಟ್‌ಗೆ ನೀರು ಕೊಡುತ್ತೇವೆಂದು ಬಿ.ಡಬ್ಲ್ಯೂ.ಎಸ್.ಎಸ್.ಬಿ.ಯವರು ಒಪ್ಪಿಕೊಂಡಿದ್ದಾರೆ. If they are really an autonomous institution, they should have said 'no'. ನಮ್ಮ ಕೈಯಲ್ಲಿ ಆಗುವುದಿಲ್ಲ,

ನಾವು ಬೆಂಗಳೂರಿಗೇ ನೀರು ಕೊಡುವುದಕ್ಕೆ ಆಗುತ್ತಾ ಇಲ್ಲ ಎಂದು ಹೇಳಬೇಕಾಗಿತ್ತು; ಇಲ್ಲಿ ಏನಾಗಿದೆ ಎಂದರೆ, ನಮ್ಮ ಸರ್ಕಾರದಲ್ಲಿ, ನಮ್ಮ ಆಡಳಿತದಲ್ಲಿ ನಮ್ಮ ಅಧಿಕಾರಿಗಳಲ್ಲಿ if they are asked to bend, they crawl. ಅವರು ಹೇಳಿದ್ದೇ ಕಾಯುತ್ತಾ ಇರುತ್ತಾರೆ. ಯಾರು ಅಧಿಕಾರದಲ್ಲಿ ಇರುತ್ತಾರೆ ಅವರ ಮಾತನ್ನು ಓಲೈಸುವುದಕ್ಕೋಸ್ಕರ. ತಮ್ಮ ಕೈಯಲ್ಲಿ ಆಗದಿದ್ದರೂ ಕೂಡ ನಾವು ಮಾಡುತ್ತೇವೆಂದು ಅಧಿಕಾರಿಗಳು ಹೆಜ್ಜೆ ಇಟ್ಟು ಹೋಗುತ್ತಾರೆ.

10.50 ಎ.ಎಂ

ನಾನು ಹೇಳುವುದೇನೆಂದರೆ, ನಿಜವಾದ ತಮ್ಮ ಸ್ವಾಯತ್ತತೆಯನ್ನು ತೋರಿಸುವುದಕ್ಕೆ, ತಮ್ಮ ಕೈಯಲ್ಲಿ ಏನು ಕೆಲಸವಾಗುತ್ತದೆ, ಏನು ಕೆಲಸವಾಗಿಲ್ಲವೆಂದು ತೀರ್ಮಾನ ತೆಗೆದುಕೊಂಡು ಇವತ್ತು ಹೆಜ್ಜೆ ಇಡಬೇಕಾಗಿದೆ. ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ವಾಟರ್ ಸಪ್ಲೈ ನಂತರ, ಬೆಂಗಳೂರು ನಗರಕ್ಕೆ ಇರುವ ಇನ್ನೊಂದು ಪ್ರಮುಖವಾದ ಸಂಸ್ಥೆ ಯಾವುದೆಂದರೆ, ಬೆಂಗಳೂರು ಮಹಾನಗರ ಪಾಲಿಕೆ. ಇತ್ತೀಚೆಗೆ ನಮ್ಮ ಆಡಳಿತ ಪಕ್ಷದ ಮಂತ್ರಿಗಳಿಗೆ ಒಂದು ಅಭ್ಯಾಸ ಪ್ರಾರಂಭವಾಗಿದೆ. ತಾವು ಯಾವ ಕೆಲವು ಸಂಸ್ಥೆಗಳ ಮೇಲ್ವಿಚಾರಣೆಯನ್ನು ಮಾಡುತ್ತಾರೆ, ಆ ಸಂಸ್ಥೆಗಳಿಗೆ ಬಿರುದು ಕೊಡುವುದು. ಹಿಂದೆ ಒಬ್ಬರು ವಸತಿ ಸಚಿವರಿದ್ದರು, ಅವರು 'Karnataka Housing Board is Karnataka Hell Board.' ಎಂದು ಇದೇ ಸಭೆಯಲ್ಲಿ ಹೇಳಿದ್ದರು. ಆ Hell ಅನ್ನು Heaven ಮಾಡುವುದಕ್ಕೆ ಪ್ರಯತ್ನ ಪಟ್ಟರೊ ಇಲ್ಲವೊ ಗೊತ್ತಿಲ್ಲ, ಅವರಂತೂ ಹೇವನ್ ತರಹ ಇರುವ ನ್ಯೂಡೆಲ್ಲಿಗೆ ಹೋಗಿಬಿಟ್ಟರು. ಇವತ್ತು ಬೆಂಗಳೂರಿನ ಉಸ್ತುವಾರಿಯನ್ನು ಹೊತ್ತಿರುವ ಶ್ರೀ ಅನಂತ್‌ನಾಗ್ ರವರು ಮೊನ್ನೆ ಒಂದು ಸಮಾವೇಶದಲ್ಲಿ ಮಾತನಾಡುತ್ತಾ ಬೆಂಗಳೂರು ಮಹಾನಗರ ಪಾಲಿಕೆ ಇದೊಂದು ಮಹಾನರಕ ಪಾಲಿಕೆಯಾಗಿದೆ, ಜನರೆಲ್ಲಾ ಅದನ್ನು ನರಕಪಾಲಿಕೆಯೆಂದು ಕರೆಯುತ್ತಿದ್ದಾರೆ ಎಂದು ಹೇಳಿದರು.

ಶ್ರೀ ಅನಂತ್‌ನಾಗ್ (ಬೆಂಗಳೂರು ನಗರಾಭಿವೃದ್ಧಿ ಸಚಿವರು): ಅವತ್ತು ಸಿವಿಕ್ ಎನ್ನುವ ಒಂದು ಸಂಸ್ಥೆ ಕಾರ್ಯಕ್ರಮವನ್ನು ಇಟ್ಟುಕೊಂಡು ನನ್ನನ್ನು ಕರೆದಿದ್ದರು. ಅಲ್ಲಿ ಅನೇಕ ಪ್ರಶ್ನೆಗಳನ್ನು ಕೇಳಲಾಗಿತ್ತು. ನಾನು ಅದನ್ನು ಹೇಳಲಿಲ್ಲ, ಅವರು ಚೀಟಿಯಲ್ಲಿ ಆ ಪ್ರಶ್ನೆಯನ್ನು ಬರೆದು ಕಳುಹಿಸಿದ್ದರು. ಮಹಾನರಕ ಪಾಲಿಕೆಯಾಗಿದೆ ಎಂದು ಅವರು ಅಂದರು ನಾನು ಹಾಗೆ ಹೇಳಲಿಲ್ಲ. I don't endorse it. I did not endorse it.

ಶ್ರೀ ಎಸ್. ಸುರೇಶ ಕುಮಾರ್:- ಆಯಿತು, ನಾನು ಬಹಳ ಸಂತೋಷದಿಂದ ಸ್ವೀಕರಿಸುತ್ತೇನೆ. ಆದರೆ ನರಕಪಾಲಿಕೆಯಾಗಿರುವುದಂತೂ ನಿಜ, ಈ ನರಕವನ್ನು ಹೇಗೆ ಮಾಡುವುದು? ಆದಕ್ಕೆ ನಗರಪಾಲಿಕೆಯಲ್ಲಿ ಒಂದು ಅಂಶವಿದೆ. ಬೆಂಗಳೂರಿನವರು ಯಾರು ನರಕವಾಸಿಗಳಿದ್ದಾರೆ ಅವರನ್ನು ಸ್ವರ್ಗ ವಾಸಿಗಳನ್ನಾಗಿ ಮಾಡಿಬಿಡುವುದು. ಅದಕ್ಕೆ ಮಾರೇನಹಳ್ಳಿಯಲ್ಲಿ ಬಿಲ್ಡಿಂಗ್ ಬೀಳುತ್ತದೆ, ಜಕ್ಕರಾಯನ ಕೆರೆಯಲ್ಲಿ ಬಿಲ್ಡಿಂಗ್ ಬೀಳುತ್ತದೆ, ರಸ್ತೆಯಲ್ಲಿ ಹಳ್ಳ ಮಾಡಿಸಿ, ಅಪಘಾತಗಳನ್ನು ಮಾಡಿಸುತ್ತಾರೆ. ಈ ನಗರದ ನಾಗರೀಕರನ್ನು ಸ್ವರ್ಗವಾಸಿಗಳನ್ನಾಗಿ ಮಾಡಿಬಿಡುವುದು, ಇದನ್ನು ಸ್ವರ್ಗ ಮಾಡುವುದು.

ಕುಡಿಯುವ ನೀರಿನಲ್ಲಿ ಸರಿಯಾದ ಗುಣಮಟ್ಟವನ್ನು ಕಾಪಾಡದೆಯೇ ಜಾಂಡಿಸ್ ಬಂದು ಸಾಯಲಿ, ಕಾಲರ ಬಂದು ಸಾಯಲಿ, ಟೈಫಾಯ್ಡ್ ಬಂದು ಸಾಯಲಿ, ಈ ರೀತಿ ಸ್ವರ್ಗವಾಸಿಗಳಾಗಲಿ ಎನ್ನು-ವಂಥ ಈ ಒಂದು ಮನೋಭಾವವನ್ನು ನಾವು ಇವತ್ತು ನಗರದಲ್ಲಿ ಕಾಣುತ್ತಿದ್ದೇವೆ. ಇವತ್ತು ಬೆಂಗ-ಳೂರು ನಗರವನ್ನು ಉದ್ಯಾನವನಗಳ ನಗರವೆಂದು ಇಡೀ ಭಾರತದವರೆಲ್ಲಾ ಕೊಂಡಾಡುತ್ತಾರೆ. ನಾನು, ಶ್ರೀ ಅನಂತ್‌ನಾಗ್‌ರವರನ್ನು ಕಬ್ಬನ್ ಪಾರ್ಕಿಗೆ ಕರೆದುಕೊಂಡು ಹೋಗಿದ್ದೆ. ಆ ಕಬ್ಬನ್-ಪಾರ್ಕ್ ಮತ್ತು ಲಾಲ್‌ಬಾಗ್ ಇಲ್ಲದೇ ಇದ್ದಿದ್ದರೆ, ಬೆಂಗಳೂರಿನ ಕಥೆ ಏನಾಗುತ್ತಿತ್ತು ಎಂದು ನಮಗೆ ಗೊತ್ತಿದೆ. ಅ ಕಬ್ಬನ್ ಪಾರ್ಕನ್ನು ಕೂಡ ಯಶಸ್ವಿಯಾಗಿ ಯಾವ ರೀತಿ ಎನ್‌ಕ್ರೋಚ್ ಮಾಡು-ತ್ತಿದ್ದಾರೆಂದು ನಾನು ಮಂತ್ರಿಗಳನ್ನು ಕರೆದುಕೊಂಡು ಹೋಗಿ ಕಣ್ಣಾರೆ ತೋರಿಸಿದ್ದೇನೆ. ಇದಕ್ಕೆ ನಮ್ಮ ಇಲಾಖೆಗಳವರೇ ಸಹಕಾರ ಕೊಡುತ್ತಿದ್ದಾರೆ. ಇವತ್ತು ಬೆಂಗಳೂರು ನಗರ ಉದ್ಯಾನವನಗಳ ನಗರ-ವಾಗಿ ಉಳಿದಿಲ್ಲ ಅದರ ಬದಲಾಗಿ ಕಸದನಗರ, ಗಾರ್ಬೇಜ್ ಸಿಟಿಯಾಗಿ ನಿಧಾನವಾಗಿ ಪರಿವರ್ತನೆ-ಯಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಮಾನ್ಯ ಸಭಾಧ್ಯಕ್ಷರೆ, ಕಳೆದ ಹತ್ತು ವರ್ಷಗಳಿಂದ ನಾವು ಒಂದು ಮಾತನ್ನು ಹೇಳುತ್ತಾ ಬರುತ್ತಿದ್ದೇವೆ. ಬೆಂಗಳೂರು ನಗರದ ಸ್ವಚ್ಛತೆಯ ಬಗ್ಗೆ ಒಂದು ಗಮನ ಕೊಡಿ, ಏನಾದರೂ ಒಂದು ಕಾಂಕ್ರಿಟ್ ಪ್ಲಾನ್ ತೆಗೆದುಕೊಳ್ಳಿ ಎಂದು ಹೇಳುತ್ತಿದ್ದೇವೆ, ಅದು ಆಗುತ್ತಿಲ್ಲ. ಪೌರಕಾರ್ಮಿಕರ ಅಭಾವದ ಬಗ್ಗೆ ನಿನ್ನೆ ಶ್ರೀ ಮುನಿಯಪ್ಪನವರು ಉಲ್ಲೇಖ ಮಾಡಿದ್ದಾರೆ. ಸತ್ತುಹೋಗಿರುವ ಸಿಬ್ಬಂದಿಯ ಜಾಗಕ್ಕೆ ಬೇರೆಯವರನ್ನು ನೇಮಕ ಮಾಡುವುದಕ್ಕೆ ನೀವು ಅವಕಾಶ ಕೊಡುತ್ತಿಲ್ಲ, ನಿವೃತ್ತಿಯಾಗುತ್ತಿರುವವರ ಜಾಗಕ್ಕೆ ಬೇರೆಯವರನ್ನು ಕೊಡುತ್ತಿಲ್ಲ, ಇವತ್ತು ನಾವು ಖಾಸಗೀಕರಣದ ಒಂದು ಹೆಸರನ್ನು ಕೇಳುತ್ತಿದ್ದೇವೆ. ನಗರದ ಸ್ವಚ್ಛತೆಯನ್ನು ನಾವು ಖಾಸಗಿಯವರಿಗೆ ವಹಿಸಿಬಿಡುತ್ತೇವೆಂದು ಕೇಳುತ್ತಿದ್ದೇವೆ. ಖಾಸಗೀಕರಣದ ಒಂದು ಮಾತಿನಿಂದ ನಾವು ಎಷ್ಟು ಪ್ರಭಾವಿ-ತರಾಗಿದ್ದೇವೆ ಎಂದರೆ, ನಿನ್ನೆ ಮೊನ್ನೆ ಎಲ್ಲಾ ನಮ್ಮ ಹಿರಿಯನಾಯಕರು ಮುಂದಿನ ಸಾಲಿನ ಯಾವ ಮಂತ್ರಿಗಳೂ ಬರುತ್ತಿಲ್ಲವೆಂದು ಹೇಳುತ್ತಿದ್ದರು. ಈ ಮಂತ್ರಿಮಂಡಲ ಮಾಡುವ ಕೆಲಸವನ್ನು ಕೂಡ ಏತಕ್ಕೆ ಖಾಸಗಿಯವರಿಗೆ ವಹಿಸಬಾರದು? It is my humble question. ಏಕೆ ಮಾಡ-ಬಾರದು? ಟೆಂಡರ್ ಹಾಕುವುದು, go for privatisation here also. After all libra-lisation is better service. ಆದರೆ ಬೆಂಗಳೂರಿನಲ್ಲಿ ಸ್ವಚ್ಛತೆಯ ಬಗ್ಗೆ ಖಾಸಗೀಕರಣ ಮಾಡಿ-ದಾಗ ಏನಾಗುತ್ತಿದೆ ಎಂದರೆ, ಕೆಲವು ರಾಜಕಾರಣಿಗಳು ಅಥವಾ ಕೆಲವು ಅಧಿಕಾರಿಗಳು, ಆರೋಗ್ಯ ಅಧಿಕಾರಿಗಳು ತಾವೇ ಲಾರಿಗಳನ್ನು ಇಟ್ಟುಕೊಂಡು, ತಾವೇ ಕ್ಲೀನಿಂಗ್ ಕೆಲಸವನ್ನು ತೆಗೆದುಕೊಂಡು, ಒಂದು ಲಾರಿ ಇಟ್ಟುಕೊಂಡು ಮೂರು ನಾಲ್ಕು ವಿಭಾಗಗಳಲ್ಲಿ ಸ್ವಚ್ಛತೆ ಮಾಡುತ್ತೇವೆಂದು ಯಾರನ್ನು ಕೆಲಸಕ್ಕೆ ತೆಗೆದುಕೊಂಡಿದ್ದಾರೆ ಅವರನ್ನು ಶೋಷಣೆ ಮಾಡಿ, ಇವತ್ತು ಕನಿಷ್ಟವೇತನವನ್ನು ಕೊಡದೆ ನಗರವನ್ನು ಇನ್ನಷ್ಟು ಹಾಳುಗೆಡಿಸುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಈ ದೃಷ್ಟಿಯಿಂದ ನಾವು ಸ್ವಚ್ಛತೆಯ ಬಗ್ಗೆ ಗಮನ ಕೊಡದೇ ಇದ್ದರೆ, ಬೆಂಗಳೂರು ನಗರ ಏನು ಹಾಳಾಗುತ್ತಿದೆ ಅದಕ್ಕೆ ನಾವು ಸಹಕಾರ ಕೊಟ್ಟಂತಾಗುತ್ತದೆ. ಎರಡನೆಯದು, ಬೆಂಗಳೂರಿನಲ್ಲಿ ಕಸವನ್ನು ಹೇಗೆ ಸಾಗಿಸುತ್ತಾರೆಂದು

ಮಂತ್ರಿಗಳು ನೋಡಿರಬಹುದು. ಸಭಾಧ್ಯಕ್ಷರೆ, ಬೆಂಗಳೂರಿನಲ್ಲಿ ಆಗ ಬೇಕಾಗಿರುವುದು ಡಿಸ್ಪೋಸಲ್ ಆಫ್ ಗಾರ್ಬೇಜ್. ಈಗ ಆಗುತ್ತಿರುವುದೇನು? It is dispersal of garbage. ಆ ಲಾರಿ ಹೋಗುತ್ತವಲ್ಲ, ಹೋಗುವಾಗ ಎಲ್ಲಾ ಕಡೆ ಕಸವನ್ನು ಹರಡಿಕೊಂಡು ಹರಡಿಕೊಂಡು ಹೋಗುತ್ತವೆ. ಆ ಲಾರಿ ಹಿಂದೆ ಹೋದವನಿಗೆ ಗೊತ್ತು ಅದು ಎಂತಹ ನರಕವೆಂದು. ಇದರ ಬಗ್ಗೆಯೂ ಕೂಡ ಸಾಧ್ಯವಾದಷ್ಟು ಸಲ ನಾವು ಗಮನಕ್ಕೆ ತಂದಿದ್ದೇವೆ ಒಂದು ಏನಾದರೂ ಕವರ್ ಮಾಡಿ, ಈ ಕಸ-ವನ್ನು ರಾತ್ರಿವೇಳೆ ಸಾಗಾಣಿಕೆ ಮಾಡಿ ಎಂದು ಹೇಳಿದರೂ ಮಾಡುತ್ತಿಲ್ಲ. ಸ್ವಚ್ಛತೆಯಲ್ಲಿ ಬಹಳ ಪ್ರಮುಖ ಅಂಶವೆಂದರೆ, ಇವತ್ತು ಈ ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ನಂತರ ಬರುತ್ತಿರು-ವುದು ಈ ಕಸದ ಸಮಸ್ಯೆ. ದಿವಸಕ್ಕೆ 2700 ಟನ್ ಕಸ ಇಲ್ಲಿ ಇವತ್ತು ಉತ್ಪಾದನೆಯಾಗುತ್ತಿದೆ. ಅದನ್ನು ಏನು ಮಾಡಬೇಕೆಂದು ನಮಗೆ ಗೊತ್ತಾಗುತ್ತಿಲ್ಲ. ಬೊಮ್ಮನ ಹಳ್ಳಿಯಲ್ಲಿ ಕಾಂಪೋಸ್ಟ್ ಯಾರ್ಡ್ ಎಂದು ಒಂದಿದೆ, ಅವರಿಗೆ ಅದೂ 150 ಟನ್ ಮಾರ್ಕೆಟ್ ಗಾರ್ಬೇಜ್ ಬಂದರೆ ಸಾಕು ಅವರು ಅದಕ್ಕಿಂತ ಹೆಚ್ಚಿಗೆ ಮಾಡುವುದಕ್ಕಾಗುವುದಿಲ್ಲ. ಇನ್ನು ಉಳಿದ ಕಸವನ್ನು ಎಲ್ಲಿ ಸಾಗಿಸ-ಬೇಕೆಂದು ಗೊತ್ತಿಲ್ಲ. ಬೆಂಗಳೂರು ನಗರ, ಮಹಾನಗರಪಾಲಿಕೆಯಾಗಿ, ಸುಮಾರು ಇನ್ನೂರ ಇಪ್ಪತ್ತು ಕೋಟಿ ರೂಪಾಯಿಗಳ ಆಯವ್ಯಯವಿರುವ ಒಂದು ಸಂಸ್ಥೆಯಾಗಿ ಇದುವರೆಗೂ ಕೂಡ ಒಂದು ಡಂಪಿಂಗ್ ಯಾರ್ಡ್ ಎಂದು ಮಾಡಿಲ್ಲ. ಆ ಮಾಗಡಿರಸ್ತೆಯಲ್ಲಿ ಎಲ್ಲೋ ತೆಗೆದುಕೊಂಡು ಹೋಗು-ತ್ತಾರೆ, ರಸ್ತೆಯಲ್ಲೇ ಕಸವನ್ನು ಸುರಿದು ಬರುತ್ತಾರೆ. ಸುಮಾರು ಒಂದೂವರೆ, ಎರಡು ವರ್ಷಗಳ ಹಿಂದೆ ಪ್ಲೇಗ್ ಬಂತು, ಆ ಲಾರಿ ಡ್ರೈವರ್‌ಗಳು ಸುತ್ತಮುತ್ತಲಿನ ಹಳ್ಳಿಯವರ ಹತ್ತಿರ ಯಾವ್ಯಾವ ರೀತಿ ಏಟನ್ನು ತಿಂದಿದ್ದಾರೆಂದು ನಮಗೆ ಗೊತ್ತಿದೆ. ಪ್ಲೇಗ್ ಬರುತ್ತದೆಂದು ಕಸವನ್ನು ಹಳ್ಳಿಯವರು ಹಾಕಿಸಿ-ಕೊಳ್ಳುವುದಕ್ಕೆ ತಯಾರಿರಲಿಲ್ಲ. ಇದುವರೆಗೂ ವೈಜ್ಞಾನಿಕ ವಿಧಾನವಾಗಿ ಒಂದು ಡಂಪಿಂಗ್ ಯಾರ್ಡ್‌ನ್ನು ನೀವು ಮಾಡಿಲ್ಲ, ಅಲ್ಲಿ ಫೆನ್ಸಿಂಗ್ ಹಾಕಿ, ಪ್ರತಿ ದಿವಸ ಕಸ ಸಂಗ್ರಹಣೆಯಾದ ಮೇಲೆ ನೀವು ಒಂದು ಲೇಯರ್ ಮಣ್ಣು ಹಾಕಿ, let it become a scientific dumping yard ಎಂದು ಕೇಳುತ್ತಾ ಬರುತ್ತಿದ್ದೇವೆ. ಆದರೆ ಅದರ ಬಗ್ಗೆ ಇದುವರೆಗೂ ಒಂದು ಹೆಜ್ಜೆಯನ್ನು ಇಟ್ಟಿಲ್ಲ. ಅದಾದ ನಂತರ ಕಾರ್ಪೋರೇಷನ್‌ನಲ್ಲಿ ಇಂಜಿನಿಯರಿಂಗ್ ಇಲಾಖೆಯೆಂದು ಒಂದು ದೊಡ್ಡ ಇಲಾಖೆಯಿದೆ. Many times I feel it is an insult to engineering. ಅಲ್ಲಿರುವ ಇಂಜಿನಿಯರ್ಸ್‌ಅನ್ನು ನೀವು ನೋಡಿದರೆ ಖಂಡಿತವಾಗಿ ಅವಮಾನ. They are definitely insults. ಅವರಿಗೆ ಎಸ್ಟಿಮೇಟ್ ಮಾಡುವುದಕ್ಕೆ ಬರುವುದಿಲ್ಲ. ಸಚಿವರೆ, ತಮಗೆ ನಗುಬರಬಹುದು, ಒಂದು ಬಿಲ್ಡಿಂಗ್ ಎಸ್ಟಿಮೇಟ್ ಮಾಡಿದರು, ಅದರಲ್ಲಿ ರೂಫೇ ಸೇರಿಸಿಲ್ಲವೆಂದು ಟೆಂಡರ್ ಹಾಕು-ವಾಗ ಗೊತ್ತಾಯಿತು. ಅಲ್ಲಿ ಈ ರೀತಿಯ ಇಂಜಿನಿಯರ್‌ಗಳಿದ್ದಾರೆ. ಎಲ್ಲಾ ಪೂಲ್ ಮಾಡಿಕೊಂಡು ಒಬ್ಬನನ್ನು ಇಟ್ಟುಕೊಳ್ಳುತ್ತಾರೆ, ಅವನು ಬಂದು ಎಸ್ಟಿಮೇಟ್ ಮಾಡಿಕೊಡಬೇಕು, ಇವರು ಮಾಡು-ವುದಕ್ಕೆ ಹೋಗುವುದಿಲ್ಲ. ಇದುವರೆಗೂ ಈ ಇಂಜಿನಿಯರ್‌ಗಳು ಬಲವಾಗಿ ಬೇರೂರಿಬಿಟ್ಟಿದ್ದಾರೆ. ಆ ಇಂಜಿನಿಯರ್ಸ್ ನೋಡಿದಾಗ ನನಗನಿಸಿತು, ಬೆಂಗಳೂರು ಮಹಾನಗರ ಪಾಲಿಕೆ it is very

weak. ನಿಮ್ಮ ಕೆಎಂಸಿ ಆಕ್ಟ್ ಅದನ್ನೆಲ್ಲಾ ನೋಡಿದಾಗ ಅದು ಬಹಳ ವೀಕ್. ಆದರೆ ಅಲ್ಲಿ ಯಾರು ಕೆಲಸ ಮಾಡುತ್ತಾರೆ ಅವರು ಬಹಳ ಪವರ್‌ಫುಲ್. ಅವರಿಗೆ ಬೇಕಾದ ಮನೆಯನ್ನು ಒಡೆಸುತ್ತಾರೆ, ಬೇಕಾದ ಮನೆಯನ್ನು ಕಟ್ಟಿಸುತ್ತಾರೆ, ಬೇಕಾದಂತೆ ಮಾಡಿಕೊಳ್ಳಬಹುದು. ಅದೇ ರೀತಿ ಮಹಾನಗರ-ಪಾಲಿಕೆಯನ್ನು ಹಣಕಾಸಿನ ದೃಷ್ಟಿಯಿಂದ ನೋಡಿದರೆ, ಬೆಂಗಳೂರು ಮಹಾನಗರ ಪಾಲಿಕೆ ಬಹಳ ಬಡಸಂಸ್ಥೆ. It is a very poor organisation. ಆದರೆ ಕಾರ್ಪೊರೇಷನ್‌ನಲ್ಲಿ ಇರುವವರು they are wealthy, rich. ಅಷ್ಟು ದುಡ್ಡನ್ನು ಅವರು ಮಾಡಿದ್ದಾರೆ. ಇದರ ಬಗ್ಗೆ ನಾವೇನಾದರೂ ಗಮನವನ್ನು ಕೊಟ್ಟಿದ್ದೇವೆಯೇ? ಆ ಇಂಜಿನಿಯರಿಂಗ್ ಇಲಾಖೆಯಲ್ಲಿ, ಈಗ ನಮ್ಮ ಸ್ನೇಹಿತರು ಹೇಳಿದರು . . .

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಸಚಿವರು ಇದ್ದಾರೆ. ಬೆಂಗಳೂರು ಮಹಾನಗರ ಪಾಲಿಕೆಗೆ ಮೂರು ಜನ ಚೀಫ್ ಇಂಜಿನಿಯರ್ಸ್, ಮೂರು ಜನ ಡೆಪ್ಯೂಟಿ ಕಮಿಷನರ್ಸ್, ಈಗ ಮತ್ತೆ ಇನ್ನಿಬ್ಬರು ಡೆಪ್ಯೂಟಿ ಕಮಿಷನರ್ಸ್‌ನ್ನು ಮಾಡುವುದಕ್ಕೆ ಹೊರ-ಟಿದ್ದಾರೆ ಯಾವ ಪುರುಷಾರ್ಥಕ್ಕೆ? ಬೆಂಗಳೂರು ಮಹಾನಗರ ಪಾಲಿಕೆಗೆ ಒಬ್ಬ ಸೂಪರಿಂಟೆಂಡೆಂಟ್ ಇಂಜಿನಿಯರ್ ಸಾಕು; ಮೂರು ಜನ ಚೀಫ್ ಇಂಜಿನಿಯರ್ಸ್ ಇದ್ದಾರೆ. ಯಾವುದೋ ಉದ್ದೇಶ-ವಿಟ್ಟುಕೊಂಡು, ಯಾರದೋ ಉದ್ದೇಶವಿಟ್ಟುಕೊಂಡು, ಯಾರನ್ನೋ ಹಾಕುವುದಕೋಸ್ಕರವಾಗಿ ಅಲ್ಲಿ ಅಧಿಕಾರ ವಿಕೇಂದ್ರೀಕರಣವೆಂದು ನಾವು ಅಲ್ಲಿ ಈ ಅಧಿಕಾರಿಗಳನ್ನು ತಯಾರು ಮಾಡುತ್ತಿದ್ದೇವೆ. ನಾಲ್ಕು ನಾಲ್ಕು, ಐದೈದು ಜನರಿದ್ದಾರೆ, ಬೆಂಗಳೂರು ಮಹಾನಗರ ಪಾಲಿಕೆಗೆ ಮೂರು ಜನ ಚೀಫ್ ಇಂಜಿನಿಯರ್ಸ್ ಏತಕ್ಕೆ ಬೇಕಾಗಿದೆ? ಈಗಾಗಲೇ ಮೂರು ಜನ ಡೆಪ್ಯೂಟಿ ಕಮಿಷನರ್ಸ್ ಇದ್ದಾರೆ, ಇನ್ನಿಬ್ಬರು ಡೆಪ್ಯೂಟಿ ಕಮಿಷನರ್ಸ್ ಮಾಡಲು ಹೊರಟಿದ್ದೀರಿ, ಕೆಳಗಡೆ ಇರುವವರನ್ನು ಬೇಕಾಗಿದ್ದರೆ ಬಿಡಿ. ಇದೆಲ್ಲಾ ಏತಕ್ಕೆ ಬೇಕು? ನನಗನಿಸುತ್ತದೆ ಇವತ್ತು ಅವರು ಮಾಡತಕ್ಕಂಥ ಕೆಲಸಕ್ಕೆ ಒಬ್ಬ ಸೂಪರಿಂಟೆಂಡೆಂಟ್ ಇಂಜಿನಿಯರ್ ಸಾಕು. ಒಬ್ಬ ಕಮಿಷನರ್, ಆಡಳಿತಾಧಿಕಾರಿ, ಹೀಗೆ ಬೆಂಗ-ಳೂರು ಮಹಾನಗರ ಪಾಲಿಕೆ ಅದೇನು ಬೆಂಗಳೂರನ್ನು ನಾಶಮಾಡಲು ಹೊರಟಿದೆಯೇ? ಎಷ್ಟು ಜನ ಅಧಿಕಾರಿಗಳು ಇರುವುದು ಸ್ವಾಮಿ? ನನಗನಿಸುತ್ತದೆ. ಅದು ನಿಜವಾಗಿಯೂ ಬೆಂಗಳೂರು ಜನತೆಗೆ ಶಾಪವಾಗಿದೆಯೇ ಹೊರತು ವರವಾಗಿಲ್ಲ. ನಿಜವಾಗಿಯೂ ಬೆಂಗಳೂರು ಜನತೆಗೆ ಅದೊಂದು ರೀತಿ ಕೆಟ್ಟ ಪರಿಣಾಮವಾಗಿದೆ. ನಾನು ಹೇಳುತ್ತೇನೆ, ಮಾನ್ಯ ಮಂತ್ರಿಗಳಿಗೆ ಈ ಬಗ್ಗೆ ಮತ್ತೆ ಎರಡು ಡೆಪ್ಯುಟಿ ಕಮಿಷನರ್ಸ್ ಮಾಡಬೇಕೆಂದು ತಮ್ಮಲ್ಲಿಗೆ ಪ್ರಸ್ತಾವನೆ ಬಂದಿದೆ, ಇನ್ನಿಬ್ಬರನ್ನು ಏತಕ್ಕೆ ಅಲ್ಲಿಗೆ ತೆಗೆದು-ಕೊಂಡು ಹಾಕಬೇಕಾಗಿದೆ? ಯಾವ ಪುರುಷಾರ್ಥಕ್ಕೆ ಹಾಕಬೇಕಾಗಿದೆ? ಬೆಂಗಳೂರು ನಗರದ ಜನತೆಯ ಹಣವನ್ನು ತೆಗೆದುಕೊಂಡು ಏನು ಮಾಡಬೇಕೆಂದು ಹೊರಟಿದ್ದೀರಿ? ಒಬ್ಬನೇ ಚೀಫ್ ಇಂಜಿನಿಯರ್ ಸಾಕು ಉಳಿದವರನ್ನು ಕಡಿಮೆ ಮಾಡುವುದಕ್ಕೆ ನಾವು ತೀರ್ಮಾನ ಮಾಡಿದ್ದೇವೆಂದು ನೀವು ಸ್ಪಷ್ಟವಾಗಿ ಉತ್ತರ ಕೊಡುವಾಗ ಹೇಳಿ. ಬೆಂಗಳೂರು ಮಹಾನಗರಪಾಲಿಕೆಗೆ ಇಷ್ಟೊಂದು ಜನ ಏತಕ್ಕೆ ಬೇಕು ಸ್ವಾಮಿ? ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್‌ಗೆ ಒಬ್ಬನೇ ಒಬ್ಬ ಕಮಿಷನರ್, ಆದರೆ

ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಮೂರು ಜನ, ಇಷ್ಟು ಜನ ಏತಕ್ಕೆ ಬೇಕಾಗಿದೆ? ನನಗನಿಸುತ್ತದೆ, ಇದೇನು ಒಳ್ಳೆಯ ಸೂಚನೆಯಲ್ಲ.

ಉಪಾಧ್ಯಕ್ಷರು:- ಅವರು ಉತ್ತರ ಕೊಡುವಾಗ ಹೇಳುತ್ತಾರೆ.

ಶ್ರೀ ಎನ್.ರಾಜಣ್ಣ:- ಒಂದು ವಿಷಯ ಕೇಳಿ. ಅಲ್ಲಿ ಏಕೆ ಮೂರು ಜನ ಎಂದರೆ ಅವರು ಕಪ್ಪು ಗಾಜಿರುವ ಕಾರಿನೊಳಗಡೆ ಕುಳಿತುಕೊಂಡು ಬಿಟ್ಟರೆ ಜನರು ಕಾಣಿಸಕೂಡದು. ಬಯಲು ಪ್ರದೇಶ, ಡಸ್ಟ್ ಬಿನ್‌ಗಳು ಕಾಣಿಸುವುದಿಲ್ಲ. ಅವರಿಗೆ ಕಾರು, ಡ್ರೈವರ್, ಜವಾನ, ಡೀಸೆಲ್ ಇಷ್ಟೆಲ್ಲಾ ಕೊಟ್ಟು ಅವರು ಹೈಕೋರ್ಟಿನಿಂದ ಸುಪ್ರೀಂ ಕೋರ್ಟಿಗೆ, ಸುಪ್ರೀಂ ಕೋರ್ಟಿನಿಂದ ಹೈ ಕೋರ್ಟಿಗೆ ತಿರುಗುತ್ತಾರೆ. ಬೆಳಿಗ್ಗೆ ಇಲ್ಲಿ, ಮಧ್ಯಾಹ್ನ ಡೆಲ್ಲಿಯಲ್ಲಿ ಮತ್ತೆ ಸಂಜೆ ತಿರುಗಿ ಬೆಂಗಳೂರು.

ಶ್ರೀ ಅನಂತನಾಗ್:- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಕೂಡ ಕಾರ್ಪೊರೇಟ್ ಆಗಿದ್ದವರು, ಅವರಿಗೂ ಕೂಡ ಅಲ್ಲಿಯ ಅನುಭವ ಇದೆ.

ಶ್ರೀ ಎಸ್. ಸುರೇಶ್ ಕುಮಾರ್:- ಹಿರಿಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಬಹಳ ಪ್ರಮುಖವಾದ ಅಂಶವನ್ನು ಇವತ್ತು ಪ್ರಸ್ತಾಪ ಮಾಡಿದ್ದಾರೆ. ಒಬ್ಬ ಚೀಫ್ ಇಂಜಿನಿಯರ್ ಇದ್ದ ಕಡೆ ಇವತ್ತು ಮೂರು ಜನ ಮಾಡಿದ್ದಾರೆ. ಬಹಳ ಸ್ವಾರಸ್ಯವೆಂದರೆ ಮೂರು ಜನರಲ್ಲಿ ಒಬ್ಬರೂ ಕೂಡ ಹೊರಗಡೆಯಿಂದ ಬಂದವರಲ್ಲ. 6-8 ವರ್ಷ ಅವರು ನಿಂತ ನೀರಾಗಿ ಪಾಚಿ ಕಟ್ಟಿಕೊಂಡು ಯಾವುದೇ ಕೆಲಸಕ್ಕೆ ಉಪಯೋಗ ಇಲ್ಲದೇ ಇರುವಂಥ ಪರಿಸ್ಥಿತಿ ಬರುತ್ತದೆ. ಇನ್ನೂ ಅವರು ಆರು ವರ್ಷ ಇರುತ್ತಾರೆ. ಮುಂಚೆ ಒಂದು ಅಭ್ಯಾಸವಿತ್ತು. ಪಿ.ಡಬ್ಲ್ಯು.ಡಿ.ಯಿಂದ ಡೆಪ್ಯುಟೇಷನ್ ಮೇಲೆ ಕಳುಹಿಸುತ್ತಿದ್ದರು. ಈಗ ಏನಾಗಿದೆ ಎಂದರೆ ಯಾರ‍್ಯಾರು ಮಾರೇನಹಳ್ಳಿಯಲ್ಲಿ ಬಿಲ್ಡಿಂಗ್ ಕಟ್ಟಿಸಿದರು, ಸುಜಾತ ಹತ್ತಿರ ಬ್ರಿಡ್ಜ್ ಕಟ್ಟಿಸಿದರು, ಯಾರ‍್ಯಾರು ಬೆನ್ಸನ್ ಟೌನಿನಲ್ಲಿ ಬ್ರಿಡ್ಜ್ ಕಟ್ಟಿಸಿದರು ಇವರುಗಳು ಇವತ್ತು ನಮ್ಮ ಚೀಫ್ ಇಂಜಿನಿಯರ್ ಆಗಿದ್ದಾರೆ. ಬೆಂಗಳೂರು ನಗರವನ್ನು ಏನು ಮಾಡುವುದಕ್ಕೆ ಹೊರಟಿದ್ದೀರಿ? ನಾನು ಅದಕ್ಕೇ ತಮಾಷೆಯಾಗಿ ಹೇಳಿದೆ, ಮೂರು ಜನ ಚೀಫ್ ಇಂಜಿನಿಯರ್ ಬೇಡ. ನೂರು ವಾರ್ಡುಗಳು ಏನಿವೆ, ಅಲ್ಲಿಗೆ ನೂರು ಚೀಫ್ ಇಂಜಿನಿಯರ್‌ಅನ್ನು ಮಾಡಿ. Let it be headed by a J.E. ಇವತ್ತು ಏನೂ ವ್ಯತ್ಯಾಸ ಉಳಿದಿಲ್ಲ. ಅದನ್ನೇನಾದರೂ ಮಾಡಿದರೆ ನಗರಪಾಲಿಕೆಯಲ್ಲಿ ಆಗಲಾದರೂ ಇವರು ಏನು ಕೆಲಸ ಮಾಡುತ್ತಾರೆ ಎನ್ನುವುದನ್ನು ನಾವು ನೋಡಬಹುದು. ಮಾನ್ಯ ಉಪಾಧ್ಯಕ್ಷರೇ, ಇವತ್ತು ಏನಾಗಿದೆ ಎಂದರೆ ಈ ಇಂಜಿನಿಯರ್‌ಗಳು ಕ್ಷೇತ್ರದಲ್ಲಿ ಓಡಾಡುವುದಕ್ಕಿಂತ ಜಾಸ್ತಿ ಮಂತ್ರಿಗಳ ಮನೆಯಲ್ಲಿರುತ್ತಾರೆ, ಅದಕ್ಕಿಂತ ಜಾಸ್ತಿ ವಕೀಲರುಗಳ ಮನೆಯಲ್ಲಿರುತ್ತಾರೆ, ಅದಕ್ಕಿಂತ ಜಾಸ್ತಿ ಕೋರ್ಟಿನಲ್ಲಿರುತ್ತಾರೆ. ಇವರು ಬರೀ ತಮ್ಮ ಪೋಸ್ಟಿಂಗ್, ಟ್ರಾನ್ಸ್‌ಫರ್, ಗ್ರೇಡೇಷನ್ ಲಿಸ್ಟ್ ಇದರಲ್ಲಿ ಮುಳುಗಿದ್ದಾರೆಯೇ ಹೊರತು ಈ ಕ್ಷೇತ್ರಕ್ಕೆ ನಾನೇನು ಮಾಡಬೇಕು ಎನ್ನುವ ಮನೋಭಾವನೆ ಇಲ್ಲ. ಇವರ ಮೇಲೆ ನೀವು ಇದುವರೆಗೂ ನಿಯಂತ್ರಣ ಸಾಧಿಸಲು ಆಗಿದೆಯೇ? ಅದನ್ನು ನೋಡುವುದಕ್ಕೆ ಹೋಗುವುದಿಲ್ಲ. ಇವತ್ತು ಈ ಹಂತದಲ್ಲಿ ನಗರಪಾಲಿಕೆಗೆ

ಕಾಯಕಲ್ಪ ಕೊಡುವುದರ ಬದಲಿಗೆ ಅದನ್ನು ಇನ್ನಷ್ಟು ಹಾಳು ಮಾಡಲು ಒಂದು ಕಾರ್ಯಕ್ರಮ ನಡೆಯುತ್ತಿದೆ. ನೆಪೋಟಿಸಂ ಎನ್ನುವುದಕ್ಕೆ ಬಹಳ ಉತ್ಕೃಷ್ಟ ಉದಾಹರಣೆ ಎಂದರೆ ಬೇರೆ ಇಲಾಖೆ-ಗಳಿಂದ ಎರವಲು ಪಡೆದ ಇಂಜಿನಿಯರುಗಳ ಸೇವೆಯನ್ನು ನಗರಪಾಲಿಕೆಯಲ್ಲಿ ವಿಲೀನಗೊಳಿಸ-ಬಾರದು ಎಂದು ಕರ್ನಾಟಕ ಉಚ್ಛ ನ್ಯಾಯಾಲಯ, ಹುಬ್ಬಳ್ಳಿ ನಗರಪಾಲಿಕೆ ಪ್ರಕರಣವೊಂದರಲ್ಲಿ ತೀರ್ಪು ನೀಡಿದ್ದಾಗ್ಯೂ ಸಹ ಶ್ರೀ ಸಿದ್ದೇಗೌಡ ಎನ್ನುವವರು ಒಬ್ಬರು, ನಮ್ಮ ಹಿಂದಿನ ಮುಖ್ಯಮಂತ್ರಿ-ಗಳ ಸಂಬಂಧಿ. ಇನ್ನೊಬ್ಬರು ಶ್ರೀ ರಾಜೀವ್ ಎಂದು, ಅವರು ಲೋಕಸೇವಾ ಆಯೋಗದ ಅಧ್ಯಕ್ಷರ ಅಳಿಯ, ಇವರಿಬ್ಬರನ್ನೂ ಇತ್ತೀಚೆಗೆ, ಈ ಒಂದು ತಿಂಗಳಲ್ಲಿ ಮಹಾ ನಗರಪಾಲಿಕೆಯಲ್ಲಿ ಅವರ ಸೇವೆಯನ್ನು ಅಬ್‌ಸಾರ್ಬ್ ಮಾಡಿಕೊಂಡಿದ್ದಾರೆ. ಏಕೆ ಮಾಡಿದರು? Because some are more than equal ಎಂದೇ. ಅವರಿಗೆ ಕಾನೂನು ಕಟ್ಟಳೆಗಳು ಅಡ್ಡ ಇಲ್ಲವೆ? ಅಥವಾ ಅವರೇ-ನಾದರೂ, ಐ.ಐ.ಟಿ. ಕರಪ್ಪೂರು ಅಲ್ಲಿಂದೇನಾದರೂ ಹೊತ್ತುಕೊಂಡು ಬಂದಿದ್ದಾರೆಯೇ ಇವರು ಬೆಂಗಳೂರನ್ನು ಉದ್ಧಾರ ಮಾಡುವುದಕ್ಕೆ ಎನ್ನುವುದು ನನಗೆ ಗೊತ್ತಿಲ್ಲ. ಏಕೆ ಹೀಗೆ ಮಾಡಿದಿರಿ? ಇದರ ಜೊತೆಗೆ ಈಗ ನಗರಪಾಲಿಕೆಯಲ್ಲಿರುವ ಕೇಸುಗಳೇ ಸಾಕು. ಅವನ್ನೇ ಎದುರಿಸಲಿಕ್ಕೆ ಆಗುತ್ತಿಲ್ಲ. ಸುಮಾರು ಜನ ಅಸಿಸ್ಟೆಂಟ್ ಇಂಜಿನಿಯರ್‌ಗಳು ಯಾರು ಡೈಲಿ ವೇಜಸ್‌ನಲ್ಲಿ ಅಪಾಯಿಂಟ್ ಆಗಿ-ದ್ದರು, ಅವರನ್ನು ಇವತ್ತು ಎ.ಇ.ಇ. ಮಾಡುವುದಕ್ಕೆ ಹೊರಟಿದ್ದೀರಿ. ನನ್ನ ಹತ್ತಿರ ಸುಮಾರು ಪಟ್ಟಿ-ಗಳಿವೆ. ಯಾರ್‍ಯಾರನ್ನು ಯಾವ್ಯಾವ ದಿನಾಂಕದಲ್ಲಿ ನೀವು ಮಾಡಿದ್ದೀರಿ ಎಂದು. 240 ದಿವಸ ಕಂಪ್ಲೀಟ್ ಮಾಡಬೇಕಾಗಿತ್ತು, ಅದನ್ನು ಕಂಪ್ಲೀಟ್ ಮಾಡಿಲ್ಲದೇ ಇರುವವರನ್ನೆಲ್ಲಾ ಇವತ್ತು ಎ.ಇ.ಇ. ಮಾಡುವುದಕ್ಕೆ ಹೊರಟಿದ್ದೀರಿ. ಮಾನ್ಯ ಸಚಿವರು ಉತ್ತರ ಕೊಡುವಾಗ ನಗರಪಾಲಿಕೆಯಲ್ಲಿ ಎ.ಇ.ಇ. ಗಳನ್ನು ಮಾಡುವಾಗ ಯಾವ ಧೋರಣೆಯನ್ನು ಅನುಸರಿಸಿದ್ದೀರಿ? ಈಗ ಯಾರ್‍ಯಾರಿಗೆ ಮಾಡ-ಬಾರದು, ಅದನ್ನು ಏಕೆ ಮಾಡುವುದಕ್ಕೆ ಹೊರಟಿದ್ದೀರಿ ಎನ್ನುವುದಕ್ಕೆ ದಯವಿಟ್ಟು ಉತ್ತರ ಕೊಡ-ಬೇಕು. ಬೆಂಗಳೂರು ನಗರದಲ್ಲಿರುವ ಇನ್ನೊಂದು ಶಾಪವೆಂದರೆ ಆಸ್ತಿ ತೆರಿಗೆ. 1986ನೇ ಇಸವಿಯಲ್ಲಿ ಬೆಂಗಳೂರಿನಲ್ಲಿ ಸಿಕ್ಕಾಪಟ್ಟೆ ಡಕಾಯಿತಿ ನಡೆಯಿತು. ಪ್ರತಿ ದಿವಸ ಬೆಳಿಗ್ಗೆ ಪೇಪರ್ ನೋಡುವುದಕ್ಕೆ ನಮಗೆ ಭಯವಾಗುತ್ತಿತ್ತು, ಎಲ್ಲೆಲ್ಲಿ ಡಕಾಯಿತ ನಡೆದಿದೆಯೋ ಎಂದು. ತಮಗೆ ಆಶ್ಚರ್ಯ ಎನಿಸ-ಬಹುದು, ಮೊದಲನೇ ಡಕಾಯಿತಿ ನಡೆದದ್ದು ಎಲ್ಲಿ ಎಂದರೆ ಕಾರ್ಪೋರೇಷನ್ನಿನ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಮನೆಯಲ್ಲಿ. ಅಂದರೆ ಎಲ್ಲಿ ದುಡ್ಡು ಸಿಗುತ್ತದೆ ಎಂದು ಡಕಾಯಿತರಿಗೂ ಗೊತ್ತು. ಇವತ್ತು ಪ್ರಾಪರ್ಟಿ ಟ್ಯಾಕ್ಸ್ ಎನ್ನುವುದು ಬೆಂಗಳೂರಿನ ತೆರಿಗೆದಾರರ ಮೇಲೆ ನಡೆಯುತ್ತಿರುವ ಹಗಲು-ದರೋಡೆ. ಯಾವುದೇ ಒಂದು ಬೇಸಿಸ್ ಇಲ್ಲ, ಯಾವುದೇ ಒಂದು ಫಾರ್ಮುಲ ಇಲ್ಲ. ನಾನು ಒಂದು ಸಲ ನನ್ನ ಸ್ನೇಹಿತರನ್ನು ಕೇಳಿದೆ. What is your ambition in life? He replied, Not to have any ambition is my ambition; ಕಾರ್ಪೋರೇಷನ್‌ನಲ್ಲಿ not to have any formula is my formula and not to have any basis is the basis for this property tax, ಎಂದು ಹೇಳಿದರು. ವಿಶೇಷವಾಗಿ ಈಗ ಹೊಸ

ಏರಿಯಾಗಳು ಸೇರಿಕೊಳ್ಳುತ್ತಿವೆ. ಇವತ್ತು ಸುಗ್ಗಿಯಾಗಿದೆ. ಕಂದಾಯ ಇನ್ಸ್‌ಪೆಕ್ಟರುಗಳು ಮತ್ತು ತೆರಿಗೆ ಇನ್ಸ್‌ಪೆಕ್ಟರುಗಳಿಗೆ ಬಹಳ ಸುಗ್ಗಿ. ನಾವು ಇಷ್ಟಿಷ್ಟು ಮಾಡಬೇಕು ಎಂದು ಅವರು ಟಾರ್ಗೆಟ್ ಇಟ್ಟು-ಕೊಂಡುಬಿಟ್ಟಿದ್ದಾರೆ. ನಾವು ಸರ್ಕಾರಕ್ಕೆ ಹೇಳುತ್ತಲೇ ಬರುತ್ತಿದ್ದೇವೆ, ದಯವಿಟ್ಟು ಒಂದು ಸೈಂಟಿಫಿಕ್ ಆಗಿ ಫಾರ್ಮುಲಾ ಮಾಡಿ ಎಂದು, ಹಾಗೆ ಮಾಡಿದರೆ ನಾನು ನನ್ನ ಇನ್‌ಕಂ ಟ್ಯಾಕ್ಸ್‌ಅನ್ನು ಕ್ಯಾಲ್-ಕುಲೇಟ್ ಮಾಡಬಹುದು. . .

ಶ್ರೀ ಬಿ. ಮುನಿಯಪ್ಪ:- ಸನ್ಮಾನ್ಯ ಉಪಾಧ್ಯಕ್ಷರೇ, ನಾನೂ ಕೂಡ ಮಹಾನಗರಪಾಲಿಕೆಯಲ್ಲಿ ತೆರಿಗೆ ಅಪೀಲ್ ಸಮಿತಿಯ ಅಧ್ಯಕ್ಷನಾಗಿ ಮೂರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ ಮತ್ತು ಎರಡು ವರ್ಷ ಸದಸ್ಯನಾಗಿದ್ದೆ. ಸುರೇಶ್‌ಕುಮಾರ್‌ರವರು ಹೇಳುವ ವಿಚಾರದಲ್ಲಿ ಯಾವ ರೀತಿ ಇರ-ಬೇಕು ಎಂದರೆ, ಮಾನ್ಯ ಮಂತ್ರಿಗಳು ಹೊಸದಾಗಿ ಬಂದಿದ್ದೀರಿ, ಬಹಳ ಉತ್ಸಾಹಿಗಳಾಗಿದ್ದೀರಿ. ರಾತ್ರಿ 12 ಗಂಟೆಗೆ ಒಬ್ಬ ರೆವಿನ್ಯೂ ಆಫೀಸರೋ, ಡಿ.ಸಿ.ನೋ ಬೆಂಗಳೂರು ನಗರದಲ್ಲಿ ಯಾವುದಾದರೂ ಒಂದು ಮನೆಗೆ ಹೋಗಿ ಪರೀಕ್ಷೆ ಮಾಡಿದರೆ ಅವರಿಗೆ ಒಂದು ಪಾಸ್‌ಬುಕ್ ಕೊಡಬೇಕು. ಅವನು 25 ಅಡಿಯಲ್ಲಿ ಎಷ್ಟು ಚದರ ಮನೆ ಕಟ್ಟಿದ್ದಾನೆ, ಎಷ್ಟು ಫ್ಲೋರ್ ಇದೆ ಎಂದು. ಹೇಗೆ ಬ್ಯಾಂಕ್ ಬ್ಯಾಲೆನ್ಸ್‌ಗೆ ನಮ್ಮ ಹತ್ತಿರ ಪಾಸ್‌ಬುಕ್ ಇರುತ್ತದೋ, ಅದೇ ರೀತಿ ಮಾಡುವ ಒಂದು ವ್ಯವಸ್ಥೆಯನ್ನು ನಾವು ತಂದರೆ ಬೆಂಗಳೂರಿನಲ್ಲಿ ನಾವು ಇನ್ನೂ ನೂರು ಕೋಟಿ ರೂಪಾಯಿ ತೆರಿಗೆಯನ್ನು ತೆಗೆಯ-ಬಹುದು. ಯಾವ ಜನರೂ ತೆರಿಗೆಯಿಂದ ತಪ್ಪಿಸಿಕೊಳ್ಳುವುದಿಲ್ಲ. ಈಗ ಏನು ಇದೆ ಎಂದರೆ ನಾವು ಎಷ್ಟೋ ಸಲ ಇನ್ಸ್‌ಪೆಕ್ಷನ್‌ಗೆ ಹೋಗಿದ್ದೇವೆ. ಆ ಕಡತದಲ್ಲಿರತಕ್ಕಂಥ ಅಳತೆಗೂ ಅಲ್ಲಿ ಮನೆ ಇರುವ ಅಳತೆಗೂ ಸಂಬಂಧವಿರುವದಿಲ್ಲ. ಯಾರಾದರೂ ಕಾಸು ಕೊಡಲಿಲ್ಲ ಎಂದರೆ ಹೆಚ್ಚು ಹಾಕುತ್ತಾರೆ. ಒಂದು ಸಲ ಜಯನಗರದಲ್ಲಿ 10 ಚದರ ಜಾಸ್ತಿ ಬರೆದುಬಿಟ್ಟಿದ್ದರು. ನಾವು ಹೋಗಿ ಇನ್ಸ್‌ಪೆಕ್ಷನ್ ಮಾಡಿದರೆ ಅಲ್ಲಿ 10 ಚದರ ಬಿಲ್ಡಿಂಗೇ ಇಲ್ಲ. ಈ ರೀತಿ ಇರುವುದರಿಂದ ವೈಜ್ಞಾನಿಕವಾಗಿ ಒಳ್ಳೆಯ ರೀತಿಯಲ್ಲಿ ತೆರಿಗೆಯನ್ನು ಇವತ್ತು ಬೇರೆ ರಾಜ್ಯಗಳಲ್ಲಿ ಇಟ್ಟುಕೊಂಡಿದ್ದಾರೆ ಮನೆಗಳಿಗೆ ಜಾಸ್ತಿ ತೆರಿಗೆ ಹಾಕುವುದಿಲ್ಲ. ಕಮರ್ಷಿಯಲ್ ವ್ಯಾಪಾರಸ್ಥರ ಮೇಲೆ ಹಾಕುತ್ತಾರೆ. ಅವರು ಕಟ್ಟಿಬಿಡುತ್ತಾರೆ. ಇಲ್ಲಿ ಏನಾಗಿದೆ ಎಂದರೆ ಗುಡಿಸಲಿನಲ್ಲಿರತಕ್ಕಂಥವನಿಗೂ ಒಂದು ಚದರಕ್ಕೆ 50 ರೂಪಾಯಿ, ಬಂಗಲೆಯಲ್ಲಿ ಇರುವವನಿಗೂ 50 ರೂಪಾಯಿ ಒಂದು ಚದರಕ್ಕೆ ಹಾಕುತ್ತಾರೆ. ಇವತ್ತು ನಾವು ಬೆಂಗಳೂರಿನಲ್ಲಿ ಅಪಾರ್ಟ್‌ಮೆಂಟ್‌ಗಳನ್ನು ನೋಡುತ್ತೇವೆ. ಆರನೇ ಫ್ಲೋರ್‌ನಲ್ಲಿರುವ ಅಪಾರ್ಟ್‌ಮೆಂಟಿಗೆ 100-150 ರೂಪಾಯಿ ಒಂದು ಚದರಕ್ಕೆ ಹಾಕುತ್ತಾರೆ. ಗ್ರೌಂಡ್ ಫ್ಲೋರ್‌ನಲ್ಲಿರುವವನಿಗೂ 50 ರೂಪಾ-ಯಿ. ಆರನೇ ಫ್ಲೋರಿಗೆ ನಾವೇನಾದರೂ ನಾಗರೀಕ ಸೌಲಭ್ಯ ಹೆಚ್ಚು ಕೊಡುತ್ತೇವೆಯೇ ಎಂದರೆ ಅಲ್ಲಿಗೆ ನೀರೂ ಹೋಗುವುದಿಲ್ಲ, ಸ್ಯಾನಿಟರಿ ಪ್ರಾಬ್ಲಂ ಇರುತ್ತದೆ. ಈ ರೀತಿ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಒಂದು ಸಮಿತಿಯನ್ನು ಮಾಡಬೇಕು. ಬರೀ ಅಧಿಕಾರಿಗಳ ಸಮಿತಿ ಮಾಡಿದರೆ ಆಗುವು-ದಿಲ್ಲ. ಮಹಾನಗರಪಾಲಿಕೆಯಲ್ಲಿ ಕೆಲಸ ಮಾಡಿರತಕ್ಕಂಥವರು, ಅಲ್ಲಿ ಪರಿಚಯ ಇರತಕ್ಕಂಥವರನ್ನು ಮಾಡಿ, ಬೆಂಗಳೂರು ನಗರದ ಜನರನ್ನು ಕಾಪಾಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ರಾಜಣ್ಣ:- ಈಗಾಗಲೇ ವಾಸುದೇವನ್ ಸಮಿತಿ ಇದೆ.

ಶ್ರೀ ಬಿ. ಮುನಿಯಪ್ಪ:- ಅದೆಲ್ಲಾ ಪ್ರಯೋಜನಕ್ಕೆ ಬರುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್:- ಮಾನ್ಯ ಉಪಾಧ್ಯಕ್ಷರೇ, ಶ್ರೀ ಗೋವಿಂದೇಗೌಡರು, ಹಿರಿಯ ಸಚಿವರು ಇಲ್ಲಿ ಇದ್ದಾರೆ. ನಾನು ಮೊನ್ನೆ ಹೋಂ ವರ್ಕ್ ಬಗ್ಗೆ ಮಾತನಾಡುತ್ತಾ ಇರುವಾಗ ನಾವೆಲ್ಲಾ ಖಾಸಗಿ ಶಾಲೆಯ ಲಾಬಿಯವರು ಎನ್ನುವ ಭಾವನೆ ಅವರ ಮನಸ್ಸಿನಲ್ಲಿ ಬಂದುಬಿಟ್ಟಿತು. ಬೆಂಗಳೂರಿನಲ್ಲಿ ಕಾರ್ಪೊರೇಷನ್ ಶಾಲೆಗಳಿವೆ. ಕಳೆದ ಎರಡು ವರ್ಷಗಳಿಂದ ಅದಕ್ಕೆ ಒಬ್ಬರು ವಿದ್ಯಾಧಿಕಾರಿ ಇಲ್ಲ. ಸರ್ಕಾರ ಕಳುಹಿಸಬೇಕು, ಆದರೆ ಕಳುಹಿಸುವುದಿಲ್ಲ. ಅಲ್ಲಿ ಯಾರನ್ನೋ ಟೆಂಪೊ-ರರಿ ವಿದ್ಯಾಧಿಕಾರಿಯನ್ನು ನೇಮಕ ಮಾಡಿಕೊಂಡಿದ್ದಾರೆ. ಇವತ್ತು ಯಾವ ಪರಿಸ್ಥಿತಿ ಇದೆ ಎಂದರೆ ಅನೇಕ ಶಾಲೆಗಳಲ್ಲಿ ಫಿಸಿಕಲ್ ಎಜುಕೇಷನ್ ಟೀಚರ್ಸ್ ಏನಿದ್ದಾರೆ ಅವರು ಇವತ್ತು ಫಿಸಿಕ್ಸ್ ಟೀಚ್ ಮಾಡುತ್ತಿದ್ದಾರೆ. ಏಕೆಂದರೆ ಅಲ್ಲಿ ಮೇಸ್ಟ್ರುಗಳು ಇಲ್ಲ. ಯಾರಾದರೂ ಮಾಡಬೇಕು. ಪುಟ್ಟಣ್ಣಯ್ಯ-ನವರು ಹೇಳಿದ್ದನ್ನು ನಾವಂತೂ ಅನುಸರಿಸಿದ್ದೇವೆ. ಫಿಸಿಕಲ್ ಎಜುಕೇಷನ್ ಟೀಚರ್ ಇದ್ದರೆ ಅವರು ಫಿಸಿಕಲ್ ಎಜುಕೇಷನ್ ಹೇಳಿಕೊಡುವುದಿಲ್ಲ, ಫಿಸಿಕಲ್ ಎಜುಕೇಷನ್ ಟೀಚರ್ ಫಿಸಿಕ್ಸ್ ಹೇಳಿ-ಕೊಡುತ್ತಿದ್ದಾರೆ. ಆ ಒಂದು ಪರಿಸ್ಥಿತಿ ಬಂದಿದೆ. ಇವತ್ತು ಬೆಂಗಳೂರಿನಲ್ಲಿ ಬಡ ಮಧ್ಯಮ ವರ್ಗದವರು ಮತ್ತು ಕೆಳವರ್ಗದವರು ಏನಿದ್ದಾರೆ ಅವರಿಗೇನಾದರೂ ನೀವು ನಿಜವಾಗಿ ಸಹಾಯ ಮಾಡಬೇಕು ಎನ್ನುವ ಹಾಗಿದ್ದರೆ ಬೇಗ ಉಪಾಧ್ಯಾಯರ ರೆಕ್ರೂಟ್‌ಮೆಂಟ್ ಆಗಬೇಕು. ಜೊತೆಗೆ ಸರ್ಕಾರದಿಂದ ತರಬೇತಿ ಪಡೆದ ಅರ್ಹತೆಯಿರುವ ಒಬ್ಬ ಸೂಕ್ತ ವಿದ್ಯಾಧಿಕಾರಿಯನ್ನು ಕೂಡಲೇ ಅಲ್ಲಿಗೆ ರವಾನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇಷ್ಟು ವಿಶೇಷವಾಗಿ ನಾನು ಬೆಂಗಳೂರಿನ ವಿಷಯವನ್ನೇ ಹೇಳದೆ, ಬಹಳ ಮುಖ್ಯವಾದ ಇನ್ನೊಂದು ಸಮಸ್ಯೆ ಇರುವುದು ಎಂದರೆ ಶ್ರೀ ಸೋಮಶೇಖರ್‌ರವರು ಉನ್ನತ ಶಿಕ್ಷಣ ಸಚಿವರು ಇಲ್ಲಿದ್ದಾರೆ. ಬೆಂಗಳೂರಿನಲ್ಲಿ ಬೆಂಗ-ಳೂರು ಯೂನಿವರ್ಸಿಟಿ ಏನಿದೆ, ಅದು ಯಾವ ರೀತಿ ಜ್ಞಾನ ಕೊಡದೇ ಇರುವ ಸಂಸ್ಥೆಯಾಗಿದೆ. ಇದರ ಬಗ್ಗೆ ನಾನು ಅವರ ಗಮನವನ್ನು ಸೆಳೆಯಲು ಇಷ್ಟಪಡುತ್ತೇನೆ. ಬೆಂಗಳೂರು ಯೂನಿವರ್ಸಿಟಿ-ಯದು ಒಂದು ಫೋಟೋ ಇದೆ. ಆ ಫೋಟೋದಲ್ಲಿ ಹಾಕಿದ್ದಾರೆ, "ನಹೀ ಜ್ಞಾನೇನ ಸದೃಶಂ" ಎಂದು. ಅಂದರೆ ಜ್ಞಾನಕ್ಕೆ ಮಿಗಿಲಾದುದು, ಜ್ಞಾನಕ್ಕೆ ಸಮಾನವಾದುದು ಯಾವುದೂ ಇಲ್ಲ ಎಂದು. ಆದರೆ ಬೆಂಗಳೂರು ಯೂನಿವರ್ಸಿಟಿಯಲ್ಲಿ 'ನಹೀ ವಂಚನೇನ ಸದೃಶಂ' ಎಂದು ಆಗಿದೆ. ಅಲ್ಲಿ ವಂಚನೆಗೆ ಸಮಾನವಾದುದು ಏನೂ ಇಲ್ಲ ಎನ್ನುವ ಪರಿಸ್ಥಿತಿಗೆ ಬಂದಿದೆ. ನಿಮಗೆ ಬೇಕಾದ್ದು ಕೇಳಿ, ಕೋಡುತ್ತಾರೆ. ಮಾರ್ಕ್ಸ್ ಕಾರ್ಡ್ ಬೇಕೇ, ಕೊಡುತ್ತಾರೆ, ಡಿಗ್ರಿ ಸರ್ಟಿಫಿಕೇಟ್ ಬೇಕೇ, ಕೊಡುತ್ತಾರೆ, ಅಟೆಂಡೆನ್ಸ್ ಬೇಕೇ, ಕೊಡುತ್ತಾರೆ. ಇವತ್ತು ಎಲ್ಲವನ್ನೂ ಬೆಂಗಳೂರು ಯೂನಿವರ್ಸಿಟಿಯಲ್ಲಿ ಕೊಟ್ಟು ನಮ್ಮ ಸ್ಥಿತಿ ಏನಾಗಿದೆ ಎಂದರೆ, ನಾನು ಇತ್ತೀಚಿಗೆ ಟೆಕ್ಸಾಕ್ ಯೂನಿವರ್ಸಿಟಿಯ ಎಂದು ಜಾಹಿರಾತು ನೋಡಿದೆ. ಪ್ರಾಯಶಃ ಅದನ್ನು ಬೆಂಗಳೂರು ಯೂನಿವರ್ಸಿಟಿಯ ಹುಡುಗರಿಗೆ ಜಾಹಿರಾತು ಕೊಟ್ಟಿ-

ದ್ದರು ಎಂದು ಕಾಣಿಸುತ್ತದೆ. ಆ ಜಾಹಿರಾತಿನಲ್ಲಿ ಏನಿದೆ ಎಂದರೆ, "you have your degrees, come and have your education now" ಎಂದು. ಅಂದರೆ ನೀವು ಡಿಗ್ರಿ ತೆಗೆದುಕೊಂಡಿ-ದ್ದೀರಿ, ಎಜುಕೇಷನ್ ಸಿಕ್ಕಿಲ್ಲ ಎನ್ನುವ ಪರಿಸ್ಥಿತಿಗೆ ನಾವು ಬಂದು ಬಿಟ್ಟಿದ್ದೇವೆ. ಇವತ್ತು ಬೆಂಗಳೂರು ಯೂನಿವರ್ಸಿಟಿಯಲ್ಲಿ ಏನಾಗಿದೆ ಎಂದರೆ ಪೋಸ್ಟ್ ಗ್ರಾಜುಯೇಟ್ ಇಂಜಿನಿಯರ್ಸ್ ಇದ್ದಾರೆ, ನಾನು ಒಂದು ಪತ್ರಿಕೆಯಲ್ಲಿ ನೋಡುತ್ತಿದ್ದೆ,

> "why break your head and waste time for CET? Be a doctor or engineer for Rs.35,000."

35 ಸಾವಿರ ಕೊಟ್ಟರೆ ನೀವು ಇಂಜಿನಿಯರ್ ಅಥವಾ ಡಾಕ್ಟರ್ ಆಗಬಹುದು. ಅದನ್ನು ಮಾಡುವ-ವರು ಯಾರು? ಕೋಟಾ ಮಾರ್ಕ್ಸ್ ಕಾರ್ಡುಗಳನ್ನು ಮಾಡುವವರು ಯಾರು ಎಂದು ಇದು ವಿಶ್ವ-ವಿದ್ಯಾನಿಲಯಕ್ಕೆ ಗೊತ್ತಿದೆ ಮತ್ತು ಅವರನ್ನು ಪೋಲೀಸರು ಹಿಡಿದಿದ್ದಾರೆ. ಆ ಕೋಟಾ ಅಂಕಪಟ್ಟಿ ಮತ್ತು ಕೋಟಾ ಪದವಿ ಪತ್ರಕ್ಕೆ ವೈಸ್‌ಚಾನ್ಸ್‌ಲರ್ ಸಹಿ ಹಾಕಿಕೊಟ್ಟ ವ್ಯಕ್ತಿಯ ವಯಸ್ಸು ಕೇವಲ 16 ವರ್ಷ. ಇಷ್ಟು ಚಿಕ್ಕ ಹುಡುಗ ಎನ್.ಆರ್. ಶೆಟ್ಟಿಯವರು ನಾಚಿಕೊಳ್ಳುವ ರೀತಿಯಲ್ಲಿ ಸಹಿ ಮಾಡಿ ಪದವಿ ಪತ್ರಗಳನ್ನು ಕೊಡುತ್ತಿದ್ದನು ಮತ್ತು ಆತನನ್ನು ಪೋಲೀಸರು ಹಿಡಿದಿದ್ದಾರೆ. ಈ ಬಗ್ಗೆ ಬೆಂಗ-ಳೂರು ವಿಶ್ವವಿದ್ಯಾನಿಲಯದವರು ನಾವು ಏನೂ ಮಾಡುವುಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಇವತ್ತು ಅಂಕಪಟ್ಟಿಗಳು ಮತ್ತು ಪದವಿ ಪತ್ರಗಳಲ್ಲಿ ಒರಿಜಿನಲ್ ಯಾವುದು ಮತ್ತು ಡೂಪ್ಲಿಕೇಟ್ ಯಾವುದು ಎಂಬುದು ಗೊತ್ತಾಗುತ್ತಿಲ್ಲ. ಇದನ್ನು ನೋಡಿದಾಗ ನನಗೆ ಒಂದು ಪ್ರಸಂಗ ಜ್ಞಾಪಕ ಬರುತ್ತದೆ. ಅದೇ-ನೆಂದರೆ ಬೆಂಗಳೂರಿನಲ್ಲಿ ಒಬ್ಬ ವ್ಯಾಪಾರ ಮಾಡಬೇಕೆಂದು ಯೋಚನೆ ಮಾಡಿದ. ಇಲ್ಲಿ ಪಾತ್ರೆ ಅಂಗಡಿ ಇದೆ, ಮಾತ್ರೆ ಅಂಗಡಿ ಇದೆ, ಬಟ್ಟೆ ಅಂಗಡಿ ಇದೆ, ದಿನಸಿ ಅಂಗಡಿ ಇದೆ ಹೀಗೆ ಎಲ್ಲಾ ತರಹದ ಅಂಗಡಿಗಳಿವೆ. ಆದ್ದರಿಂದ ವಿನೂತನವಾದಂಥ ಅಂಗಡಿಯನ್ನು ಪ್ರಾರಂಭ ಮಾಡುವುದಕ್ಕೆ ಇವನಿಗೆ ಉಪಾಯ ಹೊಳೆಯಿತು. ಮತ್ತು ಹೊಸದಾದ ಅಂಗಡಿಯನ್ನು ಪ್ರಾರಂಭ ಮಾಡಿದ. ಆ ಅಂಗಡಿಗೆ ಇಲ್ಲಿ ಡಿಗ್ರಿಗಳನ್ನು ಮಾರಲಾಗುತ್ತದೆ ಎಂದು ಬೋರ್ಡ್ ಬರೆಸಿ ಹಾಕಿದ. ಮತ್ತು ಯಾವ ಯಾವ ಡಿಗ್ರಿಗೆ ಎಷ್ಟೆಷ್ಟು ಬೆಲೆ ಎಂದು ಬೋರ್ಡ್ ಹಾಕಿದ. ಬಿ.ಎ. ಡಿಗ್ರಿ ತೆಗೆದುಕೊಳ್ಳಬೇಕಾದರೆ 5000 ರೂಪಾಯಿ, ಬಿ.ಎಸ್.ಸಿ. ಪದವಿ ತೆಗೆದುಕೊಳ್ಳಬೇಕಾದರೆ 8000 ರೂಪಾಯಿ, ಎಂ.ಬಿ.ಎ. ಡಿಗ್ರಿ ತೆಗೆದುಕೊಳ್ಳಬೇಕಾದರೆ 1.5 ಲಕ್ಷ ಈ ರೀತಿಯಾಗಿ ಲಿಸ್ಟ್ ಹಾಕಿದ. ಇವನಿಗೆ ಯದ್ವಾ ತದ್ವಾ ವ್ಯಾಪಾರವಾಗಲಿಕ್ಕೆ ಪ್ರಾರಂಭವಾಯಿತು. ಒಂದು ದಿವಸ ಬೆಳಿಗ್ಗೆ ಹತ್ತಿರದಲ್ಲಿ ಇದ್ದ ಯಾರೋ ಜಮೀ-ನುದಾರ ಬಂದು ಹಣ ಕೊಟ್ಟರೆ ಇಲ್ಲಿ ಒಂದು ಡಿಗ್ರಿ ಸಿಗುತ್ತದೆಯಂತೆ ನಾನು ಏಕೆ ತೆಗೆದುಕೊಳ್ಳ-ಬಾರದು ಎಂದು ಯೋಚನೆ ಮಾಡಿದ. ಪಾಪ ಅವನಿಗೆ ಬಹಳ ಸಹಜವಾದ ಆಸೆ. ಆತ ಕುದುರೆ ಮೇಲೆ ಬಂದು ಕೌಂಟರಿನಲ್ಲಿ 5 ಸಾವಿರ ಕೊಟ್ಟ ನಂತರ ಆ ಜಮೀನುದಾರನ ಹೆಸರು ಕೇಳಿ ಸರ್ಟಿಫಿ-ಕೇಟ್ ಮೇಲೆ ಮುದ್ರೆ ಮಾಡಿ ಅಂಗಡಿಯವನು ಕೊಟ್ಟ. ನಾನು ಒಬ್ಬ ಡಿಗ್ರಿ ಹೋಲ್ಡರ್ ಆದೆ ಎಂದು ಜಮೀನುದಾರನಿಗೆ ಬಹಳ ಸಂತೋಷವಾಯಿತು. ಪೀಣ್ಯದ ಹತ್ತಿರ ಹೋದಮೇಲೆ, ಪುನಃ ನನ್ನ

ಕುದುರೆಗೆ ಏಕೆ ಡಿಗ್ರಿ ಸರ್ಟಿಫಿಕೇಟ್ ತೆಗೆದುಕೊಳ್ಳಬಾರದು ಎಂದು ಯೋಚನೆ ಮಾಡಿದ. ಪುನಃ ವಾಪಸ್ಸು ಆ ಅಂಗಡಿಗೆ ಬಂದು 5 ಸಾವಿರ ರೂಪಾಯಿ ಆ ಜಮೀನುದಾರ ಕೊಟ್ಟನು. ಈಗ ಯಾರ ಹೆಸರಿಗೆ ಪದವಿ ಪತ್ರ ಕೊಡಬೇಕೆಂದು ಆ ಅಂಗಡಿಯವರು ಜಮೀನುದಾರನನ್ನು ಕೇಳಿದರು. ಕುದುರೆ ಹೆಸರಿಗೆ ಡಿಗ್ರಿ ಸರ್ಟಿಫಿಕೇಟ್ ಕೊಡಿ ಎಂದು ಕೇಳಿದ. ನಾವು ಕುದುರೆ ಹೆಸರಿಗೆ ಡಿಗ್ರಿ ಸರ್ಟಿಫಿಕೇಟ್ ಕೊಡುವುದಿಲ್ಲವೆಂದು ಆ ಅಂಗಡಿಯವರು ಹೇಳಿದರು. ಸಹಜವಾಗಿಯೇ ಅಹಂಕಾರ ದರ್ಪದಿಂದ ಜಮೀನುದಾರ ಏಕೆ ಕೊಡುವುದಿಲ್ಲ? ನನಗೆ ಕೊಟ್ಟಿದೆಯಲ್ಲ, ಈಗ ನನ್ನ ಕುದುರೆಗೂ ಸಹ ಡಿಗ್ರಿ ಸರ್ಟಿಫಿಕೇಟ್ ಕೊಡು ಎಂದು ಹೇಳಿದ. ಅದಕ್ಕೆ ಅಂಗಡಿಯವನು 'ಕ್ಷಮಿಸಿ, ನಾವು ಇಲ್ಲಿ ಕುದುರೆ-ಗಳಿಗೆ ಡಿಗ್ರಿ ಕೊಡುವುದಿಲ್ಲ, ಕತ್ತೆಗಳಿಗೆ ಮಾತ್ರ ಡಿಗ್ರಿ ಕೊಡುತ್ತೇವೆ' ಎಂದು ಹೇಳಿದ. ಇವತ್ತು ಬೆಂಗ-ಳೂರು ವಿಶ್ವವಿದ್ಯಾನಿಲಯವನ್ನು ನೋಡಿದರೆ ಇಲ್ಲಿಯ ಮೆಡಿಕಲ್ ಕಾಲೇಜಿನಲ್ಲಿ ಓದಿರುವವನ್ನು ನೋಡಿದರೆ, ಒಬ್ಬರು ಅಮಾಯಕರನ್ನು ಯಾರೋ ರಕ್ತ ಪರೀಕ್ಷೆಗೆ ಕರೆದುಕೊಂಡು ಹೋಗಿ ಕಿಡ್ನಿ ಕದಿಯುತ್ತಾರಲ್ಲ! ಇವರನ್ನು ನಾವು ಕತ್ತೆಗಳೆಂದು ಹೇಳಿದರೆ ಆ ಕತ್ತೆಗಳು ನನ್ನ ಮೇಲೆ ಮಾನನಷ್ಟ ಮೊಕದ್ದಮೆ ಹಾಕುತ್ತವೆ. ಇಂಥವರನ್ನು ನಾವು ತಯಾರು ಮಾಡುತ್ತಿದ್ದೇವಲ್ಲ ಎಂದು ಬೇಸರ-ವಾಗುತ್ತಿದೆ. ಇನ್ನು ಎಂ.ಇ. ಓದುತ್ತಿದ್ದ ಒಬ್ಬ ಹುಡುಗನನ್ನು ಇಂಜಿನೀಯರಿಂಗ್ ಪರೀಕ್ಷೆಯ ಪೇಪ-ರನ್ನು ಮಾಲ್ಯಮಾಪನ ಮಾಡಲು ಕಳುಹಿಸಿದ್ದಾರೆ. ಇದು ಬೆಂಗಳೂರು ವಿಶ್ವವಿದ್ಯಾನಿಲಯದ ಒಂದು ಹೆಗ್ಗಳಿಕೆ. ಈ ವಿಶ್ವವಿದ್ಯಾನಿಲಯದ ವೈಸ್‌ಚಾನ್ಸಲರಿಗೆ ಮತ್ತು ಇಲ್ಲಿ ರಿಜಿಸ್ಟ್ರಾರುಗಳಿಗೆ ಆಗುತ್ತಿಲ್ಲ. 3ನೇ ರಿಜಿಸ್ಟ್ರಾರ್‌ರವರನ್ನು ನಿನ್ನೆ ವರ್ಗಾವಣೆ ಮಾಡಿದ್ದಾರೆ. 3ನೇ ರಿಜಿಸ್ಟ್ರಾರ್‌ರವರು ಈ ವಿಶ್ವವಿದ್ಯಾ-ನಿಲಯದಲ್ಲಿ ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡಬೇಕೆಂದು ನಂಬಿಕೆಯನ್ನು ಇಟ್ಟುಕೊಂಡು ಬಂದವರು. ಈ ಸಿಗರೇಟ್ ಪ್ಯಾಕೆಟ್ ಮೇಲೆ ಹೀಗೆ ಬರೆದಿರುತ್ತದೆ

> "Cigarette smoking is injurious to health." On the same line now we can say that, "studying in Bangalore University is injurious to your career and education."

ಎಂದು ಮಾಡಬೇಕು. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ 3 ವರ್ಷಗಳಿಂದ ಏನೇನು ಹಗರಣಗಳು ನಡೆದಿವೆ, ಅದು ಅಂಕಪಟ್ಟಿಗಳ ಹಗರಣವಿರಬಹುದು, ಬೆಲೆ ಬಾಳುವ ಜಾಗವನ್ನು ಬೇರೆ ಯಾರಿಗೋ ಪರಭಾರೆ ಮಾಡಿರುವುದು ಇರಬಹುದು, ಅಥವಾ ಅರ್ಹತೆಯಿಲ್ಲದವರಿಗೆ ಮಾಲ್ಯ-ಮಾಪನ ಮಾಡಲು ಕೊಟ್ಟಿರುವಂಥದ್ದು ಇರಬಹುದು. ದಯಮಾಡಿ ಈ ಎಲ್ಲದರ ಬಗ್ಗೆ ನ್ಯಾಯಾಂಗ ತನಿಖೆ ಮಾಡಬೇಕೆಂದು ಈ ಸಂದರ್ಭದಲ್ಲಿ ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನಾನು ಕೊನೆಯ ಒಂದು ವಿಚಾರಕ್ಕೆ ಬರುತ್ತೇನೆ. ಇವತ್ತು ತಮ್ಮ ಜಾಗದಲ್ಲಿ ಮಾನ್ಯ ಅಧ್ಯಕ್ಷರು ಇದ್ದಿದ್ದರೆ ನನಗೆ ಇನ್ನಷ್ಟು ಖುಷಿ ಸಿಗುತ್ತಿತ್ತು. ಬೆಂಗಳೂರಿನಲ್ಲಿ ಹಲ್ಲು ಮುರಿಯುವ ಕಾಲೇಜಿನ ಹೆಸರನ್ನು ಕೇಳಿದ್ದೀರಾ? ಡೆಂಟಲ್ ಕಾಲೇಜು ಹೆಸರಿನಲ್ಲಿ ಹಲ್ಲು ಮುರಿಯುವ ಕೆಲವು ಕಾಲೇಜುಗಳಿವೆ. ಡಾ|| ಶ್ಯಾಮರಾಯ ರೆಡ್ಡಿ ಡೆಂಟಲ್ ಕಾಲೇಜು ಎಂದು ಒಂದು ಇದೆ. ನಾನು ಕಳೆದ ನವಂಬರ್‌ನಲ್ಲಿ ಉಪ-ವಾಸ ಮುಷ್ಕರ ಕೈಗೊಂಡಿದ್ದೆ. ನಾನು 4ನೇ ದಿವಸ ಉಪವಾಸ ಕುಳಿತಿದ್ದಾಗ ಶ್ರೀ ವಾಟಾಳ್ ನಾಗ-

ರಾಜ್‌ರವರು ಸ್ಪೀಕರ್‌ರವರ ಜೊತೆ ಬಂದು ನನ್ನನ್ನು ಉಪವಾಸ ಸತ್ಯಾಗ್ರಹದಿಂದ ಮೇಲಕ್ಕೆಬ್ಬಿಸಿದರು. ಆ ದಿನ ನಾನು ತಮಗೆಲ್ಲ ಗೌರವ ಕೊಟ್ಟು ಆ ಸತ್ಯಾಗ್ರಹದಿಂದ ಮೇಲೆಕ್ಕೆ ಎದ್ದೆ. ಅದರೆ ನಾನು ಉಪ-ವಾಸ ಮುಂದುವರೆಸಿ ನನ್ನ ಜೀವನವೇ ಕೊನೆಯಾಗಿದ್ದರೆ, ಅದು ಏನಾದರೂ ಈ ಸರ್ಕಾರಕ್ಕೆ ಮಾರ್ಗದರ್ಶನ ಕೊಡುತ್ತಿತ್ತು ಎಂದು ಇವತ್ತು ನನಗನ್ನಿಸುತ್ತಿದೆ. ಆರು ತಿಂಗಳಾಯಿತು, ಆ ಮಕ್ಕಳ ಪಾಡನ್ನು ಇವತ್ತು ಕೂಡ ಯಾರೂ ನೋಡುವವರಿಲ್ಲ. ಹಿರಿಯ ಸಚಿವರಾದ ಶ್ರೀ ಶಂಕರ್‌ನಾಯಕ್-ರವರು ಇದ್ದಾರೆ. ಅಂತಹ ಕಾಲೇಜುಗಳನ್ನು ನೀವು ಏನು ಮಾಡುತ್ತೀರಿ? ಅಂತಹ ಕಾಲೇಜುಗಳ ಮೇಲೆ ಸರ್ಕಾರದ ನಿಯಂತ್ರಣವಿಲ್ಲವೇ ಎನ್ನುವಂಥ ಪ್ರಶ್ನೆಯನ್ನು ನಾನು ಸರ್ಕಾರದವರಲ್ಲಿ ಕೇಳುತ್ತಿ-ದ್ದೇನೆ. ಆ ಕಾಲೇಜಿನಲ್ಲಿ ಯಾರ್‍ಯಾರು ಪರೀಕ್ಷೆಗೆ ಕುಳಿತಿದ್ದರು ಅವರ ಫಲಿತಾಂಶ 5-6-1996 ರಂದು ಬಂದಿದೆ. ಅದರಲ್ಲಿ ಫೈನಲ್ ಇಯರ್‌ನಲ್ಲಿ ಯಾರೂ ಸಹ ತೇರ್ಗಡೆ ಹೊಂದಿಲ್ಲ. ಫಲಿತಾಂಶ ಸೊನ್ನೆ. 3ನೇ ವರ್ಷದ ವಿದ್ಯಾರ್ಥಿಗಳಲ್ಲಿ ಕೇವಲ ಇಬ್ಬರು ತೇರ್ಗಡೆ ಹೊಂದಿದ್ದಾರೆ. ಎರಡನೇ ವರ್ಷದ ವಿದ್ಯಾರ್ಥಿಗಳಲ್ಲಿ ಒಬ್ಬರೇ ಒಬ್ಬ ವಿದ್ಯಾರ್ಥಿ ತೇರ್ಗಡೆ ಹೊಂದಿದ್ದಾರೆ. ಇದರಲ್ಲಿ ಆ ವಿದ್ಯಾರ್ಥಿಗಳ ತಪ್ಪೇನೂ ಇಲ್ಲ. ಸಿ.ಇ.ಟಿ. ಪರೀಕ್ಷೆಯಲ್ಲಿ ಅರ್ಧ ಮಾರ್ಕ್ಸ್ ಒಂದು ಮಾರ್ಕ್ಸ್ ಕಡಿಮೆಯಾಯಿತು ಎಂದು ಹೇಳಿ ಅಂತಹ ಹುಡುಗರನ್ನು ಇಂತಹ ಕಾಲೇಜುಗಳಿಗೆ ಸಿ.ಇ.ಟಿ.ಯವರು ಕಳುಹಿಸುತ್ತಾರೆ. ಈ ಕಾಲೇಜು ಇದುವರೆಗೆ ಡೆಂಟಲ್ ಕೌನ್ಸಿಲ್ ಆಫ್ ಇಂಡಿಯಾದಿಂದ ಮಾನ್ಯತೆ ಪಡೆದಿಲ್ಲ. ಬೆಂಗಳೂರು ನಗರದಲ್ಲಿ ಇಂತಹ ಕಾಲೇಜುಗಳು ಹಗಲು ದರೋಡೆ ಮಾಡುತ್ತಿರುವುದನ್ನು ಸರ್ಕಾರ ನೋಡಿಕೊಂಡು ಕಣ್ಣುಮುಚ್ಚಿ ಕುಳಿತುಕೊಳ್ಳುವುದಕ್ಕೆ ಹೇಗೆ ಸಾಧ್ಯ? Is that lobby so powerful? We should have vested interest in the citizen and that brilliant boy and brilliant girl. ಅದನ್ನು ಬಿಟ್ಟು ಯಾರೋ ಎಲ್ಲಿಂದಲೋ ಬಂದು ಕಾಲೇಜನ್ನು ಪ್ರಾರಂಭ ಮಾಡಿ ದರೋಡೆ ಮಾಡುತ್ತಾರಲ್ಲ ಅಂಥವರಿಗೆ ಎಲ್ಲಿಯವರೆಗೆ ಅಂತ ನೀವು ರಕ್ಷಣೆ ಕೊಡುತ್ತೀರಿ? ವೈದ್ಯಕೀಯ ಶಿಕ್ಷಣ ಸಚಿವರ ಮೂಲಕ ಸಹ ನಾನು ಈ ವಿಷಯವನ್ನು ಮಾತ-ನಾಡಿದ್ದೇನೆ. ಈ ಬಗ್ಗೆ ಸ್ಪೀಕರ್‌ರವರ ಕೊಠಡಿಯಲ್ಲಿ ಮಾತನಾಡಿದ್ದೇನೆ. ಸ್ವತಃ ಸ್ಪೀಕರ್‌ರವರೇ ಆ ಮಕ್ಕಳ ಅಳಲನ್ನು ನೋಡಿದ್ದಾರೆ. ವಿಶೇಷವಾಗಿ ದಾವಣಗೆರೆಯ ಅರುಣ ಎನ್ನುವ ಒಬ್ಬ ಹುಡುಗಿಯು ಸಹ ಕಣ್ಣೀರು ಹರಿಸಿದ್ದನ್ನು ಎಲ್ಲರೂ ನೋಡಿದ್ದಾರೆ. ಆಕೆ ಏನು ಹೇಳಿದಳೆಂದರೆ, ಸರ್, ನಾನು ಕಾಲೇ-ಜಿಗೆ ಬರುವುದೇ ಕಷ್ಟ, ಇಷ್ಟೊಂದು ಫೀಸನ್ನು ಇವರು ವಸೂಲಿ ಮಾಡುತ್ತಿದ್ದಾರೆ, ನಾನು ಹೇಗೆ ಕಟ್ಟಲಿ, ಕಾಲೇಜು ಬಿಟ್ಟುಬಿಡಬೇಕಾಗುತ್ತದೆಂದು ಹೇಳಿದಳು. ಅವಳು ಬಹಳ ಬುದ್ಧಿವಂತ ಹುಡುಗಿ. ಆದರೆ ಅವಳಿಗೆ ಇಂಥ ಸ್ಥಿತಿ. ಇವತ್ತು ಸರ್ಕಾರ ಅಸ್ತಿತ್ವದಲ್ಲಿ ಇದೆಯೋ ಅಥವಾ ಇಲ್ಲವೋ ಎಂಬುದನ್ನು ಕೇಳಬೇಕಾಗುತ್ತದೆ. ಈ ಡೆಂಟಲ್ ಕಾಲೇಜುಗಳು ಮತ್ತು ಮೆಡಿಕಲ್ ಕಾಲೇಜುಗಳು ಇದರ ಬಗ್ಗೆ ಏನು ಮಾಡುತ್ತೀರಿ? ನಿಜ. ನನ್ನ ವಾದವನ್ನು ನಮ್ಮ ಹಿರಿಯರು ಒಪ್ಪಿಕೊಳ್ಳದೇ ಇರಬಹುದು. ನಾನು ಒಂದು ನಿರ್ದಿಷ್ಟ ಪ್ರಕರಣವನ್ನು ಈ ಸದನದಲ್ಲಿ ಕೊಡುತ್ತಿದ್ದೇನೆ in which I am involved ಒಂದು ವರ್ಷದಿಂದ ಸದನದಲ್ಲಿ ರೈಸ್ ಮಾಡಿದ್ದೇನೆ. ಹೊರಗಡೆ ಹೋರಾಟ ಮಾಡಿದ್ದೇನೆ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇವತ್ತು ತಾವು ಬಂದಿದ್ದೀರಿ. ನಿಮ್ಮ ಬಗ್ಗೆ ಗೌರವವಿಟ್ಟು ನಾನು ಸೌಜನ್ಯದಿಂದ ಅವತ್ತು ಉಪವಾಸ ಸತ್ಯಾಗ್ರಹವನ್ನು ಮುಗಿಸಿದೆ. ಆ ಮೇಲೂ ಕೂಡ ಸಭೆಗಳನ್ನು ಮಾಡಿದೆವು. ಇದುವರೆವಿಗೆ ನಿಮ್ಮ ಕೈಯಲ್ಲಿ ಕೂಡ ಆ ಮಕ್ಕಳಿಗೆ ನ್ಯಾಯ ದೊರಕಿಸಿಕೊಡಲಿಕ್ಕೆ ಆಗಲಿಲ್ಲ. ಹಲ್ಲು ಕಟ್ಟುವಂಥ ಹುಡುಗರಿಗೆ ಹಲ್ಲು ಮುರಿಯುವಂಥ ಕಾಲೇಜುಗಳು, ಆ ಕಾಲೇಜುಗಳ ವಿದ್ಯಾರ್ಥಿಗಳನ್ನು ತಮ್ಮ ಶತ್ರುಗಳೆಂದು ತಿಳಿದುಕೊಂಡು ಆ ಕಾಲೇಜಿನ ಪ್ರಾಂಗಣವನ್ನು ರಣರಂಗವನ್ನಾಗಿ ಮಾಡಿದ್ದಾರಲ್ಲ, ಅವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ? ಅಥವಾ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳಿದರೆ ನಾವು ಬೇರೆ ಯಾವುದಾದರೂ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತೇವೆ. ಈ ಸಂದರ್ಭದಲ್ಲಿ ಒಟ್ಟಾರೆ ಇಷ್ಟು ಅಂಶಗಳನ್ನು ಹೇಳುತ್ತಾ 19 ಇಲಾಖೆಗಳಿಗೆ ನೀವು ಏನು ಇಲ್ಲಿ ವರದಿ ಮಂಡಿಸಿದ್ದೀರಿ ಇವುಗಳಲ್ಲಿ ಯಾವುದೇ ಒಂದು ಇಲಾಖೆ ಯಾವುದೇ ರೀತಿಯಿಂದ ನಾಗರೀಕರಿಗೆ ಸಹಾಯ ಮಾಡಲಿಕ್ಕೆ ಈ ಇಲಾಖೆಗಳು ಇಲ್ಲ. ಅದರ ಬದಲು ಅಧಿಕಾರಿಗಳಿಗೆ ಪ್ರಮೋಷನ್, ಪೋಸ್ಟಿಂಗ್ಸ್ - ಇದಕ್ಕೋಸ್ಕರ ಈ ಇಲಾಖೆಗಳು ಇವೆ. ಆ ಬಡ ಬೋರೇಗೌಡ ಒಂದು ಬೀಡಿ ಸೇದಿದಾಗ, ಒಂದು ಸಿಗರೇಟ್ ಸೇದಿದಾಗ, ಒಂದು ಬಟ್ಟೆ ತೆಗೆದುಕೊಂಡಾಗ ಏನು ತೆರಿಗೆ ಕೊಡುತ್ತಾನೆ ಆ ತೆರಿಗೆಯನ್ನೇ ಸರಿಯಾಗಿ ವಿನಿಯೋಗ ಮಾಡುತ್ತಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಏನು ಬೇಡಿಕೆ-ಗಳನ್ನು ಇಟ್ಟಿದ್ದಾರೆ ಅದನ್ನು ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಸಿ.ಎಸ್. ಪುಟ್ಟೇಗೌಡ (ಶ್ರವಣಬೆಳಗೊಳ):- ಮಾನ್ಯ ಅಧ್ಯಕ್ಷರೆ, ಇಲ್ಲಿಗೆ ಒಂದೂವರೆ ವರ್ಷ ಕಳೆದು, ಇವತ್ತು ನನಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ಈ ಸಭೆಯಲ್ಲಿ ಆಡಳಿತ ಪಕ್ಷ ಮತ್ತು ವಿರೋಧ ಪಕ್ಷದಲ್ಲಿ ಸುಮಾರು 20-25 ವರ್ಷಗಳ ರಾಜಕಾರಣವನ್ನು ಮಾಡಿದಂಥವರ, ಬಹಳ ನುರಿತಂಥ ಎಲ್ಲರಿಂದಲೂ ಕೂಡ ಕಲಿಯಬೇಕಾದ್ದನ್ನು ಕಲಿತು ಇವತ್ತು ಏನು 19 ಬೇಡಿಕೆಗಳ ಬಗ್ಗೆ ಸರ್ಕಾರ ಅನುಮೋದನೆ ನೀಡುತ್ತಾ, ನನಗೆ ತಿಳಿದಂಥ ಅನುಮಾನಗಳನ್ನು ಸರಿಯೋ ತಪ್ಪೋ ಎಂದು ಹೇಳಿ, ತಪ್ಪು ಇದ್ದುದನ್ನು ಸರಿಪಡಿಸಬೇಕೆಂದು ಸರ್ಕಾ-ರಕ್ಕೆ ಒತ್ತಾಯ ಮಾಡುತ್ತಾ ನಾನು ನಾಲ್ಕು ಮಾತುಗಳನ್ನಾಡುತ್ತೇನೆ. ದೇಶದಲ್ಲಿ ಭ್ರಷ್ಟಾಚಾರ ಎನ್ನ-ತಕ್ಕಂಥದ್ದು ಬಹಳ ಹಿಂದಿನಿಂದ ಬಂದಿದ್ದು, ಇದನ್ನು ತೆಗೆಯುವುದಕ್ಕೆ ಆಗುವುದಿಲ್ಲ, ಪ್ರತಿವರ್ಷ ಈ ಭ್ರಷ್ಟಾಚಾರದ ಗ್ರೇಡ್ ಜಾಸ್ತಿಯಾಗುತ್ತಿರುತ್ತದೆ, ಒಂದು ರೀತಿ ಲೋಕೋಪಯೋಗಿ ಇಲಾಖೆಯಲ್ಲಿ, ಈ ನೀರಾವರಿ ಇಲಾಖೆಯಲ್ಲಿ ಎಸ್.ಆರ್. ರೇಟ್ 10 ಪರ್ಸೆಂಟ್ ಹೆಚ್ಚು ಮಾಡುತ್ತಾರೆ ಅ ತರಹ-ವೆಂದು ತಿಳಿದುಕೊಂಡು ನಾನು ಸ್ವಲ್ಪ ಗದ್ದಲ ಮಾಡಿಕೊಂಡು ಕಡಿಮೆ ಮಾಡಬೇಕೆಂದು ಹಳ್ಳಿಯ ಕಡೆ ಅಧಿಕಾರಿಗಳಿಗೆ ಬೈದುಕೊಂಡು ಇದ್ದವನು. ಒಂದು ದಿವಸ ಇದ್ದಕ್ಕಿದ್ದ ಹಾಗೆ ಒಬ್ಬ ಹುಡುಗ ಬಂದು, ಅಣ್ಣ, ಹಾಸನದಲ್ಲಿ ಪವರ್ ಕಾರ್ಪೋರೇಷನ್ ಎನ್ನುವಂಥ ಒಂದು ಇಲಾಖೆ ಇದೆ. ಆ ಇಲಾಖೆಯ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರು ದುಡ್ಡು ತೆಗೆದುಕೊಳ್ಳುತ್ತಿಲ್ಲ. ನನ್ನಿಂದ ಅವರು ಲಂಚ ತೆಗೆದು-ಕೊಳ್ಳುತ್ತಿಲ್ಲ. ಇದರಿಂದ ನನಗೆ ತೊಂದರೆಯಾಗುತ್ತದೆ. ದಯವಿಟ್ಟು ಬಂದು ಹೇಳಿ ಎಂದು ನನ್ನನ್ನು

ಕರೆದ. ಲಂಚ ತೆಗೆದುಕೊಳ್ಳುವವರನ್ನು ಲಂಚ ತೆಗೆದುಕೊಳ್ಳಬಾರದು ಎಂದು ಹೇಳಬಹುದು. ಅವರು ಲಂಚ ತೆಗೆದುಕೊಳ್ಳುವುದಿಲ್ಲ ಇದರಿಂದ ತೊಂದರೆಯಾಗುತ್ತದೆ ಎಂದು ಹೇಳಿದರೆ ಹೇಗೆ? ಎಂದು ಆ ಹುಡುಗನನ್ನು ಕೇಳಿದ್ದಕ್ಕೆ ಆತ ಏನು ಹೇಳಿದನೆಂದರೆ, ಸಾಮಾನ್ಯವಾಗಿ ಲಂಚ ತೆಗೆದುಕೊಳ್ಳದಿದ್ದರೆ ನನ್ನ ಕೆಲಸವನ್ನು ಸರಿಯಾಗಿ ಮಾಡಿಕೊಡುವುದಿಲ್ಲ ಎಂದು ಹೇಳಿದ. ಆದ್ದರಿಂದ ಇಲ್ಲೂ ಕೂಡ ಲಂಚ ತೆಗೆದುಕೊಳ್ಳದಿದ್ದರೆ ನಮಗೆ ತೊಂದರೆ ಮಾಡಬಹುದು, ನೀವು ಹೇಳಲೇಬೇಕು ಎಂದು ಒತ್ತಾಯ ಮಾಡಿ ನನ್ನನ್ನು ಹಾಸನಕ್ಕೆ ಕರೆದುಕೊಂಡು ಹೋದ. ಅಲ್ಲಿ ಹೋಗಿ ನೋಡಿದಾಗ ಒಂದು ಪವರ್ ಕಾರ್ಪೋರೇಷನ್ ಡಿವಿಷನ್ ಅಲ್ಲಿ ಕೆಲಸ ಮಾಡುತ್ತಿದೆ.

11.20 ಎ.ಎಂ

ಅಲ್ಲಿಗೆ ಹೋಗಿ ಎಲ್ಲವನ್ನು ನೋಡಿದಾಗ, ಪಾಪ ಅವರು ತೊಂದರೆ ಮಾಡುವವರಲ್ಲವೆಂದು ಗೊತ್ತಾಯಿತು. ತೊಂದರೆ ಕೂಡ ಆಗಲಿಲ್ಲ. ಇಂತಹ ಒಂದು ಇಲಾಖೆಯು ಲಂಚವನ್ನು ಹೊಡೆಯದೇ ಇರತಕ್ಕಂಥದ್ದು ಇದೆಯಲ್ಲಾ ಎಂದು ಅನ್ನಿಸಿತು. ಲಂಚವನ್ನು ತೆಗೆದುಕೊಳ್ಳದೇ ಇರತಕ್ಕಂತಹ ಅಧಿಕಾರಿಗಳೂ ಸಹ ಈ ರಾಜ್ಯದಲ್ಲಿ ಇದ್ದರಲ್ಲಾ ಎಂದು ಒಂದು ರೀತಿಯಲ್ಲಿ ಆಶ್ಚರ್ಯ ಜೊತೆಗೆ ಸಂತೋಷ ಕೂಡ ಉಂಟಾಗಿ, ಅವರು ಜೊತೆಯಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಿಮ್ಮ ಕೆಲಸ ಏನು? ನಿಮ್ಮ ಕಾರ್ಯ ಏನು ಎಂದಾಗ ಅವರು ನಮ್ಮನ್ನು ಸಕಲೇಶಪುರದ ಗುಡಿಯವರೆಗೆ ಕರೆದುಕೊಂಡು ಹೋದರು. ಸಕಲೇಶಪುರದಿಂದ ಹೊರಟು ಪುತ್ತೂರಿನವರಿಗೆ ಹೋಗುವ ದಾರಿನಲ್ಲಿ ಮತ್ತು ನಮ್ಮ ಚಿಕ್ಕಮಗಳೂರು ಮತ್ತು ಹಾಸನ ಈ ಜಿಲ್ಲೆಗಳಲ್ಲಿ ಎಲ್ಲೆಲ್ಲಿ ವಿದ್ಯುತ್‌ನ್ನು ಉತ್ಪಾದನೆ ಮಾಡಬಹುದೆಂದು ನಮ್ಮ ಡಿವಿಷನ್ ತೋರಿಸಿ ಕೊಡತಕ್ಕಂಥದ್ದು, ಸರ್ಕಾರದ ಮುಂದೆ ಇಡತಕ್ಕಂಥದ್ದು ನಮ್ಮ ಕೆಲಸವೆಂದು ಆ ಇಲಾಖೆಯವರು ಹೇಳಿದರು. ನನಗನ್ನಿಸಿತ್ತು ಅವರು ಹೇಳಿದಂತಹ ಸಂದರ್ಭದಲ್ಲಿ ಬಹಳ ದೊಡ್ಡ ವಿಚಾರ ಸಿಕ್ಕಿತ್ತು. ಅವರು ಏನು ಹೇಳಿದರು ಎಂದರೆ ನಮ್ಮಲ್ಲಿ ಈಗ ಸ್ವಲ್ಪ ಕೆಲಸ ಕೂಡ ಇಲ್ಲ ಸಾರ್, ನಮ್ಮಲ್ಲಿ ಸುಮಾರು ವಿದ್ಯುತ್ ಯೋಜವೆಗಳಿವೆ, ಶ್ರೀರಾಮ ದೇವರ ಕಟ್ಟೆ, ಗೋರೂರು ಅಣೆಕಟ್ಟೆ ಮತ್ತು ಸಕಲೇಶಪುರದಿಂದ ಹೊರಟರೆ ಕುಮಾರಧಾರ ಮತ್ತು ಪುಷ್ಪಗಿರಿ ಎಂದು ಎರಡು ದೊಡ್ಡ ವಿದ್ಯುತ್ ಯೋಜನೆಗಳಿವೆ. ಇಲ್ಲಿ 500 ಮೇಗಾವ್ಯಾಟ್ ಉತ್ಪಾದಿಸಬಹುದು. ಬಹುಶಃ ಈ ರಾಜ್ಯ ಏನು ವಿದ್ಯುತ್‌ನ್ನು ಜನರೇಟ್ ಮಾಡುತ್ತಿದೆ ಅದರಲ್ಲಿ 100ರಲ್ಲಿ 20ಪರ್ಸೆಂಟ್‌ನ್ನು ಇಲ್ಲಿ ತಯಾರು ಮಾಡಬಹುದು. ಸಕಲೇಶಪುರದಿಂದ ಪುತ್ತೂರಿಗೆ ಹೋಗುವಂತಹ ದಾರಿಯಲ್ಲಿ ಇದೊಂದು ಮಿನಿ ಸ್ವಿಡ್‌ಜರ್ಲ್ಯಾಂಡ್ ಮಾಡಬಹುದು ಎನ್ನುವಂತಹ ಮಾಹಿತಿಯನ್ನು ಆ ಇಲಾಖೆಯಿಂದ ಪಡೆದಾಗ, ಸರ್ಕಾರ ಇವರಿಗೆ ಏಕೆ ಕೆಲಸವನ್ನು ಕೊಟ್ಟಿಲ್ಲ? ಎಲ್ಲಾವನ್ನು ಪ್ರೈವೇಟ್‌ನವರಿಗೆ ಏಕೆ ಸರ್ಕಾರ ಕೊಡುತ್ತಿದೆ ಎಂದು ಕೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ಹಲವಾರು ವಿದ್ಯುತ್ ಯೋಜನೆಗಳನ್ನು ಖಾಸಗಿಯವರಿಗೆ ಕೊಟ್ಟು ಇವತ್ತು ಅವರು ಏನು ಮಾಡುತ್ತಿದ್ದಾರೆಂದರೆ, ಇವತ್ತು ಈ ಯೋಜನೆಗಳು ನಮ್ಮ ಕೈಯಲ್ಲಿದೆ, ಸರ್ಕಾರದವರು ಏನು ಮಾಡುತ್ತಾರೆಂದು ಸರ್ಕಾರವನ್ನು ಆಟವಾಡಿಸುತ್ತಿದ್ದಾರೆ. ಯಾರಾದರೂ ಒಂದು ಯೋಜನೆಗೆ ಸರ್ಕಾರದಿಂದ

ದಿಂದ ಗುತ್ತಿಗೆ ಪಡೆದುಕೊಂಡರೆ, ಆತ ದೇಶ ಸೇವೆಗಾಗಿ ಅಥವಾ ರಾಜ್ಯ ಸೇವೆಗಾಗಿ ಅವನ್ನು ಗುತ್ತಿಗೆಯನ್ನು ಪಡೆದುಕೊಳ್ಳುವುದಿಲ್ಲ. ಅವನು ಬಂಡವಾಳವನ್ನು ಹೂಡಿದವನು ಲಾಭ ಎಷ್ಟು ಬರು-ತ್ತದೆ, ಹೇಗೆ ಹೆಚ್ಚು ಲಾಭವನ್ನು ಪಡೆಯಬಹುದು ಎಂಬುದೇ ಅವನ ಬಹು ಮುಖ್ಯವಾದಂತಹ ಆಸೆ-ಯಾಗಿರುವುದರಿಂದ ಅವರನ್ನು ನಂಬಿದರೆ ಈ ರಾಜ್ಯದ ಜನಕ್ಕೆ ಮುಂದೆ ಸರಬರಾಜು ಮಾಡಲಿಕ್ಕೆ ಸಾಧ್ಯವಿಲ್ಲ. ಈ ಸರ್ಕಾರ ಅಲ್ಲ ಯಾವುದೇ ಸರ್ಕಾರಕ್ಕೆ ಸಾಧ್ಯವಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಇವತ್ತು ವಿದ್ಯುತ್ಶಕ್ತಿ ಇಲಾಖೆಯು ಯಾರ ಕೈಯಲ್ಲಿದೆ ಎಂದರೆ ವಿದ್ಯುತ್ಶಕ್ತಿ ಇಲಾಖೆಯವರ ಕೈಯಲ್ಲಿಲ್ಲ. ಯಾರು ಎಕ್ಸಿಕ್ಯೂಟೀವ್ ಇಂಜಿನಿಯರ್ ಆಗಲಿ, ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿ-ಯರ್ ಆಗಲಿ ಅವರೆಲ್ಲರೂ ಅಸಹಾಯಕರಾಗಿ, ಏನೋ ಪುಟ್ಟೇಗೌಡರೇ, ನಿಮ್ಮ ಊರಿಗೆ 3 ವರ್ಷ ಹಾಕಿಕೊಟ್ಟಿದ್ದೀರಿ, ಹೇಗೋ 3 ವರ್ಷ ಇದ್ದು ಹೋಗುತ್ತೇವೆ, ಬೆಳಿಗ್ಗೆ ಸಂಜೆ ಜನರು ನಮ್ಮನ್ನು ಬೈಯುತ್ತಾರೆ. ಅವರು ಕೈಯಲ್ಲಿಯೂ ಸಹ ಬೈಸಿಕೊಳ್ಳುತ್ತೇವೆ. ಸಾಯಂಕಾಲ ಬಂದು ತಾವು ಟ್ರಾನ್ಸ್-ಫಾರ್ಮರ್ ಹೋಯಿತಲ್ಲಾ ಎಂದು ಬೈಯುತ್ತೀರಿ ಬೈಯಿಸಿಕೊಳ್ಳುತ್ತೇವೆ. ಇನ್ನು ಎರಡು ವರ್ಷಗಳ ಕಾಲ ಇಲ್ಲಿ ಮುಂದೆ ಕೆ.ಆರ್.ಪೇಟೆಗೆ ಹೋಗುತ್ತೇನೆ ಅಲ್ಲಿಯವರೆಗೆ ಹೇಗೋ ನಮ್ಮ ಕೈಲಾದ ಮಟ್ಟಿಗೆ ನಿರ್ವಹಿಸಿಕೊಂಡು ಹೋಗುತ್ತೇವೆ. ಇದನ್ನು ಸರಿ ಮಾಡುವುದಕ್ಕೆ ಖಂಡಿತ ಆ ಬ್ರಹ್ಮನ ಕೈಯಲ್ಲಿಯೂ ಕೂಡ ಸಾಧ್ಯವಿಲ್ಲವೆಂದು ಹೇಳುತ್ತಾರೆ. ಏತಕ್ಕೆ ಎಂದು ಅವರನ್ನು ಸವಿಸ್ತಾರವಾಗಿ ನಾನು ಕೇಳಿದಾಗ ಬಹುಶಃ ನಮ್ಮ ಊರಿನಲ್ಲಿ 8 ಸಾವಿರದಿಂದ 10 ಸಾವಿರದವರೆಗೆ ಐ.ಪಿ.ಸೆಟ್ ಬೋರ್‌ವೆಲ್‌ಗಳಿವೆ. ಅದರಲ್ಲಿ 3 ಸಾವಿರದಿಂದ ಮೂರೂವರೆ ಸಾವಿರ ಬೋರ್‌ವೆಲ್‌ಗಳಿಗೆ ಅನಧಿಕೃತವಾಗಿ ವಿದ್ಯುಚ್ಛಕ್ತಿ-ಯನ್ನು ಅವರವರ ಲೈನ್‌ನ್ನು ಎಳೆದುಕೊಂಡಿದ್ದಾರೆ. ಅದರ ಆಪರೇಷನ್ ಕೂಡ ಅವರ ಕೈಯಲ್ಲಿಯೇ ಇದೆ. ನಾವು ಇದೇನು ಈ ರೀತಿಯಾಗಿದೆ ಎಂದು ಗಲಾಟೆಯನ್ನು ಮಾಡಿದಾಗ ಅಲ್ಲಿಗೆ ವಿಜಿಲೆನ್ಸ್-ನವರು ಬಂದಾಗ ಆ ಮೂರು ಸಾವಿರ ಜನರು ನಮ್ಮ ಮನೆಯ ಹತ್ತಿರ ಬಂದು ಕುಳಿತುಕೊಂಡರು. ಪುಟ್ಟೇಗೌಡರೇ, ನಿಮಗೆ ಓಟು ಕೊಟ್ಟಿದ್ದು ಏಕೆ? ನಾವು ಹೇಗೋ ಬೆಳೆದುಕೊಳ್ಳುತ್ತಿದ್ದೆವು, ನೀವು ನೋಡಿದರೆ ಆ ಪಂಪು ಸೆಟ್‌ಗಳಿಗೆ ವಿದ್ಯುಚ್ಛಕ್ತಿ ಲೈನ್ ಕಿತ್ತು ಹಾಕಿ ಎಂದು ಹೇಳಿದ್ದೀರೋ ಎಂದು ಹೇಳುತ್ತಾರೆ. ಇದನ್ನು ನೋಡಿದಾಗ ನನಗೆ ಕಷ್ಟವಾಯಿತು. ಏಕೆಂದರೆ ಹತ್ತಾರು ವರ್ಷಗಳಿಂದ ನಡೆದುಕೊಂಡು ಬಂದಂತಹ ಪದ್ಧತಿಯನ್ನು ತೆಗೆದರೆ ನಾವು ನಿಷ್ಠೂರಕ್ಕೆ ಈಡಾಗಬೇಕಾಗುತ್ತದೆ. ಹೇಗೋ ಸ್ವಲ್ಪ ದಿವಸ ನಡೆಯಲಿ, ಕ್ರಮೇಣ ಇದನ್ನು ಅಕ್ರಮವಾಗಿರತಕ್ಕಂಥದ್ದನ್ನು ಸಕ್ರಮ ಮಾಡಲಿ ಎಂದು ಸುಮ್ಮನಾದೆ. ಆದರೆ ಇದನ್ನೆಲ್ಲ ಸರಿ ಮಾಡುವುದಕ್ಕೆ ವಿದ್ಯುಚ್ಛಕ್ತಿ ಇಲಾಖೆಗೆ ಬಹಳ ಕಷ್ಟ ಸಾಧ್ಯವಾಗಿದೆ. ಅದರಿಂದ ಇವತ್ತು ಏನು ವಿದ್ಯುಚ್ಛಕ್ತಿ ಜನರೇಷನ್ ಆಗಲಿಲ್ಲ ಎಂದರೆ ಬಹುಶಃ ನಮ್ಮ ಕಡೆ ಅಲ್ಲ 10 ವರ್ಷ ಕಳೆದರೆ ಯಾವ ಊರಿಗೂ ಕೂಡ ಕುಡಿಯುವ ನೀರನ್ನು ಕೊಡುತ್ತೇವೆನ್ನುವ ಮಾತು ಹಸೀ ಸುಳ್ಳು. ಬಹುಶಃ ನಮ್ಮ ಶ್ರೀ ಸುರೇಶ್ ಕುಮಾರ್‌ರವರು ಏನು ಹೇಳುತ್ತಿದ್ದರು. ಏನೆಂದರೆ ಬೆಂಗಳೂರು ನಗರ ತುಂಬಾ ಬೆಳೆಯುತ್ತಿದೆ ಅದನ್ನು ಬೆಳೆಯದ ಹಾಗೆ ತಡೆಗಟ್ಟಬೇಕೆಂದು, ತಡೆಯಬೇಕಾದರೆ ಬರುವ ನೀರು ಟಾರು ಎಲ್ಲವನ್ನು ಬೆಂಗಳೂರಿಗೆ ಮೈಸೂರಿಗೆ ಹಾಕಿಕೊಂಡರೆ

ಎಲ್ಲರೂ ಇಲ್ಲಿಗೆ ಬರುತ್ತಾರೆ. ಬೆಂಗಳೂರಿನಲ್ಲಿ ಸ್ವಲ್ಪ ರಸ್ತೆಗಳು ಗುಂಡಿ ಬೀಳಲಿ, ಪವರ್‌ನ್ನು ಸ್ವಲ್ಪ ಕಡಿಮೆ ಮಾಡಿ ಇವತ್ತು ಪೀಣ್ಯದಲ್ಲಿ ವಿದ್ಯುಚ್ಛಕ್ತಿಯನ್ನು ಕದಿಯುವರಿಗೆ ನೀವು ಕರೆಂಟ್‌ನ್ನು ಕೊಡು-ವುದಾದರೆ ನೀವು ದೊಡ್ಡ ಕೈಗಾರಿಕೆಗಳಿಗೆ ಮತ್ತು ಹಳ್ಳಿಗಾಡಿನ ಜನರಿಗೆ ಕರೆಂಟ್‌ನ್ನು ಹೇಗೆ ಕೊಡುವು-ದಕ್ಕೆ ಸಾಧ್ಯ ಇದೆ? ದಯಮಾಡಿ ಇವತ್ತು ಏನು ಒಂದು ವಿದ್ಯುತ್ ವ್ಯವಸ್ಥೆ ಇದೆ ಇದಕ್ಕೆ ಬಹಳ ವಿಶೇಷವಾಗಿ ಆದ್ಯತೆಯನ್ನು ಕೊಡಬೇಕು. ಇವತ್ತು ಹಳ್ಳಿಯ ಜನರು ಎಲ್ಲದ್ದಕ್ಕೂ ವಿದ್ಯುಚ್ಛಕ್ತಿಯನ್ನೇ ಅವಲಂಬಿತರಾಗಿದ್ದಾರೆ. ಅವರು ಕುಡಿಯುವ ನೀರಿನಿಂದ ಹಿಡಿದು, ಅವರು ಬೆಳೆಯತಕ್ಕಂತಹ ಕಬ್ಬು, ರೇಷ್ಮೆ ಬೆಳೆಗಳು ಯಾವುದು ಇದೆ ಅದಕ್ಕೆಲ್ಲಕ್ಕೂ ಕೂಡ ಇವತ್ತು ವಿದ್ಯುಚ್ಛಕ್ತಿ ಇಲ್ಲದೇ ಇದ್ದರೆ ಇನ್ನು ಹತ್ತಾರು ವರ್ಷಗಳ ಮನುಷ್ಯರ, ರೈತರ ಹಳ್ಳಿಯ ಜೀವನ ಬಹಳ ಕತ್ತಲೆಯಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇವತ್ತು ಏನು ಇಂತಹ ಹೊಸ ವಿದ್ಯುತ್ ಯೋಜನೆಗಳನ್ನು ಮಾಡುವು-ದರಲ್ಲಿ ಖಂಡಿತವಾಗಿ ಧೈರ್ಯವಾಗಿ, ಈ ದೇಶದಲ್ಲಿ ಬಹಳಷ್ಟು ಸರ್ಕಾರಗಳು ಆಡಳಿತವನ್ನು ನಡೆಸಿ ಹೋಗಿದೆ. ಯಾವುದೇ ಸರ್ಕಾರ ಬಂದರೂ ಕೂಡ ಬಡವರಿಗಾಗಿ ನಾನು ಎಲ್ಲಾ ಕಾರ್ಯಕ್ರಮವನ್ನು ಮಾಡುತ್ತೇವೆಂದು ಹೇಳುತ್ತಾರೆ. ಬಡವರಿಗಾಗಿ ಯಾವುದೇ ಸರ್ಕಾರ ಖರ್ಚು ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ಒಂದು ಸರ್ಕಾರ 100 ಕೋಟಿ ರೂಪಾಯಿಗಳನ್ನು ಬಡವರಿಗಾಗಿ ಕೊಟ್ಟರೆ ಮತ್ತೊಂದು ಸರ್ಕಾರ ಬಂದಾಗ 200 ಕೋಟಿ ರೂಪಾಯಿಗಳನ್ನು ಕೊಡುತ್ತದೆ. ಆ ರೀತಿಯಾಗಿ ಕೊಡತಕ್ಕಂತಹ ಕೋಟ್ಯಾಂತರ ರೂಪಾಯಿಗಳನ್ನು ಸೇರಿಸಿ 49 ವರ್ಷಗಳ ಲೆಕ್ಕಇಟ್ಟು ನೋಡಿದರೆ ಈ ದೇಶದಲ್ಲಿರತಕ್ಕಂತಹ ಎಲ್ಲಾ ಬಡವರಿಗೂ ಸಹ ಸದಾಶಿವನಗರದಲ್ಲಿ 20-40ರ ಸೈಟನ್ನು ಕೊಡ-ಬಹುದು. ಅಷ್ಟು ದುಡ್ಡನ್ನು ಸರ್ಕಾರ ಖರ್ಚು ಮಾಡಿದೆ. ಆದರೆ ಇನ್ನು ಬಡವರು ಮುಂದೆ ಬರಲಿಕ್ಕೆ ಆಗಿಲ್ಲ ಎನ್ನುವುದನ್ನು ನಮ್ಮ ಮುಂದೆ ಇರತಕ್ಕಂಥದ್ದನ್ನು ನೋಡುತ್ತೇವೆ. ಏತಕ್ಕೆ ಎಂದರೆ, ಬಡತನ ಒಮ್ಮೊಮ್ಮೆ ಬಡವ ತಾನು ತಂದುಕೊಳ್ಳುವುದು ಎನ್ನುವುದು ಉಂಟು. ಏಕೆ ಈ ಮಾತುಗಳನ್ನು ಹೇಳುತ್ತೇನೆಂದರೆ ನಾವು ಹಳ್ಳಿಗಾಡಿಗೆ ಜನತಾ ಮನೆಗಳನ್ನು, ಆಶ್ರಯ ಮನೆಗಳನ್ನು ಕೊಡಬೇಕೆಂದು ಹೋದರೆ ನಮಗೆ ಯಾರು ತೋರಣವನ್ನು ಕಟ್ಟಿರುತ್ತಾನೆ ಅವನೇ ನಮ್ಮ ಹತ್ತಿರ ಅರ್ಜಿಯನ್ನು ಮೊದಲು ತರುತ್ತಾನೆ. ಅವನಿಗೆ ಆರ್.ಸಿ.ಸಿ. ಮನೆ ಮುಂದುಗಡೆ ಇದ್ದರೆ ಕೊಟ್ಟಿಗೆಯನ್ನು ಕಟ್ಟಿಕೊಳ್ಳು-ವುದಕ್ಕೆ ಹಿಂದುಗಡೆ ನಮಗೆ ಕೊಡಿ ಎಂದು ಹೇಳುತ್ತಾನೆ. ಇವತ್ತು ಆ ಬಡವನಿಗೆ ಅದನ್ನು ಕೊಡಿ ಎಂದು ಕೇಳುವಂತಹ ಆಸಕ್ತಿ ಕೂಡ ಇಲ್ಲ. ಪಾಪ ಅವನು ಬೆಳಿಗ್ಗೆ ಗದ್ದೆ ಕೆಲಸಕ್ಕೆ ಹೋದರೆ ಬರುವುದು ಸಾಯಂಕಾಲವಾಗುತ್ತದೆ. ಏಕೆಂದರೆ ಅವನಿಗೆ ಹೊಟ್ಟೆಗೆ ಬೇಕಲ್ಲ, ನಾನು ಬರುವಾಗ ಎಲ್ಲಿ ತೋರಣ-ವನ್ನು ಕಟ್ಟಿಕೊಂಡು ಕುಳಿತುಕೊಳ್ಳುವುದಕ್ಕೆ ಆಗುತ್ತದೆ. ಆದ್ದರಿಂದ ನಾವು ಕೊಡತಕ್ಕ ಆಶ್ರಯ ಮನೆ-ಗಳು ಕೂಡ ಅವನಿಗೆ ಸೇರುವುದಿಲ್ಲ. ನೀವು ಯಾವುದೇ ಊರಿನಲ್ಲಿ ಹೋಗಿ 10 ಜನ ಬಡವರನ್ನು ಗುರುತಿಸುವಂತಹ ಕೆಲಸ ಇದೆಯಲ್ಲಾ, ಸರ್ಕಾರವಾಗಲಿ, ಶಾಸಕನಾಗಲಿ, ಮಂತ್ರಿಯಾಗಲಿ ಅದನ್ನು ಮಾಡುವುದು ಅಷ್ಟು ಸುಲಭ ಸಾಧ್ಯವಾದಂತಹ ಕೆಲಸವಲ್ಲ. ಅದರಿಂದ ನೀವು ಬಡವರಿಗೆ ಕೊಡ-ತಕ್ಕಂತಹ ಸೌಲಭ್ಯಗಳನ್ನೆಲ್ಲ ನಿಲ್ಲಿಸಿ ಎಂದು ಕೂಡ ಹೇಳುವುದಿಲ್ಲ. ಈ ದೇಶದ ಬಡವರನ್ನು ಉದ್ಧಾರ

ಮಾಡುತ್ತೇವೆಂದು ಹೋಗಿ ಈ ದೇಶವೇ ಬಡವಾದೀತು, ಈ ರಾಜ್ಯವೇ ಬಡವಾದೀತು ಎಂಬ ಸಂಶಯ, ಭಯ ನಮಗೆ ಇದೆ. ಏಕೆಂದರೆ ನಾವು ಪ್ರತಿನಿತ್ಯ ಒಂದು ಸರ್ಕಾರ ಬಂದರೆ ಬಡವರಿಗೆ ಒಂದು ಹಿತ್ತಾಳೆ ತಟ್ಟೆಯನ್ನು ಕೊಡುತ್ತೇವೆ, ಗುದ್ದಲಿಯನ್ನು ಕೊಡುತ್ತೇವೆ, ಪಿಕಾಸಿಯನ್ನು ಕೊಡು-ತ್ತೇವೆ, ಬಡವರಿಗೆ ಐ.ಪಿ. ಸೆಟ್‌ಗಳನ್ನು ಕೊಡುತ್ತೇವೆ ಎಂದು ಹೇಳಿ ಮಾತೆತ್ತಿದ್ದರೆ ಹಿಂದುಳಿದವರ ಹೆಸರು. ಮನುಷ್ಯರನ್ನೆಲ್ಲ ಒಂದು 50 ಗುಂಪುಗಳನ್ನಾಗಿ ಮಾಡಿ (ಎ) ಗ್ರೂಪ್, (ಬಿ) ಗ್ರೂಪ್, (3ಎ) (3ಬಿ) ಈ ರೀತಿಯಲ್ಲಾ ಮಾಡಿಕೊಂಡು ಬಂದಂತಹ ಸವಲತ್ತುಗಳೆಲ್ಲ ಒಕ್ಕಲಿಗರಿಗೆ ಬರತಕ್ಕಂತಹ ಸವಲತ್ತುಗಳೆಲ್ಲ ಪುಟ್ಟೇಗೌಡನಿಗೋ, ಪುಟ್ಟೇಗೌಡನ ತಮ್ಮನ ಮಗನಿಗೊ ಸಿಗುತ್ತಿದೆ. ಹಿಂದುಳಿದ ವರ್ಗದವರಿಗೇನಾದರೂ ಸವಲತ್ತುಗಳು ಸಿಗುತ್ತಿದೆಂದರೆ ರಾಚಯ್ಯನವರಿಗೊ, ರಾಚಯ್ಯನವರ ಸಂ-ಬಂಧಿಕರಿಗೊ ಸಿಗುವುದಾದರೆ, ಒಕ್ಕಲಿಗರಿಗೆ ಸಿಗುವಂತಹ ಸವಲತ್ತುಗಳು ನಂಜೇಗೌಡರಿಗೋ, ನಂಜೇ ಗೌಡರ ಸಂಬಂಧಿಕರಿಗೊ ಸಿಗುವುದಾದರೆ, ಅಥವಾ ಜೆ.ಹೆಚ್. ಪಟೇಲ್‌ರಿಗೊ ಅಥವಾ ಜೆ.ಹೆಚ್. ಪಟೇಲರ ಸಂಬಂಧಿಕರಿಗೊ ಸಿಗುವುದಾದರೆ ಆ ಸವಲತ್ತುಗಳನ್ನು ಕೊಡುತ್ತೇವೆಂದು ಈ ರಾಜ್ಯದಲ್ಲಿ ಖರ್ಚು ಮಾಡಿದಂತಹ ದುಡ್ಡು ನಿಜವಾಗಿಯೂ ಬಡವರ ಮಕ್ಕಳಿಗೆ ಅದು ಹೋಗುವುದಿಲ್ಲ. ಒಂದು ಮೆಡಿಕಲ್ ಸೀಟನ್ನು ಕೊಡಬೇಕಾದುದು ರಾಚಯ್ಯನವರಿಗೆ ಅಲ್ಲ, ರಾಚಯ್ಯನವರ ಮಗನಿಗೆ ಅಲ್ಲ ಊರ ಮೈಲಾರಣ್ಣನ ಮಗನಿಗೆ ಕೊಡಬೇಕು. ರಾಚಯ್ಯನವರ ಊರಿನಲ್ಲಿರತಕ್ಕಂತಹ ಕಟ್ಟಕಡೆಯನಿಗೆ ಕೊಡಬೇಕಾದಂಥದ್ದು. ಒಕ್ಕಲಿಗರಿಗೆ ಕೊಡತಕ್ಕಂತಹ ಸವಲತ್ತುಗಳನ್ನು ದೇವೇಗೌಡರಿಗೆ ಕೊಡತಕ್ಕ-ದ್ದಲ್ಲ, ಶ್ರೀ ದೇವೇಗೌಡರ ಮನೆಯಲ್ಲಿರತಕ್ಕಂತಹ ಒಬ್ಬ ನಿರ್ಗತಿಕನಿಗೆ ಕೊಡಬೇಕೆಂದು ನಾನು ಆಗ್ರಹವನ್ನು ಮಾಡಿ ಈ ಒಂದು ಸವಲತ್ತುಗಳನ್ನು ಕೊಡುವಂತಹ ಸಂದರ್ಭದಲ್ಲಿ ಸರ್ಕಾರಕ್ಕೆ ಬಹಳ ಎಚ್ಚರಿಕೆ ಇರಬೇಕು ಎಂದು ಹೇಳಬಯಸುತ್ತೇನೆ. ನಮ್ಮ ಸುರೇಶ್‌ಕುಮಾರ್‌ರವರು ಒಂದು ಮಾತನ್ನು ಏನು ಹೇಳಿದರು ಎಂದರೆ, ರಾಜಕಾರಣಿಗಳು ಮತ್ತು ಮಧ್ಯವರ್ತಿಗಳು ಕಂಟ್ರಾಕ್ಟರ್, ವ್ಯಾಪಾರಸ್ಥರು ಇರುತ್ತಾರೆ - ಈ ಮೂರು ಜನರು ದೇಶವನ್ನು ಲೂಟಿ ಮಾಡುತ್ತಾರೆಂದು ಹೇಳಿದರು. ಆಗ ಒಂದಿ-ಬ್ಬರು ಸದಸ್ಯರು ಏನ್ರೀ ನೀವು ರಾಜಕಾರಣಿಗಳಾಗಿ ಈ ಮಾತನ್ನು ಹೇಳುತ್ತೀರಿ ಎಂದರು. ನಿನ್ನೆ ಕೂಡ ಒಂದು ಗಂಭೀರವಾದಂತಹ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಒಬ್ಬ ಅಧಿಕಾರಿ ಚುನಾಯಿತ ಪ್ರತಿನಿಧಿಯ ಮೇಲೆ ತನ್ನ ದಾಳಿಯನ್ನು ಮಾಡಿದ ಎಂದು ಹೇಳಿದರು ಬಹುಶಃ ನಾನು ಇದು ಇಲ್ಲ ಎಂದು ಹೇಳುವುದಿಲ್ಲ. ನಾವು ಅವರನ್ನು ಕಂಟ್ರೋಲ್ ಮಾಡುವ ಸ್ಥಿತಿಗೆ ಹೋಗಿದೆ. ಬಹುಶಃ ಒಂದು ಗ್ರಾಮಲೆಕ್ಕಿಗನು ನಾನೊಬ್ಬ ಶಾಸಕನಾಗಿ ಹೇಳಿದ್ದನ್ನು ಅವನು ಬರೆಯುವುದಿಲ್ಲ. ನಾನು ಕೇಳಿದ್ದನ್ನು ನಾನು ಹೇಳಿದ್ದು ಎಂದು ಬರೆಯುತ್ತಾನೆ. ಆ ಸ್ಥಿತಿಗೆ ಅಧಿಕಾರಿಗಳ ವಿಚಾರ ತಲುಪಿದೆ. ಅದಕ್ಕೆ ಕಾರಣ ನಾವು ರಾಜಕಾರಣಿಗಳು ಎಂದು ಈ ಶಾಸನ ಸಭೆಯಲ್ಲಿ ಹೇಳಿಕೊಳ್ಳಲಿಕ್ಕೆ ಇಚ್ಛೆಪಡುತ್ತೇನೆ, ಏಕೆಂದರೆ ಒಬ್ಬ ಅಧಿಕಾರಿ ಲಂಚವನ್ನು ಹೊಡೆದುದು 25 ಪರ್ಸೆಂಟ್ ಇದ್ದರೆ ಅದರಲ್ಲಿ ರಾಜಕಾರಣಿಗಳ ಪಾಲು ಇದ್ದೇ ಇರುತ್ತದೆ. ನಾನು 10,000 ರೂಪಾಯಿಗಳನ್ನು ಅಧಿಕಾರಿಯಿಂದ ತೆಗೆದುಕೊಂಡರೆ ಅವನು 10 ಲಕ್ಷ ರೂಪಾಯಿಗಳನ್ನು ನನ್ನ ತಾಲ್ಲೂಕಿನಿಂದ ಲೂಟಿ ಮಾಡದೇ ಅವನು ಹೋಗುವುದಿಲ್ಲ

ಎನ್ನತಕ್ಕಂತಹ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಕೋಟ್ಯಾಂತರ ರೂಪಾಯಿಗಳನ್ನು ಸರ್ಕಾರದವರು ಬಿಡುಗಡೆ ಮಾಡುತ್ತಿದ್ದಿರಾ, ಇದೇ ರೀತಿಯಲ್ಲಿ ಹಿಂದೆ ವೀರಪ್ಪ ಮೊಯ್ಲಿಯವರ ಸರ್ಕಾರ ಮಾಡಿರಬಹುದು, ಬಂಗಾರಪ್ಪನವರ ಸರ್ಕಾರ ಮಾಡಿರಬಹುದು ಅವರೆಲ್ಲರೂ ಅವರವರ ಶಕ್ತ್ಯಾನುಸಾರವಾಗಿ ಮಾಡಿದ್ದಾರೆ. ಎಷ್ಟು ದುಡ್ಡು ಜನರಿಗೆ, ಬಡವರಿಗೆ, ರೈತರಿಗೆ, ಅವರ ಭಾಗದ ಹಣ ತಲುಪುತ್ತಿದೆ ಎಂದು ನೋಡಿದಾಗ ಬಹುಶಃ ಈ ಸರ್ಕಾರಕ್ಕೆ 45 ಜನರು ಮಂತ್ರಿಗಳಿದ್ದಾರೆ ಬಹುಶಃ ಇದು ದೊಡ್ಡದಾಯಿತು ಎಂದು ಹೇಳುತ್ತಾರೆ. ಇತ್ತೀಚಿನ ಜನಸಂಖ್ಯೆಯ ಒತ್ತಡ ಮತ್ತು ಈ ಭ್ರಷ್ಟಾಚಾರವನ್ನು ನೋಡಿದಾಗ ಇನ್ನು 4-6 ಜನರನ್ನು ಮಂತ್ರಿಗಳನ್ನು ತೆಗೆದುಕೊಂಡರೆ ಅದು ತಪ್ಪು ಸರಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ರೈತರ ಹೆಸರು ಹೇಳಿ ಕೇಂದ್ರ ಸರ್ಕಾರದಿಂದ ಕೋಟ್ಯಾಂತರ ರೂಪಾಯಿಗಳ ಫಂಡ್ ಬರುತ್ತದೆ. ರಾಜ್ಯ ಸರ್ಕಾರ ಪ್ರತಿವರ್ಷ ಅನುದಾನವನ್ನು ಸಹ ಕೊಡುತ್ತದೆ. ಇನ್ನು ಯಾವುದೇ ಸ್ಕೀಂನಲ್ಲಿ ಹಣವನ್ನು ತರುತ್ತಾರೆ. ಸಾಲ ಕೊಡಬಹುದು, ಸಾಲವನ್ನು ಹೊರಗಡೆ ಕೊಡದೇ ಹೋಗಬಹುದು. ಅದನ್ನು ಬೆಂಗಳೂರಿನಲ್ಲಿ ಕುಳಿತುಕೊಂಡು ನಿಮ್ಮ ಯೋಜನೆಗಳನ್ನು ತಯಾರು ಮಾಡಿದರೆ ಅದು ಖಂಡಿತವಾಗಿಯೂ ನಿಜವಾದಂತಹ ರೈತನಿಗೆ ತಲುಪುವುದಿಲ್ಲ. ಇತ್ತೀಚೆಗೆ ಒಂದು ಇಲಾಖೆಯನ್ನು ತೆಗೆದುಹಾಕಿದ್ದೇವೆಂದು ಹೇಳುತ್ತಿದ್ದಾರೆ. ಅದು ಯಾವುದು ಎಂದರೆ ಸಾಯಿಲ್ ಕನ್ಸರ್ವೇಷನ್ ಇಲಾಖೆಯಂತೆ. ನೀವು ಈಗ ಅಧಿಕಾರದಲ್ಲಿರುವವರನ್ನು ಕೇಳಬೇಡಿ, ಯಾರಾದರೂ ನಿವೃತ್ತರಾಗಿರುವವರನ್ನು ನಿಮ್ಮ ಕೆಲಸ ಏನು ಎಂದು ಕೇಳಿ. ಅವರು ಹೇಳುತ್ತಾರೆ, ನಮ್ಮ ಕೆಲಸ ಏನೂ ಇಲ್ಲ ಸ್ವಾಮಿ, ಮಾರ್ಚಿ 31ನೇ ತಾರೀಖಿನವರೆಗೂ ಕಾದಿದ್ದು ಎಷ್ಟು ಬಂಡವಾಳ ಬಂತು, ರಾಜಕಾರಣಿಗಳಿಗೆ ಎಷ್ಟು ತೋರಿಸಿದೆವು, ಜನರಿಗೆ ಎಷ್ಟು ತೋರಿಸಿದೆವು, ಇನ್ನುಳಿದ ಹಣವನ್ನು ನಾವು ಎಷ್ಟು ಹಂಚಿಕೊಂಡೆವು ಎಂಬುದೇ ನಮ್ಮ ಕೆಲಸ ಎಂದು ಅವರು ಹೇಳುತ್ತಾರೆ. ಈಗ್ಯೆ 49 ವರ್ಷಗಳ ಹಿಂದೆ ಮಹಾತ್ಮಾ ಗಾಂಧಿಯವರು ಹಳ್ಳಿಯ ಸ್ವರಾಜ್ಯದ ಕನಸನ್ನು ಕಂಡರು; ಗ್ರಾಮ ಸ್ವರಾಜ್ಯವಾಗಬೇಕು, ಹಳ್ಳಿಗೆ ಅಧಿಕಾರವನ್ನು ಹಂಚಬೇಕೆಂಬ ಕನಸಿನ ಮೇಲೆ 3 ಹಂತದ ಸರ್ಕಾರ ಪ್ರಾರಂಭವಾಯಿತು. ಅಂದರೆ ದೆಹಲಿಯಲ್ಲಿ ಒಂದು ಸರ್ಕಾರ ಇದ್ದರೆ, ರಾಜ್ಯದ ಹಳ್ಳಿಯಲ್ಲೂ ಒಂದು ಸರ್ಕಾರ ಇರಬೇಕೆಂದು ಮಾಡಿದರು. ಅಲ್ಲಿ ಒಬ್ಬ ಮಹಿಳೆಗೆ ಅಧಿಕಾರವನ್ನು ಕೊಟ್ಟಿರಬಹುದು ಅಥವಾ ಹಿಂದುಳಿದ ವರ್ಗದ ಕುಂಬಾರ ವರ್ಗದವನಿಗೆ ಒಂದು ಅಧಿಕಾರ ಸಿಕ್ಕಿರಬಹುದು ಅಥವಾ ನಮ್ಮೂರಿನ ಬುಡುಬುಡುಕೆಯ ರಾಮಣ್ಣನಿಗೆ ಅಧಿಕಾರವನ್ನು ಕೊಟ್ಟಿರಬಹುದು. ಅವನಿಗೆ ಕೊಟ್ಟಿರುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಈ ದೇಶದ ಪ್ರಧಾನ ಮಂತ್ರಿಯಾದ ಮಾನ್ಯ ದೇವೇಗೌಡರಿಗೂ ಒಂದು ಓಟು, ರಾಜ್ಯದ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರಿಗೂ ಒಂದೇ ಓಟು, ಅವನಿಗೂ ಒಂದೇ ಓಟು. ಎಲ್ಲರಿಗೂ ಸಮಾನವಾದ ಹಕ್ಕಿದೆ. ಅವನಿಗೆ ಓಟು ಕೊಟ್ಟಿರುವುದು ಗಾಂಧೀಜಿಯವರ ಕನಸು ಸರಿ. ಆದರೆ ಈ ರೀತಿ ಕೊಡತಕ್ಕ ಪರಿಸ್ಥಿತಿ ಅವತ್ತಿಗೂ ಇವತ್ತಿಗೂ ಬಹಳಷ್ಟು ವ್ಯತ್ಯಾಸ ಇದೆ. ಬಹಳಷ್ಟು ಬದಲಾವಣೆ ಇದೆ. ಇವತ್ತು ಒಬ್ಬ ಮಹಿಳೆಗೆ ಅಧಿಕಾರವನ್ನು ಕೊಟ್ಟಾಗ ಆಕೆ ಸ್ವಲ್ಪ ಮಟ್ಟಿಗೆ ಚಟುವಟಿಕೆಯಿಂದ ಕೂಡಿದವಳಾಗಿ

ಚುರುಕಾಗಿ ನಡೆದುಕೊಂಡರೆ ಆಕೆಯ ಕೈಕೆಳಗಿರುವ ಕಾರ್ಯದರ್ಶಿ ಅವಳ ಮಾತನ್ನು ಕೇಳುತ್ತಾನೆ. ಅದಿಲ್ಲದೆ ಆ ಕಾರ್ಯದರ್ಶಿಯ ಮಾತನ್ನೇ ಈಕೆ ಕೇಳುವುದಾದರೆ ಆ ಕಾರ್ಯದರ್ಶಿ ತನಗೆ ಎಲ್ಲೆಲ್ಲಿಗೆ ಬೇಕೋ ಅಲ್ಲೆಲ್ಲಾ ರುಜು ಹಾಕಿಸಿಕೊಂಡು ಈಕೆಯ ಮುಖಕ್ಕೆ ಒರೆಸಿ ಆತ ಎಲ್ಲಾ ಅಧಿಕಾರವನ್ನು ಉಪಯೋಗಿಸಿಕೊಂಡು ದುಡ್ಡನ್ನು ಸ್ವಾಹ ಮಾಡುತ್ತಾನೆ. ಇಂಥಾದ್ದು ತಪ್ಪಬೇಕೆಂದರೆ, ಇವತ್ತು ಹಳ್ಳಿ-ಗಾಡಿಗೆ ನಮ್ಮ ಅಧಿಕಾರವನ್ನು ಏನು ಬಿಟ್ಟುಕೊಟ್ಟಿದ್ದೇವೆಂದು ಹೇಳುತ್ತಿದ್ದೇವೆ ಅದು ಸರಿಯಾಗಿ, ಸಮರ್ಪಕವಾಗಿ ಕೆಲಸ ಮಾಡಬೇಕಾದರೆ ಆ ಭಾಗದ ಶಾಸಕರು, ಮಂತ್ರಿಗಳು ಅಥವಾ ಅಲ್ಲಿ ಕೆಲಸ ಮಾಡುವಂಥ ಗ್ರಾಮ ಲೆಕ್ಕಿಗನಾಗಲಿ ಅಥವಾ ಕಾರ್ಯದರ್ಶಿಯಾಗಲಿ ಅವರು ಸಹೃದಯಗಳಾಗಿರ-ಬೇಕು. ಅದಕ್ಕೆ ನಾವು ಪ್ರೋತ್ಸಾಹ ನೀಡಬೇಕು. ಇಲ್ಲದಿದ್ದರೆ ಆ ಉದ್ದೇಶ ಸರ್ವನಾಶವಾಗುತ್ತದೆ. ಆ ಕಲ್ಪನೆ ಏನಿದೆ ಅದು ಸುಳ್ಳಾಗುತ್ತದೆ. ನಾವು ತಾಲ್ಲೂಕು ಪಂಚಾಯಿತಿಯ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ ಇವತ್ತು ಅಲ್ಲಿಗೆ ಒಬ್ಬ ಎಕ್ಸಿಕ್ಯುಟಿವ್ ಆಫೀಸರ್ ಎಂದು ಮಾಡಿ ಎಲ್ಲ ಅಧಿಕಾರವನ್ನೂ ಅಲ್ಲಿಗೆ ಕೊಟ್ಟಿದ್ದೇವೆ. ಅಲ್ಲಿಂದಲೇ ನಮಗೆ ಎಲ್ಲ ಪ್ರಸ್ತಾವನೆಗಳೂ ಬರಬೇಕೆಂಬ ಮಾತನ್ನು ಹೇಳಿದ್ದೀರಿ. ತಾವೂ ಕೂಡ ಜಿಲ್ಲಾ ಪರಿಷತ್ತಿನ ಸದಸ್ಯರಾಗಿ ಅನಂತರ ಶಾಸಕರಾಗಿರತಕ್ಕದ್ದು. ಸಹಜವಾಗಿ ಅಲ್ಲಿ ನಮಗಿಂತ ಚಿಕ್ಕವಯಸ್ಸಿನವರು ಇರುತ್ತಾರೆ, ಅವರಲ್ಲಿ ಒಂದು ಪ್ರೌಡ್‌ನೆಸ್ ಇರುತ್ತದೆ. ಪ್ರತಿಯೊಂದು ಕ್ಷೇತ್ರಕ್ಕೂ 10-10 ಮನೆಗಳನ್ನು ಹೇಳಿ, ಒಂದೊಂದು ಲಕ್ಷ ರೂಪಾಯಿಗಳ ಕೆಲಸದ ರಸ್ತೆಯನ್ನು ಹೇಳಿ ಎಂದರೆ, ಈ ರಸ್ತೆಯೇ ನನ್ನದು, ಈ ಮನೆಯೇ ನನ್ನದು, ಈ ದುಡ್ಡೇ ನನ್ನದು ಎನ್ನತಕ್ಕ ಭಾವ-ನೆಯನ್ನು ವ್ಯಕ್ತಪಡಿಸತಕ್ಕ ಅಂಶವನ್ನು ಸ್ಥಳೀಯ ತಾಲ್ಲೂಕು ಪಂಚಾಯಿತಿಗಳಲ್ಲಿ ನಾವು ನೋಡುತ್ತಿ-ದ್ದೇವೆ. ಅಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲವಾಗುವಂತಿರಬೇಕಾದರೆ ಸರ್ಕಾರದಿಂದ ಸರಿಯಾದ, ಸ್ಪಷ್ಟವಾದ ಸುತ್ತೋಲೆ ಇರಬೇಕು. ಆ ದುಡ್ಡನ್ನು ಹಂಚುವ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿಯಿಂದ ಏನು ಬರಬೇಕೆಂಬ ನಮ್ಮ ಕನಸು, ಮಹಾತ್ಮಾಗಾಂಧಿಯವರ ಕನಸು ಇದೆ, ಅದು ಸರಿಯಾಗಿರಬೇಕೆಂದರೆ ನಮ್ಮೆಲ್ಲರನ್ನೂ ಸರಿಯಾಗಿ ಸಮನ್ವಯ ಮಾಡಬೇಕು. ಮೊದಲು ಮಾನ್ಯ ನಜೀರ್‌ಸಾಬ್‌ರವರು ಮಾಡಿದಂಥ ವ್ಯವಸ್ಥೆಯಲ್ಲಿ ಯಾರೇ ಶಾಸಕರು ಇರಲಿ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ಜಿಲ್ಲಾ ಪಂಚಾಯಿತಿಯ ಮತ್ತು ಮಂಡಲ ಪಂಚಾಯಿತಿಯ ಪ್ರಧಾನ-ರೂ ಸೇರಿದಂತೆ ಸಮ್ಮಿಳಿತವಾಗಿ ಒಂದು ವ್ಯವಸ್ಥೆ ನಡೆಯುತ್ತಿತ್ತು. ಆದರೆ ಇವತ್ತು ಆ ವ್ಯವಸ್ಥೆ ಬದ-ಲಾಗಿದೆ. ಅದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಅದು ಸಮರ್ಪಕವಾಗಿ ನಡೆಯ-ಬೇಕೆಂದರೆ ನಮಗೆ ಸರ್ಕಾರದಿಂದ ಸರಿಯಾದ ನಿರ್ದೇಶನ, ಸುತ್ತೋಲೆ ಹೋಗಬೇಕೆಂಬ ಮಾತನ್ನು ಹೇಳಬಯಸುತ್ತೇನೆ. ಇವತ್ತು ತಮಗೆ ಗೊತ್ತಿರುವಂತೆ ಎಷ್ಟೋ ಕಡೆಗಳಲ್ಲಿ ತಾಲ್ಲೂಕು ಪಂಚಾಯಿತಿಯ ಎಕ್ಸಿಕ್ಯುಟಿವ್ ಆಫೀಸರ್‌ರವರು ಅಂದರೆ ಬಹುಶಃ ಅಸಿಸ್ಟೆಂಟ್ ಕಮಿಷನರ್‌ರವರ ಕೇಡರ್‌ನ ವ್ಯಕ್ತಿ-ಗಳನ್ನು ಬಿ.ಡಿ.ಓ. ಕಛೇರಿಯಲ್ಲಿ ನೇಮಿಸಿದ್ದೇವೆ. ಯಾರೋ ಒಬ್ಬ ಬೆಸ್ತರ ಕುಟುಂಬದವರ ಹುಡುಗ-ನನ್ನೋ ಅಥವಾ ಬೇರೆ ಜಾತಿಯವರನ್ನೋ ಅಲ್ಲಿಗೆ ಅಧ್ಯಕ್ಷನನ್ನಾಗಿ ಮಾಡಿದ್ದೇವೆ. ಅವನು ವಿದ್ಯಾ-ವಂತನಾಗಿ, ಚುರುಕಾಗಿದ್ದರೆ ಮಾತ್ರ ಆ ಎಕ್ಸಿಕ್ಯುಟಿವ್ ಆಫೀಸರ್ ಆದವನು ಅವನ ಮಾತನ್ನು ಕೇಳು-

ತ್ತಾನೆ, ಕೆಲಸವನ್ನು ಸಮರ್ಪಕವಾಗಿ ಮಾಡುತ್ತಾನೆ. ಇಲ್ಲದೇ ಹೋದರೆ ಈ ಎಕ್ಸಿಕ್ಯುಟಿವ್ ಆಫೀಸರ್-ಯಾರಿದ್ದಾನೆ ಇವನು ಆತನಿಗೆ ರಾತ್ರಿ 12 ಗಂಟೆ ಆದರೂ ಅವನನ್ನು ಮನೆಗೆ ಕರೆದುಕೊಂಡು ಹೋಗಿ ಬಿಟ್ಟುಬರುವುದಕ್ಕೆ ಒಂದು ಜೀಪನ್ನೂ ಕಳುಹಿಸುವುದಿಲ್ಲ. ಈ. ವ್ಯವಸ್ಥೆ ಸರಿಯಾಗಿ ನಡೆಯಬೇಕೆಂದರೆ, ಇದರ ಮೇಲ್ವಿಚಾರಣೆಯನ್ನು ಶಾಸಕರು ಮತ್ತು ಮಂತ್ರಿಗಳಾದವರು ಗಮನಿಸಬೇಕು. ಇಲ್ಲದಿದ್ದರೆ ಅದು ಸರಿಯಾಗಿ ನಡೆಯುವುದಿಲ್ಲ.

ಇನ್ನು ಜಿಲ್ಲಾ ಪಂಚಾಯಿತಿಯ ವ್ಯವಸ್ಥೆ ಬಗ್ಗೆ ಹೇಳುವುದಾದರೆ, ಇದಕ್ಕೆ ಒಂದು ಕಾಲಾವಧಿ-ಯನ್ನು ನಿಗದಿ ಮಾಡುತ್ತೇವೆಂದು ಏನು ಹೇಳುತ್ತೀರಿ ಅದು ಖಂಡಿತ ಆಗಬೇಕು. ಇದರ ಕಾಲಾವಧಿ-ಯನ್ನು 20 ತಿಂಗಳು ಎಂದು ಮಾಡಿ ಜಾರಿಗೆ ತರಬೇಕು. ಈ ಸರ್ಕಾರದಲ್ಲಿ ಬಹಳ ಮುಖ್ಯವಾಗಿ ಮಾಡಬೇಕಾದ ಕೆಲಸ ಬಹಳ ಇದೆ. ಯಾರೇ ಒಬ್ಬರು ಮಂತ್ರಿಗಳು ಒಂದು ಇಲಾಖೆಯ ಹೊಣೆ-ಯನ್ನು ಹೊತ್ತಾಗ ಆ ಹೊಣೆಯನ್ನು ನಿರ್ವಹಿಸುವ ಸಂದರ್ಭದಲ್ಲಿ ಜಿಲ್ಲಾ ಕೇಂದ್ರದಲ್ಲಿ ಸಭೆಯನ್ನು ಕರೆಯುವುದು ಅಥವಾ ಹಳ್ಳಿಗಾಡಿನಲ್ಲಿ ಸ್ವತಃ ಸುತ್ತಾಡದೇ ಹೋದರೆ ಯಾವ ಯಾವ ಇಲಾಖೆಗೆ ಯಾವ ಯಾವ ಬಾಬಿಗೆ ಹಣವನ್ನು ಕೊಡಬೇಕೆಂಬ ಅಂಶವನ್ನು ಜನರ ಮಧ್ಯೆ ನಾವು ನಿಂತು ನೋಡಬೇಕು. ಅದನ್ನು ಬಿಟ್ಟು ಈ ಬೆಂಗಳೂರಿನಲ್ಲಿ ಕುಳಿತು ಎಷ್ಟೇ ಚರ್ಚೆಯನ್ನು ಮಾಡಿದರೂ ಅದು ವಿಫಲವಾಗುತ್ತದೆಂದು ನನ್ನ ಅನಿಸಿಕೆ. ಇವತ್ತು ನಾವು ವಿದ್ಯುಚ್ಛಕ್ತಿ ಮಂಡಳಿಯನ್ನು ಅಭಿವೃದ್ಧಿಪಡಿಸ-ಬೇಕೆಂದಿದ್ದೇವೆ. ನೀರಾವರಿ ಇಲಾಖೆಗೆ ಕೋಟ್ಯಾಂತರ ರೂಪಾಯಿಗಳನ್ನು ಮಾರ್ಚಿಯಲ್ಲಿ ಕೊಟ್ಟು ಅಥವಾ ಕೃಷ್ಣಾ ಭಾಗ್ಯ ಜಲನಿಗಮಕ್ಕೆ ಇಲ್ಲವೇ ಇನ್ನಾವುದೇ ಜಲ ವಿದ್ಯುತ್ ಯೋಜನೆಗೆ ನೂರು ಕೋಟಿ ರೂಪಾಯಿ ಖರ್ಚುಮಾಡಿದ್ದೇವೆ, ಅದು ಫಲಪ್ರದವಾಯಿತು ಎಂದು ನೀವು ಹೇಳಿದರೆ ಅದನ್ನು ನಾವು ಒಪ್ಪುವಂತಿಲ್ಲ. ತಮಗೆ ಗೊತ್ತಿರುವಂತೆ, ಹಲವಾರು ಆಧುನಿಕ ಯಂತ್ರೋಪಕರಣಗಳು ಬಂದಿವೆ. ಇದು ಬರದೇ ಇದ್ದಿದ್ದರೆ ಇವತ್ತು ತುಮಕೂರಿಗೆ ನೀರನ್ನು ಕೊಡುವ ಕಾರ್ಯಕ್ರಮವಾಗಲಿ, ಕೃಷ್ಣಾ ಜಲಾನಯನ ಪ್ರದೇಶದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಕಾಲುವೆಯನ್ನು ತೋಡಿಸುವುದಾಗಲಿ, ಇಲ್ಲವೇ ಯಾವುದಾದರೂ ವಿದ್ಯುತ್ ಯೋಜನೆಯನ್ನು ಸಂಪೂರ್ಣ ಮಾಡುವುದಕ್ಕೆ ಆಗುತ್ತಿರಲಿಲ್ಲ. ಈ ಕೆಲಸವನ್ನು ಮಾಡಲು ಅತ್ಯುಪಯುಕ್ತ ಆಧುನಿಕ ಯಂತ್ರೋಪಕರಣಗಳು ಇವತ್ತು ಬಂದಿವೆ. ಒಂದು ಉದಾಹರಣೆಯನ್ನು ಹೇಳುವುದಾದರೆ, ಒಬ್ಬರು ಕೃಷಿ ಮಂತ್ರಿಯಾದವರು ಇರಿಗೇಷನ್ ಕೆನಾಲ್‌ಮೆಂಟ್ ತಮ್ಮ ಇಲಾಖೆಯ ಕಾರನ್ನೋ ಅಥವಾ ಜೀಪನ್ನೋ ತೆಗೆದುಕೊಂಡು ಮೇಲ್ವಿ-ಚಾರಣೆಯನ್ನು ನೋಡುತ್ತಾ ಹೋಗಿಬಂದರೆ ಸುಮಾರು 50 ಲಕ್ಷದಿಂದ ಒಂದು ಕೋಟಿ ರೂಪಾ-ಯಿವರೆಗೂ ಹಣ ಉಳಿಯುತ್ತದೆ. ಒಂದು ವೇಳೆ ನಾವು ಆಕಡೆ ನೋಡದೇ ಹೋದರೆ ಕೊಟ್ಟಂಥ ಹಣ ಸದುಪಯೋಗವಾಗುವುದಿಲ್ಲ. ಸಾಮಾನ್ಯವಾಗಿ ಎಲ್ಲರೂ ಈ ದೇಶದ, ರಾಜ್ಯದ ಹಣವನ್ನು ಯಾವ ರೀತಿ ಖರ್ಚುಮಾಡಬೇಕೆಂದು ಯೋಚಿಸುತ್ತಾರೆಯೇ ಹೊರತು, ನಾವು ಕೊಟ್ಟಿರತಕ್ಕಂಥ ಹಣ ಎಷ್ಟರಮಟ್ಟಿಗೆ ಸಾರ್ಥಕವಾಗಿದೆ ಎಂಬುದನ್ನು ನೋಡುವಂಥ ಜನರು ನಮ್ಮಲ್ಲಿಲ್ಲ. ಕೆಲಸದ ಗುಣಮಟ್ಟವನ್ನು ಅಳೆಯುವಂಥ ಕ್ವಾಲಿಟಿ ಕಂಟ್ರೋಲ್ ವ್ಯವಸ್ಥೆ ಎಲ್ಲಿದೆ, ವಿಜಿಲೆನ್ಸ್ ಎಲ್ಲಿದೆ ಎಂಬುದು

ನಮಗೆ ಗೊತ್ತಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತಿತರ ಮಾನ್ಯ ಸದಸ್ಯರು ಮಾತನಾಡುತ್ತಾ ಐ.ಎ.ಎಸ್. ಅಧಿಕಾರಿಗಳ ತಂಡ ಜಾಸ್ತಿಯಾಯಿತು, ಇವರು ಬಿಳಿ ಆನೆಗಳು ಎಂದು. ನಿಜ; ಇದು ಜಾಸ್ತಿಯಾದಷ್ಟೂ ಈ ದೇಶಕ್ಕೆ ಹೊರೆ. ಒಂದು ವೇಳೆ ಇದು ಇದ್ದರೂ ಕೂಡ ಕೇವಲ ಈ ಬೆಂಗಳೂ-ರಿನಲ್ಲೇ ಕೇಂದ್ರೀಕೃತವಾಗಬಾರದು. ಹಳ್ಳಿಗಾಡಿನಲ್ಲಿ ಆಗುವಂಥ ಕೆಲಸವನ್ನು ಯಾರೋ ಒಬ್ಬ ಅಧಿಕಾರಿ ನೋಡುತ್ತಾನೆಂದರೆ ಆ ಕೆಲಸ ಸಮರ್ಪಕವಾಗಿ ಆಗುವುದಿಲ್ಲ. ಆ ಅಧಿಕಾರಿಗಳ ಜೊತೆಯಲ್ಲಿ ಪ್ರತಿ-ಯೊಬ್ಬ ಮಂತ್ರಿ, ಶಾಸಕರು ಹೋಗಿ ನೋಡಬೇಕು. ಇವತ್ತು ಏನಾಗಿದೆ ಎಂದರೆ, ಯಾರೇ ಒಬ್ಬ ಅಧಿಕಾರಿಯಾಗಲಿ, ಕಂಟ್ರ್ಯಾಕ್ಟರ್ ಆಗಲಿ, ವ್ಯಾಪಾರಸ್ಥ ಆಗಲಿ, ಈ ಮಂತ್ರಿ ಹೇಗೆ? ಈ ಶಾಸಕ ಹೇಗೆ? ಎಂದು ನೋಡುತ್ತಾರೆ. ಆಕಸ್ಮಾತ್ ಮಾಮೂಲಿ ಕೊಡುವಂಥ 25 ಸಾವಿರ ರೂಪಾಯಿಗಳಿಗೆ ನಾನು ಹೊಂದಿಕೊಂಡರೆ, ನನ್ನ ತಾಲ್ಲೂಕಿನಲ್ಲಿ ಮಾಮೂಲಿ ಕೊಟ್ಟು ಅವರಿಗೆ ಹೇಗೆ ಬೇಕೋ ಹಾಗೆ ಅವರು ಲೂಟಿಮಾಡಿಕೊಂಡು ಹೋಗುತ್ತಾರೆ. ಯಾರೇ ಒಬ್ಬ ಮಂತ್ರಿ ತನ್ನ ಅಧೀನದಲ್ಲಿ ಬರುವಂಥ ವ್ಯವಸ್ಥೆಯನ್ನು ಹದ್ದಿನ ಕಣ್ಣಿನಿಂದ ನೋಡುತ್ತಾನೆಂದರೆ ಆ ಅಧಿಕಾರಿಗಳೂ ಅಷ್ಟೇ ಹೆದರಿಕೊಂಡು ನಿಮ್ಮ ಕೆಲಸ ಕಾರ್ಯಗಳಲ್ಲಿ ಅನುವಾಗಿ, ಸರ್ಕಾರಕ್ಕೆ ಶ್ರೇಯಸ್ಸನ್ನು ತರುವ ಕೆಲಸವನ್ನು ಮಾಡುವಂಥ ಅಧಿಕಾರಿಗಳು ಈ ರಾಜ್ಯದಲ್ಲಿ ಇನ್ನೂ ಸಾಕಷ್ಟು ಜನರಿದ್ದಾರೆ. ಅಂಥ ಒಳ್ಳೆಯ ಚಾಕಚಕ್ಯತೆಯುಳ್ಳಂಥ ಅಧಿಕಾರಿಗಳನ್ನು ನೀವು ಗುರ್ತಿಸಿ ಅವರಿಗೆ ಪ್ರಾಮುಖ್ಯತೆಯನ್ನು ನೀಡಿ ಕೆಲಸ ನಿರ್ವಹಿಸುವುದಕ್ಕೆ ಜವಾಬ್ದಾರಿಯನ್ನು ಕೊಟ್ಟರೆ ಖಂಡಿತವಾಗಿಯೂ ಈ ಸರ್ಕಾರಕ್ಕೆ, ಶಾಸಕರಿಗೆ, ಮಂತ್ರಿಗಳಿಗೆ ಗೌರವ-ವನ್ನು ತರುವಂಥ ಕೆಲಸ ಮಾಡುತ್ತಾರೆ. ಅಂಥ ಅಧಿಕಾರಿಗಳನ್ನು ಪತ್ತೆಹಚ್ಚಿ ಕೆಲಸ ಮಾಡಿಸಬೇಕೆಂದು ಹೇಳಬಯಸುತ್ತೇನೆ.

ಇವತ್ತು ಸದನದ ಮುಂದೆ ಮಂಡಿಸಿರತಕ್ಕ 19 ಬೇಡಿಕೆಗಳ ಪೈಕಿ ವಿಧಾನ ಮಂಡಲಕ್ಕೆ ಸಂಬಂಧ ಪಟ್ಟಂತೆ ಕೂಡ ಒಂದು ಬೇಡಿಕೆ ಇದೆ. ಇದರ ಬಗ್ಗೆ ನನ್ನ ಅಭಿಪ್ರಾಯವನ್ನು ಹೇಳುವುದಾದರೆ, ಹಿಂದೆ ನಾವು ಚಿಕ್ಕ ಹುಡುಗರಾಗಿದ್ದಾಗ ಈ ಶಾಸನ ಸಭೆಯಲ್ಲಿ ಮಾನ್ಯ ಸದಸ್ಯರಾದ ಶಿವಪ್ಪನವರೋ, ಮಾನ್ಯ ವಾಟಾಳ್ ನಾಗರಾಜ್‌ರವರೋ ಅಥವಾ ಬೇರೆ ಯಾರೋ ಮಾತನಾಡುವುದನ್ನು ನೋಡುತ್ತಿದ್ದೆವು. ನಾವು ಹೈಸ್ಕೂಲ್‌ನ ವಿದ್ಯಾರ್ಥಿಗಳಾಗಿದ್ದಾಗ ಆಡಳಿತ ಪಕ್ಷದವರು ಏನು ಹೇಳುತ್ತಾರೆಂಬುದನ್ನು ನೋಡುವುದಕ್ಕಿಂತ ವಿರೋಧಪಕ್ಷದವರು ಚಾವಟಿಯನ್ನು ತೆಗೆದುಕೊಂಡು ಹೇಗೆ ಬಾರಿಸುತ್ತಾರೆ ಎಂಬುದನ್ನೇ ನಾವು ದಿನಬೆಳಗಾದರೆ ಪತ್ರಿಕೆಗಳಲ್ಲಿ ನೋಡುತ್ತಿದ್ದುದು. ಅದು ನಡೆಯಬೇಕು. ಅದು ನಡೆಯಬೇಕಾದರೆ ಅದರ ಹಿಂದಿರತಕ್ಕ ಶಾಸಕರಾದ ನಮ್ಮನ್ನು ಗೌರಿ ಹಬ್ಬದ ಗಣೇಶನ ರೀತಿಯಲ್ಲಿ 48 ದಿನಗಳ ಕಾಲ ಹಿಂದಿನ ಸೀಟುಗಳಲ್ಲಿ ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳುವುದಾದರೆ ನಮಗೆ ಯಾವುದೇ ರೀತಿಯ ಚಲನವಲನ ಇಲ್ಲದೆ ಬಹಳ ಕಷ್ಟವಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಹಿಂದಿನ ಸಾಲುಗಳಲ್ಲಿ ಕುಳಿತಿರತಕ್ಕ ಯಾವುದೇ ಪಕ್ಷದ ಶಾಸಕರಾಗಲಿ, ಹೊಸ ಸದಸ್ಯರಾಗಲಿ ಈ ವಿಧಾನಮಂಡಲ ಕಾರ್ಯಕಲಾಪಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳಲು ಅವಕಾಶವನ್ನು ಕಲ್ಪಿಸಿಕೊಡ-ಬೇಕು, ಅವರ ತಪ್ಪುಗಳನ್ನು ತಿದ್ದಿಕೊಳ್ಳಲು ಹಿರಿಯರಾದ ತಮ್ಮಿಂದ ಅವರಿಗೆ ಮಾರ್ಗದರ್ಶನ ಸಿಕ್ಕು-

ವಂತೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು ಇವತ್ತು ಸಭೆಯ ಮುಂದಿರುವ 19 ಬೇಡಿಕೆ-ಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ಇನ್ನು ಹೆಚ್ಚು ಸಮಯವನ್ನು ತೆಗೆದುಕೊಳ್ಳದೆ ತಮ್ಮೆಲ್ಲರಿಗೂ ನಮಸ್ಕಾರ ಮಾಡಿ ನನ್ನ ಮಾತನ್ನು ಮುಗಿಸು-ತ್ತೇನೆ.

+ ಶ್ರೀ ಎಸ್. ಕೃಷ್ಣಪ್ಪ (ಬನ್ನೂರು):- ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಮಂಡಿಸಿರತಕ್ಕ 1996-97ನೇ ಸಾಲಿನ ಅನುದಾನ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವಂತಹ ಸಂದ-ರ್ಭದಲ್ಲಿ ನಾವು ನಮ್ಮ ಚುನಾವಣಾ ಪ್ರಣಾಳಿಕೆಗಳಲ್ಲಿ ಕೆಲವನ್ನು ಸಾರ್ವಜನಿಕರಿಗೆ ಹೇಳಿ ಬಂದಿದ್ದೇವೆ; ಅದರಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ವಿದ್ಯಾವಂತರಿಗೆ ಕೆಲಸದಲ್ಲಾಗಲಿ, ಶಾಲೆಗಳ ಪ್ರವೇಶ-ದಲ್ಲಾಗಲಿ ನಾವು ಶೇಕಡ 70 ಭಾಗ ಕೆಲಸ ಕೊಡುತ್ತೇವೆಂಬ ಆಶ್ವಾಸನೆಯನ್ನು ಕೊಟ್ಟು ಬಂದಿದ್ದೇವೆ. ನಾನಾದರೂ ಹೇಳುವುದೇನೆಂದರೆ ಸರ್ಕಾರ ಬಂದು ಒಂದು ವರ್ಷದ ಮೇಲೆ 7 ತಿಂಗಳಾದರೂ ಕೂಡ ಅದರ ಮೇಲೆ ಪರಿಪೂರ್ಣವಾಗಿ ಗಮನ ಹರಿಸಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಕೆಲಸ ಕೊಡುವುದು ಇರಲಿ, ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಮಕ್ಕಳು ಸರ್ಕಾರಿ ಕಾಲೇಜು-ಗಳಲ್ಲಿ ಅರ್ಜಿ ಹಾಕಿಕೊಂಡರೆ ನಮ್ಮ ಮಕ್ಕಳಿಗೆ ಅಲ್ಲಿ ಸೀಟಿಲ್ಲ. ಕಾರಣ, ಪಟ್ಟಣದಲ್ಲಿ ಓದಿದಂತ ಮಕ್ಕಳು ಕಾಲೇಜಿಗೆ ಅರ್ಜಿ ಹಾಕಿಕೊಂಡಾಗ ನಮ್ಮಲ್ಲಿರತಕ್ಕ ಪರ್ಸೆಂಟೇಜ್ ಬಹಳ ಕಡಿಮೆ. ಆದು-ದರಿಂದ ಇವತ್ತಿನ ದಿವಸ ಹಳ್ಳಿಗಾಡಿನಲ್ಲಿ ಓದುವುದಕ್ಕೆ ಉಪಾಧ್ಯಾಯರು ಇಲ್ಲ, ವ್ಯವಸ್ಥೆ ಸರಿ ಇಲ್ಲ. ಪಟ್ಟಣದಲ್ಲಿ ಅಷ್ಟೋ ಇಷ್ಟೋ ಓದಿ ಕಾಲೇಜಿಗೆ ಹೋದರೆ ಅಲ್ಲಿ ಸೀಟು ತೆಗೆದುಕೊಳ್ಳುವುದ-ಕ್ಕಾಗುವುದಿಲ್ಲ. ನಾವು ಇನ್ನು ಖಾಸಗಿ ಶಾಲೆಗಳಿಗೆ ಹೋದರೆ ನಮಗೆ ಬರತಕ್ಕ ಅಂಕಗಳು 35-40-50 ಪರ್ಸೆಂಟ್ ಬಂದಿರುತ್ತದೆ. ಒಳ್ಳೆಯ ಶಾಲಾ ಕಾಲೇಜಿಗೆ ಹೋಗಬೇಕೆಂದರೆ 5-10 ಸಾವಿರ ಡೊನೇಷನ್ ಕೊಡಿ ಎನ್ನುತ್ತಾರೆ. ಈಗಾಗಲೇ ಮಾನ್ಯ ವಿದ್ಯಾ ಮಂತ್ರಿಗಳು ಬಹಳಷ್ಟು ಟೀಚರ್ಸ ಪೋಸ್ಟ್ ಮಾಡಿ ಶಾಲೆ ಸುವ್ಯವಸ್ಥಿತವಾಗುವಂತೆ ಅಲ್ಲಿನ ವ್ಯವಸ್ಥೆಯನ್ನು ಸರಿಪಡಿಸುವುದಕ್ಕೆ ಬಹಳ ಶ್ರಮಿಸುತ್ತಿದ್ದಾರೆ; ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಅದೆಲ್ಲ ವ್ಯವಸ್ಥೆಯಾಗುವವರೆಗೆ ಕಾಲೇ-ಜುಗಳಲ್ಲಿ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸುಲಭವಾಗಿ ಸೀಟು ಸಿಗಬೇಕಾದರೆ ಅದಕ್ಕೆ ಇಷ್ಟು ಪರ್ಸೆಂಟೇಜ್ ಎಂದು ಗೊತ್ತು ಮಾಡಬೇಕು. ನಾವು ಏನು ಇವತ್ತು 5 ಪರ್ಸೆಂಟ್ ಎಂದು ಕೆಲಸದಲ್ಲಿ ಕೊಡುತ್ತೇವೆ ಆ ರೀತಿ ಕನಿಷ್ಟ ಅಂದರೆ 20-25 ಪರ್ಸೆಂಟ್ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಯಾಡ್ ಮಾಡಿ ಕಾಲೇಜುಗಳಲ್ಲಿ ಸೀಟು ಕೊಡುವ ವ್ಯವಸ್ಥೆ ಆಗಬೇಕೆಂಬುದು ಒಂದು. ಕಳೆದ ಸಾರಿ ತಾವು 9 ಸಾವಿರ ಉಪಾಧ್ಯಾಯರುಗಳನ್ನು ನೇಮಿಸಿಕೊಂಡಿರಿ. ಈ ಸಾರಿ 13 ಸಾವಿರ ಉಪಾಧ್ಯಾಯರನ್ನು ನೇಮಿಸಿಕೊಳ್ಳುತ್ತೇವೆಂದು ಹೇಳಿದ್ದೀರಿ. ಯಾವ ರೀತಿ ನೇಮಕಗಳನ್ನು ಮಾಡಿಕೊಳ್ಳುತ್ತಿದ್ದೀರಿ? ಅಲ್ಲಿ ಮೆರಿಟ್ ಮೇಲೆ ಕೊಡುತ್ತಿದ್ದೀರಿ. ಮೆರಿಟ್ ಮೇಲೆ ಕೊಡುತ್ತಿರುವ ಸಂದರ್ಭದಲ್ಲಿ ತಾವು ಒಂದು ಯೋಚನೆ ಮಾಡಬೇಕಾಗುತ್ತದೆ. ಯಾರಿಗೆ ಎಷ್ಟು ಕೆಲಸ ಸಿಕ್ಕಿದೆ ಎಂಬುದನ್ನು ತಾವು ತರಿಸಿ-

ನೋಡಿ, ಒಂದು ಮಾಹಿತಿ ಪಡೆಯಿರಿ. ಕಳೆದ ಸಾರಿ 9 ಸಾವಿರ ಉಪಾಧ್ಯಾಯರಿಗೆ ಕೆಲಸ ಕೊಟ್ಟ ಸಂದರ್ಭದಲ್ಲಿ ಹೆಚ್ಚಾಗಿ ನೂರಕ್ಕೆ 80 ಭಾಗ ಪಟ್ಟಣ ವಾಸಿಗಳ ಮಕ್ಕಳಿಗೆ ಹೋಗಿದೆ. ಕೇವಲ 5 ಪರ್ಸೆಂಟ್ ಗ್ರೇಸ್‌ನಲ್ಲಿ ತಾವು ಕೊಡುತ್ತೀರಿ. ಆದರೆ ನೀವು 70 ಪರ್ಸೆಂಟ್ ಹೇಗೆ ಕೊಟ್ಟ ಹಾಗೆ ಆಯಿತು? ಆದುದರಿಂದ ಇದು ಒಂದು ವಂಚನೆ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ವಂಚನೆ ಆದ ಹಾಗೆ ಆಗುತ್ತಿದೆ. ಕೆಲಸ ಕೊಡುವುದರಲ್ಲಿ ತಾವು ಏನು ಗ್ರೇಸ್ ಮಾರ್ಕ್ಸ್ ಕೊಡುತ್ತೀರಿ ಅದನ್ನು ಕನಿಷ್ಠ 20-25 ಪರ್ಸೆಂಟ್ ಕೊಟ್ಟು ನಮಗೆ 70 ಪರ್ಸೆಂಟ್ ಮಾರ್ಕ್ಸ್ ಬರುವಂಥ ವ್ಯವಸ್ಥೆ ಆಗಬೇಕು. ಇವತ್ತಿನ ದಿವಸ, ಕೆ.ಪಿ.ಎಸ್.ಸಿ.ಯಲ್ಲಿ ಸೆಲೆಕ್ಷನ್ ನಡೆಯುತ್ತಿದೆ. ಅಲ್ಲಿ ಏನಾಗುತ್ತಿದೆ? ಕೆ.ಪಿ.ಎಸ್.ಸಿ.-ಯಲ್ಲಿ ಕೂಡ ಇವತ್ತು ಗ್ರಾಮೀಣ ಪ್ರದೇಶದಿಂದ ಬಂದಂತಹ ವಿದ್ಯಾವಂತರಿಗೆ ಕೆಲಸ ಸಿಗುತ್ತಿಲ್ಲ. ಹಾಗಾದರೆ ಅಲ್ಲಿಗೆ ಏನು ಕೊಟ್ಟ ಹಾಗೆ ಆಯಿತು? ಅಲ್ಲಿ ಕೂಡ ತಾವು ಸಾರ್ವಜನಿಕರಿಗೆ ಆಶ್ವಾಸನೆ ಕೊಟ್ಟಿದ್ದೀರಿ. ಆ ಆಶ್ವಾಸನೆ ಪರಿಪೂರ್ಣವಾಗಬೇಕಾದರೆ ಕೆ.ಪಿ.ಎಸ್.ಸಿ.ಯಲ್ಲಿ 70 ಪರ್ಸೆಂಟ್ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೆಲಸ ಸಿಗುವ ರೀತಿಯಲ್ಲಿ ಯಾವುದಾದರೂ ವ್ಯವಸ್ಥೆ ಮಾಡಿ, ಗ್ರೇಸ್ ಮಾರ್ಕ್ಸ್ ಕೊಡಿ, ಇಲ್ಲವೇ, ರೆಕ್ರೂಟ್‌ಮೆಂಟಿನಲ್ಲಿ ಹೆಚ್ಚಿಗೆ ನಂಬರ್ ಕೊಡುವಂಥ ವ್ಯವಸ್ಥೆ ಮಾಡಿ. ನಾನು ಇದೇ ತರಹ ವ್ಯವಸ್ಥೆ ಮಾಡಿ ಎಂದು ಹೇಳುವುದಿಲ್ಲ. ಆದರೆ ತಾವು ಏನು ಆಶ್ವಾಸನೆ ಜನತೆಗೆ ಕೊಟ್ಟಿದ್ದೀರಿ ಅದನ್ನು ಪರಿಪೂರ್ಣ ಮಾಡಬೇಕಾದರೆ ಗ್ರಾಮೀಣ ಪ್ರದೇಶದಲ್ಲಿ ಓದಿದಂತಹ ಮಕ್ಕಳಿಗೆ ಪರಿಪೂರ್ಣವಾಗಿ ಕೆಲಸ ಮತ್ತು ಕಾಲೇಜುಗಳಲ್ಲಿ ಮುಕ್ತವಾದ ಅವಕಾಶ ಸಿಗುವಂತಹ ವ್ಯವಸ್ಥೆ ಮಾಡಿ-ಕೊಡಬೇಕೆಂದು ನಾನು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ನಮ್ಮ ಸರ್ಕಾರ ಬಂದ ಮೇಲೆ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಮುಫತ್ತಾಗಿ ನಿವೇಶನಗಳನ್ನು ಹಂಚುತ್ತೇವೆಂಬ ಮಾತನ್ನು ನಾವು ಹೇಳಿದ್ದೇವೆ. ಅದು ಹೇಗೆತಾನೆ ಹಂಚುವುದಕ್ಕೆ ಸಾಧ್ಯ? ನಾವು ಒಂದು ಲೆಕ್ಕ ಹಾಕೋಣ. ತಾವು ಹಂಚಿರಬಹುದು, ಎಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಜಮೀನು ಇದೆಯೋ ಅಥವಾ ಎಲ್ಲಿ ಹೆಚ್ಚಿಗೆ ಜಮೀನು ಪಕ್ಕದಲ್ಲಿ ಇದ್ದರೆ ಅಂಥವನ ಜಮೀನು ಅಕ್ವೈರ್ ಮಾಡಿಕೊಂಡು ತಾವು ಹಂಚಿದ್ದೀರಿ. ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಪಟ್ಟಣ ಪ್ರದೇಶದಲ್ಲಿ ಎಷ್ಟು ಹಂಚಿದ್ದೀರೆಂಬ ಮಾಹಿತಿ ನಿಮ್ಮಲ್ಲಿ ಇಲ್ಲ. ಸ್ವಲ್ಪ ಯೋಚನೆ ಮಾಡಿ. ನನ್ನದೇ ಆದ ಒಂದು ಪುರಸಭೆ, ಆ ಪುರಸಭೆ ಹುಟ್ಟಿದಲಾಗಾಯ್ತು ಒಂದು ಸೈಟು ಹಂಚಿಲ್ಲ. ಅದಕ್ಕೆ ಕಾರಣವೇನು? ತಾವು ದುಡ್ಡು ಕೊಡುತ್ತೀರಿ ಅಕ್ವಿಸಿಷನ್ ಮಾಡಿಕೊಳ್ಳಬೇಕು ಅಥವಾ ಜಿಲ್ಲಾ-ಧಿಕಾರಿಗಳಿಗೆ ಹೇಳಿ ಮುಫತ್ತಾಗಿ ಕೊಡಿ, ನೀವೇ ಮಾರುಕಟ್ಟೆ ಬೆಲೆಗೆ ಖರೀದಿ ಮಾಡಿ ಎಂದು ಹೇಳು-ತ್ತೀರಿ. ಇವತ್ತು ಮಾರುಕಟ್ಟೆಯ ಬೆಲೆ ಏನು? ನೀವು ಒಂದು ನಿಗದಿಯಾದ ಅಮೌಂಟ್ ಹಾಕಿದ್ದೀರಿ. ನೀವು ಒಂದು ಪುರಸಭೆ ವ್ಯಾಪ್ತಿಯಲ್ಲಿ ಒಂದು ಎಕರೆಗೆ 50 ಸಾವಿರ ರೂಪಾಯಿಗೆ ಪರ್ಚೇಸ್ ಮಾಡಬೇಕೆಂದು ಹೇಳುತ್ತೀರಿ. ಅಲ್ಲಿ ಒಂದು ಲಕ್ಷ ಆಗಿರುತ್ತದೆ. ಆಮೇಲೆ ನೀವು ಅನೌನ್ಸ್ ಮಾಡು-ತ್ತೀರಿ ಒಂದು ಲಕ್ಷ ಮಾಡಿದ್ದೇವೆ ಎಂದು, ಮತ್ತೆ ಅಲ್ಲಿ ಎರಡು ಲಕ್ಷ ಆಗಿರುತ್ತದೆ. ತಾವು ಈ ಬಗ್ಗೆ ಒಂದು ಮಾಹಿತಿಯನ್ನು ಪುರಸಭೆಯ ವ್ಯಾಪ್ತಿಯಲ್ಲಿ ತೆಗೆದುಕೊಂಡು ನೋಡಬೇಕಾಗುತ್ತದೆ. ಅದಕ್ಕೆ

ತಾವು ಏನಾದರೂ ಮಾಡಿ ನಮಗೆ ಪುರಸಭೆಗಳಿಗೆ ಪಟ್ಟಣದಲ್ಲಿರತಕ್ಕವರಿಗೆ ಸೈಟನ್ನು ಹಂಚುವ ವ್ಯವಸ್ಥೆಯಲ್ಲಿ ಸರ್ಕಾರ ಬಹಳ ಧಾರಾಳವಾಗಿರಬೇಕಾಗುತ್ತದೆ. ಮಾರುಕಟ್ಟೆ ಬೆಲೆಯಲ್ಲಿ ಜನಗಳಿಗೆ ಹಣಕೊಟ್ಟು ಅವರಿಂದ ಜಮೀನು ಪಡೆದು ಹಂಚುವ ವ್ಯವಸ್ಥೆ ಆಗಬೇಕಾಗುತ್ತದೆ. ನಿಜವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಥವಾ ಪುರಸಭೆಗಳಲ್ಲಿ ಅಥವಾ ಪಟ್ಟಣ ಪ್ರದೇಶಗಳಲ್ಲಿ ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತಿದೆ. ಆದುದರಿಂದ ಅದನ್ನು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಅದರ ಜೊತೆಗೆ ಪುರಸಭೆಗಳಿಗೆ ಹೋಗಿ ತಾವು ಅಕ್ವಿಸಿಷನ್ ಮಾಡಿಕೊಂಡು ನಾವು ಸೈಟನ್ನು ಹಂಚು-ತ್ತೇವೆಂದರೆ ತಮ್ಮ ಕೈಯಲ್ಲಿ ಹಂಚುವುದಕ್ಕಾಗುತ್ತಿಲ್ಲ. ಏಕೆಂದರೆ, ಅಕ್ವಿಸಿಷನ್ ಮಾಡುವಷ್ಟು ದುಡ್ಡು ಪುರಸಭೆಯಲ್ಲಿ ಇಲ್ಲ. ಹಣಕಾಸಿನಲ್ಲಿ ಬಹಳ ಹಿಂದೆ ಇವೆ. ಅದಕ್ಕಾಗಿ ಸರ್ಕಾರ ಒಂದು ವ್ಯವಸ್ಥೆ ಮಾಡಿ ಯಾರು ಹಣ ಕೊಟ್ಟು ಸೈಟು ತೆಗೆದುಕೊಳ್ಳುತ್ತಾರೆಂಬ ಶಕ್ತಿ ಇದೆ ಅಂಥವರಿಗೆ ಇಷ್ಟು ಪರ್ಸೆಂಟೇಜ್ ಅಥವಾ ಹಣವನ್ನೇ ಕೊಡುವುದಕ್ಕಾಗದೆ ಇರತಕ್ಕ ಕಡುಬಡವರು ಯಾರಿದ್ದಾರೆ. ಅವರದ್ದು ಒಂದಿಷ್ಟು ಪರ್ಸೆಂಟೇಜ್ ಈ ರೀತಿ ಮಾಡಿ ತಾವು ಪಟ್ಟಣ ಪ್ರದೇಶಗಳಲ್ಲಿರತಕ್ಕ ಪಟ್ಟಣ ವಾಸಿಗಳೇನಿದ್ದಾರೆ ಅವರಿಗೆ ತಾವು ಮುಫತ್ತಾಗಿ ಸೈಟು ಕೊಡುವಂಥ ವ್ಯವಸ್ಥೆಯಲ್ಲಿ ಮುಂದೆ ಬರಬೇಕು. ಅಲ್ಲಿ ಕೊಡತಕ್ಕ ಕಾಂಪನ್‌ಸೇಷನ್ ಅಮೌಂಟ್ ಏನಿದೆ ಅದಕ್ಕೆ ಪರಿಪೂರ್ಣವಾದ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟು, ಅದಕ್ಕೆ ಹಣ ಕೊಟ್ಟು ತಕ್ಷಣ ಸೈಟುಗಳನ್ನು ಹಂಚುವಂತ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಅಂಡರ್‌ಗ್ರೌಂಡ್ ಡ್ರೈನೇಜ್ ಸಿಸ್ಟಂ ಹೇಗಿದೆ ಎಂದರೆ, ಇದಕ್ಕೇನು ಪಾಪ್ಯುಲೇಷನ್ ಲಿಮಿಟ್ ಇಲ್ಲ. ಪಾಪ್ಯುಲೇಷನ್ ಲಿಮಿಟ್ ಇಲ್ಲದೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅಂಡರ್‌ಗ್ರೌಂಡ್ ಡ್ರೈನೇಜ್ ಮಾಡುತ್ತಿದ್ದಾರೆ. ಸಣ್ಣ ಸಣ್ಣ ಪುರಸಭೆಗಳಲ್ಲಿ ಏನು? ನನ್ನ ಊರು ಬನ್ನೂರು. ನಮ್ಮ ಊರಿನಲ್ಲಿ ಡ್ರೈನೇಜ್ ವ್ಯವಸ್ಥೆ ಇಲ್ಲ. ನೀರಿದ್ದರೆ ಕೊಚ್ಚೆ ನೀರು, ಸೂಯೇಜ್ ವಾಟರ್ ಬಿಟ್ಟರೆ ಕಾಲುವೆ ಒಳಿಗೆ ಹೋಗುತ್ತದೆ. ಸುತ್ತ ನೀರಿದೆ ಅದು ಕಾಲುವೆ ನೀರೆ. ಯಾವುದೇ ಸುಯೇಜ್ ನೀರು ಬಿಡ-ಬೇಕಾದರೂ ಕಾಲುವೆ ಒಳಗೆ ಹೋಗುತ್ತದೆ. ಮಳೆ ನೀರೂ ಅಲ್ಲೇ ಹೋಗುತ್ತದೆ. ಇದರಿಂದೇ-ನಾಗುತ್ತದೆ ಎಂದರೆ ಜಾನುವಾರುಗಳು ಕುಡಿದಾಗ ರೋಗ ಬರುತ್ತದೆ. ಅಂಥ ಪಟ್ಟಣಗಳಲ್ಲಿ, ಆ ಪಟ್ಟಣಗಳ ಸ್ಥಿತಿ ನೋಡಿ, ಆ ಪಟ್ಟಣದಲ್ಲಿ ವಾಸಿಸತಕ್ಕ ಜನಗಳ ಸ್ಥಿತಿ ನೋಡಿ ಅಂಡರ್‌ಗ್ರೌಂಡ್ ಸಿಸ್ಟಂ ಏನಿದೆ ಅದನ್ನು ಅಳವಡಿಸಬೇಕಾಗುತ್ತದೆ. ಇಲ್ಲದಿದ್ದರೆ ಖಾಯಿಲೆ, ಕಸಾಲೆ ಜಾಸ್ತಿ ಬಂದು ಊರು ಬಹಳ ಹೀನ ಸ್ಥಿತಿಗೆ ಹೋಗುತ್ತದೆ. ಆದುದರಿಂದ ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ; ನನ್ನದೇ ಆದ ಒಂದು ಗ್ರಾಮದಲ್ಲಿ ಸುತ್ತ ನೀರಿರುವುದರಿಂದ ಸುಯೇಜ್ ವಾಟರ್ ಕಾಲುವೆ ಒಳಗೆ ಹೋಗಿ ಆ ಕಾಲುವೆಯ ನೀರು ಕುಡಿದು ದನ, ಜನ ಎಲ್ಲರಿಗೆ ಬಹಳ ತೊಂದರೆಯಾಗಿದೆ. ದಯವಿಟ್ಟು ಅಂಥ ಪಟ್ಟಣಗಳಲ್ಲಿ ಅಂಡರ್‌ಗ್ರೌಂಡ್ ಸಿಸ್ಟಂ ಅನ್ನು ಮಾಡಿಕೊಡ-ಬೇಕು. ನನ್ನದು ಒಂದೇ ಎಂದು ಹೇಳುವುದಿಲ್ಲ, ಎಲ್ಲೆಲ್ಲಿ ನೀರಾವರಿ ಪ್ರದೇಶಗಳಲ್ಲಿ ಈ ರೀತಿ ತೊಂದರೆಯಾಗುತ್ತಿದೆ. ಆ ಕಡೆ ಸರ್ಕಾರ ಗಮನ ಹರಿಸಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿ-

ಗಳಲ್ಲಿ ಭಿನ್ನವಿಸಿಕೊಳ್ಳುತ್ತೇನೆ. ಇನ್ನು ಹೌಸಿಂಗ್ ಬೋರ್ಡ್‌ನವರು ಮನೆ ಕಟ್ಟುತ್ತಾರೆ. ಪಟ್ಟಣಗಳಲ್ಲಿರ-ತಕ್ಕ ಸಿಸ್ಟಂ ಅನ್ನೇ ಹಳ್ಳಿಗಳಲ್ಲೂ ತಂದು ಮಡಗುತ್ತಾರೆ. ಅಲ್ಲಿಗೆ ಹೊಂದಿಕೊಂಡು ಹೋಗುವ ಹಾಗೆ ಮಾಡುವುದಿಲ್ಲ. ಹಳ್ಳಿಗಳಲ್ಲಿ ಏನು ಕೇಳುತ್ತಾರೆ ಎಂದರೆ ಅಲ್ಲಿ ಒಬ್ಬ ರೈತ ದನ ಕಟ್ಟಿಹಾಕಿ ಕೊಳ್ಳುವುದಕ್ಕೆ ಜಾಗ ಬೇಕು ಎಂದು ಕೇಳುತ್ತಾನೆ. ಅದಕ್ಕೆ ಹೊಂದಿಕೊಳ್ಳುವ ಹಾಗೆ ಪ್ಲಾನ್ ಮಾಡುತ್ತಿಲ್ಲ. ನಮ್ಮಲ್ಲಿ ಹಿಂದಿನ ಸರ್ಕಾರ ಏನು ಮಾಡಿದೆ ಎಂದರೆ ಸುಮಾರು 250 ಮನೆಗಳನ್ನು ಹೌಸಿಂಗ್ ಬೋರ್ಡ್‌-ನವರು ಕಟ್ಟಿದ್ದಾರೆ, ಕಟ್ಟಿದ್ದರೂ ಇನ್ನೂ ಹಂಚಿಲ್ಲ. ಹಂಚುತ್ತೇವೆಂದರೂ ಜನ ಮುಂದೆ ಬರುತ್ತಿಲ್ಲ. ಹಂಚಿ-ದರೂ ಜನ ಬರುವ ವೇಳೆಗೆ ಬಿದ್ದುಹೋಗಿರುತ್ತವೆ. ಹಿಂದಿನ ಸರ್ಕಾರ ಮಾಡಿರತಕ್ಕದ್ದನ್ನು ನಾನು ಹೇಳುತ್ತಿದ್ದೇನೆ. ಅವರು ಹತ್ತು ಪರ್ಸೆಂಟ್ ಕೊಡುತ್ತೇವೆಂದರೂ ಅದಕ್ಕೂ ಜನರು ಮುಂದೆ ಬರುತ್ತಿಲ್ಲ. ಅವರ ಎದುರಿಗೇ ಬೀಳುತ್ತಿವೆ. ಏಕೆಂದರೆ ಹೌಸಿಂಗ್ ಬೋರ್ಡ್‌ನವರು ಮನೆ ಕಟ್ಟುತ್ತಿರುವ ಗುಣ-ಮಟ್ಟ ಏನಿದೆ ಆ ಗುಣಮಟ್ಟ ಇಂಪ್ರೂವ್ ಆಗಬೇಕು. ಆ ಗುಣಮಟ್ಟದ ಜೊತೆಗೆ ಅಲ್ಲಿಯ ಸೌಕ-ರ್ಯಕ್ಕೆ ತಕ್ಕಂತೆ ಆ ಊರಿನ ಸೌಕರ್ಯಕ್ಕೆ ತಕ್ಕಂತೆ ಗ್ರಾಮೀಣ ಜನತೆಯ ಸೌಕರ್ಯಕ್ಕೆ ತಕ್ಕಂತೆ ಮನೆಗಳ ಪ್ಲಾನ್ ಹಾಕಬೇಕು. ಪ್ಲಾನಿಂಗ್ ಇಲಾಖೆಯವರು ಎಲ್ಲೋ ಕುಳಿತುಕೊಂಡು ಪ್ಲಾನ್ ಮಾಡುತ್ತಾರೆ. ಅದನ್ನು ತಂದು ಇಲ್ಲಿ ಕೊಡುತ್ತಾರೆ. ದಯವಿಟ್ಟು ನಮ್ಮ ಊರಿನಲ್ಲಿ ಹತ್ತು ಮನೆಗಳನ್ನು ಹಂಚಿಬಿಡಿ ಸಾಕು. ಈಗ ಮನೆಗಳನ್ನು ಕಟ್ಟಿ 3 ವರ್ಷಗಳಾದರೂ ಒಬ್ಬರೂ ಮುಂದೆ ಬರುತ್ತಿಲ್ಲ. ಇವರು ಡಿಮ್ಯಾಂಡ್ ಕರೆದಿದ್ದಾರೆ, ಡಿಮ್ಯಾಂಡ್‌ನಲ್ಲಿ ದುಡ್ಡು ಕಟ್ಟಿದ್ದಾರೆ. ದಯವಿಟ್ಟು ನಮ್ಮ ದುಡ್ಡು ವಾಪಸ್ಸು ಕಳುಹಿಸಿ ಬಿಡಿ ಸ್ವಾಮಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಮನೆ ಕಟ್ಟಿ 3 ವರ್ಷವಾಗಿದೆ ಎಂದು ಕೃಷ್ಣಪ್ಪನವರು ಹೇಳಿ-ದರು ಇದರ ಫೌಂಡೇಷನ್ 1986ರಲ್ಲಿ ಬಿದ್ದಿದೆ, ಈಗ ಬಿದ್ದಿಲ್ಲ, 1991-92ರಲ್ಲಿ ಬಿದ್ದಲ್ಲ. ಫೌಂಡೇ-ಷನ್ 1985-86ರಲ್ಲಿ ಬಿದ್ದಿದೆ ಅಂದರೆ. . .

ಶ್ರೀ ಎಸ್. ಕೃಷ್ಣಪ್ಪ:- ಹೇಳುತ್ತೇನೆ, ಏಕೆಂದರೆ ಇಲ್ಲಿ ಪಟ್ಟಣದಲ್ಲಿ ಏನಾಗುತ್ತದೆಯೆಂದರೆ ಮನೆ ಕಟ್ಟುವಾಗ ಏನು ಮಾಡುತ್ತಾರೆಂದರೆ ಯಾರೂ ಅದನ್ನು ನೋಡುವುದಿಲ್ಲ; ಮನೆ ಎಲ್ಲಾ ಕಟ್ಟಿ ಬಣ್ಣಗಿಣ್ಣ ಹೊಡೆದ ಮೇಲೆ ಮನೆ ಫೈನ್ ಆಗಿದೆ ಎಂದು ನುಗ್ಗಿಬಿಡುತ್ತಾರೆ. ಆದರೆ ಹಳ್ಳಿಯಲ್ಲಿ ಹಾಗಾಗುವುದಿಲ್ಲ.

ಅಧ್ಯಕ್ಷರು:- ಕೃಷ್ಣಪ್ಪನವರಿಗೆ ಅರ್ಥವಾಗಲಿಲ್ಲ. ನೀವು ಅವುಗಳನ್ನು ಕಟ್ಟಿ 3 ವರ್ಷ ಆಯಿತು ಎಂದು ಹೇಳಿದ್ದೀರಿ ಅವರು ಅದಕ್ಕೆ ಫೌಂಡೇಷನ್ 1986ರಲ್ಲಿ ಹಾಕಿದ್ದುದು ಅಂದರು. ಒಟ್ಟಿನಲ್ಲಿ ಒಬ್ಬರು ಫೌಂಡೇಷನ್, ಒಬ್ಬರು ಕಟ್ಟಡ ಎಂದು ಫಲಾನುಭವಿಗಳು ಮುಗಿದು ಹೋದರು.

ಶ್ರೀ ಎಸ್. ಕೃಷ್ಣಪ್ಪ:- ಏನಾಗಿದೆ ಎಂದರೆ, ಪಟ್ಟಣದಲ್ಲಿ ಯಾರೂ ಕೂಡ ಬಂದು ನೋಡುವು-ದಿಲ್ಲ. ಗ್ರಾಮೀಣ ಪ್ರದೇಶಗಳಲ್ಲಿ ಏನಾಗುತ್ತದೆಂದರೆ ಮನೆ ಕಟ್ಟುತ್ತಿರುವಾಗಲೇ ಹೋಗಿ ನೋಡುತ್ತಿರು-ತ್ತಾರೆ. ಅಲ್ಲೇ ರೈತ ದನ ಮೇಯಿಸುತ್ತಿರುತ್ತಾನೆ. ಅಲ್ಲೇ ಸುತ್ತಮುತ್ತ ಹಳ್ಳಿಯ ಜನರು ಹೋಗುತ್ತಿರುತ್ತಾರೆ. ಇದಕ್ಕೆ ಈ ರೀತಿ ಸಿಮೆಂಟ್ ಹಾಕಿದ್ದಾರೆ, ಇದಕ್ಕೆ ಈ ರೀತಿ ಫೌಂಡೇಷನ್ ಹಾಕಿದ್ದಾರೆ ಎಂಬುದನ್ನು

ಗಮನಿಸುತ್ತಿರುತ್ತಾರೆ. ಈಗ ಅಂಥ ಕಟ್ಟಡಗಳು ಬಿದ್ದುಹೋಗಿವೆ, ಬೇಕಾದರೆ ಬರಲಿ ನಾನು ತೋರಿಸುತ್ತೇನೆ. ನಾನು ಸುಳ್ಳುಹೇಳತಕ್ಕ ಮಾತು ಇಲ್ಲ.

11.50 ಎ.ಎಂ

ಈಗ ಮೂರು ವರ್ಷ ಆಗಿದೆಯಲ್ಲ ಹಂಚುತ್ತೀರಾ ಸ್ವಾಮಿ? ಈಗ ಹಂಚಿದ್ದಾರೋ ಹಂಚುವುದಕ್ಕೆ ಆಗುತ್ತದೆಯೇ ಕೇಳಿ. ಬಹುಶಃ ಇವರು ಯಾರಿಗೂ ಹಂಚದಿದ್ದರೆ ಜನರೇ ನುಗ್ಗಬೇಕಾಗುತ್ತದೆ, ಇವರು ಫ್ರಿಯಾಗಿ ಕೊಟ್ಟುಬಿಡುತ್ತಾರೆ ಎಂದು ಕಾಣುತ್ತದೆ. ಏಕೆಂದರೆ ವಿಧಿ ಇಲ್ಲ, ಯಾರೂ ಕೇಳುವವರು ಮುಂದೆ ಬರುತ್ತಿಲ್ಲ. ಮನೆಗಳ ಜೊತೆಗೆ ಹೌಸಿಂಗ್ ಬೋರ್ಡಿನವರು ಸೈಟುಗಳನ್ನು ಕೊಡಬೇಕು. ದಯವಿಟ್ಟು ಸೈಟುಗಳನ್ನು ಕೊಡುವಂಥ ವ್ಯವಸ್ಥೆ ಮಾಡಬೇಕು. ಏಕೆ ಸೈಟು ಕೊಡಬೇಕು ಎಂದು ಹೇಳುತ್ತಿದ್ದೇನೆ ಅಂದರೆ, ಕೊಂಡುಕೊಳ್ಳತಕ್ಕ ಶಕ್ತಿ ಇರತಕ್ಕ ಜನ ಕೊಂಡುಕೊಳ್ಳುವುದಕ್ಕೆ ಒಂದು ಅವಕಾಶವಾಗುತ್ತದೆ. ದಯಮಾಡಿ ನಮ್ಮಲ್ಲಿರತಕ್ಕ ಹೌಸಿಂಗ್ ಬೋರ್ಡ್ ಜಾಗಗಳನ್ನು ಸೈಟುಗಳನ್ನಾಗಿ ವಿಂಗಡಿಸಿ ಅದನ್ನು ಹಂಚಬೇಕು ಎಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಅರ್ಬನ್ ವಾಟರ್‌ಸಪ್ಲೈ ಸ್ಕೀಮ್ ಬಗ್ಗೆ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಅರ್ಬನ್ ವಾಟರ್ ಸಪ್ಲೈ ಸ್ಕೀಮ್ ಸ್ಯಾಂಕ್ಷನ್ ಆಗುತ್ತದೆ. ನಮ್ಮಲ್ಲಿ 1992ರಲ್ಲಿ ಸ್ಯಾಂಕ್ಷನ್ ಆಯಿತು. ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್ ಸ್ಯಾಂಕ್ಷನ್ ಆಯಿತು. ಹೇಗೆ ಸ್ವಾಮಿ ಕೆಲಸ ಮಾಡಬೇಕು. ಪೈಪ್ಡ್ ವಾಟರ್ ಸಪ್ಲೈ ಸ್ಕೀಂನಲ್ಲಿ ಹಣಕ್ಕೇನೂ ಕೊರತೆ ಇಲ್ಲ. ಸರ್ಕಾರ ಪೂರ್ತಿ ಭರಿಸತಕ್ಕ ಹಣ ಅದು. ಅದನ್ನು ಯಾವ ತರಹ ಮಾಡಬೇಕು? ಪ್ರಾರಂಭದಲ್ಲಿ ಕೆಲಸ ಚೆನ್ನಾಗಿ ಆಯಿತು. ನಂತರ ಬಂದಿರತಕ್ಕವರು ಒಂದು ವರ್ಷಕ್ಕೆ ದುಡ್ಡಿದ್ದರೂ ಕೂಡ ಕೇವಲ 10 ಸಾವಿರ ರೂಪಾಯಿ ಖರ್ಚು ಮಾಡದೇ ಇರತಕ್ಕ ಅಧಿಕಾರಿಗಳೂ ಬರುತ್ತಾರೆ. ನಿಗದಿಯಾದಂಥ ಅವಧಿಯಲ್ಲಿ ಅದನ್ನು ಮಾಡಬೇಕು. ಹಣ ಇದ್ದಾಗ ಎರಡು ವರ್ಷಗಳಲ್ಲಿ ಅದನ್ನು ಕಂಪ್ಲೀಟ್ ಮಾಡಬೇಕು. ಇನ್ನೂ ನಮ್ಮಲ್ಲಿ ಕಂಪ್ಲೀಟೇ ಮಾಡಿಲ್ಲ. ಕಾರಣ ಕೇಳಿದರೆ ಕಳೆದ ಎರಡು ವರ್ಷ ಮೂರು ವರ್ಷದಲ್ಲಿ 10 ಸಾವಿರ ರೂಪಾಯಿ ಕೂಡ ಖರ್ಚು ಮಾಡದೇ ಇರತಕ್ಕ ವರ್ಷಗಳಿವೆ. ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ಹಣ ಇದ್ದಾಗ ನಿಗದಿಯಾದಂಥ ವೇಳೆಯಲ್ಲಿ ಕೆಲಸ ಮುಗಿಸಬೇಕು ಅರ್ಬನ್ ವಾಟರ್‌ಸಪ್ಲೈ ಸ್ಕೀಮ್‌ನವರು ಏನು ಕೆಲಸ ತೆಗೆದುಕೊಂಡಿದ್ದಾರೆ ಅದನ್ನು ಮಾಡಬೇಕು. ಕೆಲವು ಸಾರಿ ನಿಧಾನ ಮಾಡಿಬಿಡುತ್ತಾರೆ. ಟ್ಯಾಂಕ್‌ಗೆ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ಟ್ಯಾಂಕ್ ಕೆಲಸ ಶುರು ಮಾಡಿ ಮೂರು ವರ್ಷಗಳಾದರೂ ಕೂಡ ಇನ್ನೂ ಅರ್ಧದಲ್ಲೇ ನಿಂತಿದೆ. ನಮಗೆ ಕಾರಣ ಬೇಕಾಗಿಲ್ಲ. ಎಸ್ಕಲೇಷನ್ ಕೇಳುತ್ತಾನೆ ಎಂತಲೋ ಅಥವಾ ಕಂಟ್ರಾಕ್ಟರ್ ತೀರಿಹೋದ ಅಂತಲೋ ಅಥವಾ ಕಟ್ಟಿರತಕ್ಕ ಕ್ವಾಲಿಟಿ ಸರಿಯಿಲ್ಲ ಅಂತಲೋ ಅಲ್ಲ. ಇದಕ್ಕೆ ನಿಗದಿಯಾದಂಥ ಟೈಮ್ ಬೌಂಡ್ ಪ್ರೋಗ್ರಾಂ ಮಾಡಬೇಕು. ಇಷ್ಟೇ ತಿಂಗಳಲ್ಲಿ ಮುಗಿಯಬೇಕು ಎಂದು ಹೇಳಬೇಕು. ಕಾಂಟ್ರಾಕ್ಟರ್ ಏನು ಮಾಡುತ್ತಾನೆ ಎಂದರೆ ಕೆಲಸ ಶುರು ಮಾಡುತ್ತಾನೆ, ಮತ್ತೆ ಕೆಲಸ ನಿಲ್ಲಿಸುತ್ತಾನೆ. ಆ ವರ್ಷದ ಎಸ್ಟಮೇಟ್ ಏನಿರುತ್ತದೆಯೋ ಅದರ ಎಸ್ಕಲೇಷನ್ ಕ್ಲೈಮ್ ಮಾಡಿಕೊಳ್ಳುತ್ತಾನೆ, ನೆಮ್ಮದಿಯಾಗಿ ಕುಳಿತಿರುತ್ತಾನೆ. ಇದಾಗಬಾರದು.

ಪಟ್ಟಣವಾಸಿಗಳಿಗೆ ಇದು ತ್ವರಿತವಾಗಿ ಆಗಬೇಕು ಎಂದು ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ ಸ್ವಾಮಿ. ಪುರಸಭೆಗಳಿಗೆ ಆಕ್ಟ್ರಾಯಿ ತೆಗೆದಮೇಲೆ ಎಂಟ್ರಿ ಟ್ಯಾಕ್ಸ್ ಎಂದು ಮಾಡಿ-ದರು. ಉದ್ದೇಶ ಏನೆಂದರೆ ಪುರಸಭೆಗಳ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೋಸ್ಕರ. ಆ ಎಂಟ್ರಿ ಟ್ಯಾಕ್ಸ್ ಪುರಸಭೆಗಳಿಗೆ ಹೋಗುತ್ತಿಲ್ಲ, ಸರ್ಕಾರಕ್ಕೆ ಹೋಗುತ್ತಾ ಇದೆ. ಅದರಲ್ಲಿ ಕೆಲವು ಪರ್ಸೆಂಟೇಜ್ ಕೊಡುತ್ತಾರೆ. ಹೀಗಾದರೆ ಪುರಸಭೆ ಹೇಗೆ ಮುಂದುವರೆಯುತ್ತದೆ? ಸರ್ಕಾರ ಕೂಡ ಆಕ್ಟ್ರಾಯಿ ಕೊಡಬಾರದು ಎನ್ನುವ ಮಾತನ್ನು ಹೇಳಿದ್ದಾರೆ, ಒಪ್ಪಿಕೊಳ್ಳುತ್ತೇನೆ. ಆದರೆ ಅಲ್ಲಿನ ಸ್ಥಿತಿ-ಯನ್ನು ನೋಡಿ. ನಮಗೋಸ್ಕರ ಎಂದು ಎಂಟ್ರಿ ಟ್ಯಾಕ್ಸ್ ಹಾಕಿದಂಥ ಸರ್ಕಾರ ಹೆಚ್ಚಿಗೆ ಹಣವನ್ನು ಪುರಸಭೆಗಳಿಗೆ ಕೊಡುವ ವ್ಯವಸ್ಥೆ ಮಾಡಬೇಕು ಎಂದು ನಾನು ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಇನ್ನೊಂದು ಮೋಸ. ಬೆಂಗಳೂರು ಪಟ್ಟಣದಲ್ಲಿ ಕೂಡ ಅಸೆಸಿಂಗ್ ಆಫೀಸರ್ಸ್ ಸರಿಯಾಗಿ ಅಸೆಸಿಂಗ್ ಮಾಡದೆ ಕೋಟ್ಯಾಂತರ ರೂಪಾಯಿ ಮೋಸವಾಗಿದೆ ಎಂದು ಹಿಂದಿದ್ದ ಮುಖ್ಯಮಂತ್ರಿ-ಗಳು ಕೂಡ ಹೇಳಿದ್ದರು. ಅದರ ಮೇಲೆ ಕೆಲವು ಕಮಿಷನ್ ಕೂಡ ಮಾಡಿದ್ದರು. ಅದು ಎನ್‌ಕ್ವೈರಿ ಮಾಡಿ ಎಷ್ಟು ಲಾಸ್ ಆಗಿದೆ, ಎಷ್ಟು ಬರುತ್ತದೆ ಎಂದು ನೋಡುವುದಕ್ಕೆ, ಇದೇ ತರಹ ಎಲ್ಲಾ ಪುರಸಭೆಗಳಲ್ಲೂ ಆಗಬೇಕು. ಅಸೆಸಿಂಗ್ ಆಫೀಸರ್ಸ್ ಚೆಕಿಂಗ್ ಇಲ್ಲ, ನಾನೂ ಕೂಡ ಹತ್ತು ವರ್ಷ-ಗಳು ಪುರಸಭೆ ಅಧ್ಯಕ್ಷನಾಗಿ ನೋಡಿದ್ದೇನೆ. ಅವರನ್ನು ಕೇಳುವವರೇ ಇಲ್ಲ. ಯಾರೊ ಒಬ್ಬ ಕ್ಲರ್ಕ್ ಇಟ್ಟುಕೊಳ್ಳುತ್ತಾನೆ. ಅವನಿಗೆ ಸ್ವಲ್ಪ ದುಡ್ಡು ಕೊಡುತ್ತಾನೆ. ಅವನು ಬರೆಯುತ್ತಾನೆ, ಇವನು ಸೈನ್ ಹಾಕುತ್ತಾನೆ. ಯಾರು ನೂರು ರೂಪಾಯಿ ಕೊಡುತ್ತಾನೆ ಅವನಿಗೆ ಒಂದು ತರಹ ಟ್ಯಾಕ್ಸ್ ಅಸೆಸ್ ಮಾಡತಕ್ಕದ್ದು, 500 ರೂಪಾಯಿ ಕೊಟ್ಟವನಿಗೆ ಒಂದು ತರಹ ಮಾಡತಕ್ಕದ್ದು. ಅವನು ಅಕೌಂಟ-ಬಲಿಟಿ ಆಗಬೇಕಾದರೆ ಅವನು ಏನು ಅವತ್ತು ಮಾಡಿರುತ್ತಾನೆ ಅದು ಪುರಸಭೆಗೆ ತಲುಪಿರಬೇಕು. ಜೊತೆಗೆ ಸಾರ್ವಜನಿಕರಿಗೆ ಗೊತ್ತಾಗುವ ಹಾಗೆ ಇರಬೇಕು. ಪಕ್ಕದ ಮನೆಯವನು 100 ಕೊಟ್ಟಾಗ ಅವನಿಗೆ 20 ಹಾಕಿದರೆ ಅದನ್ನು ಕ್ವೆಶ್ಚನ್ ಮಾಡುವ ಹಾಗಿರಬೇಕು. ಆಗ ಮಾತ್ರ ಭಯ ಬರುತ್ತದೆ. ಮತ್ತು ಅವನ ಮೇಲೆ ಕಡಿವಾಣ ಇರುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಎಲ್ಲಾ ಅಸೆಸಿಂಗ್ ಆದಮೇಲೆ ಒಂದು ಸಾರಿ ನೋಡುತ್ತಾರೆ. ನೋಡಿದಾಗ ಏನಾಗುತ್ತದೆ ಓಹೋ ತಾರತಮ್ಯ ಇದೆ, ನಾವು ಸರ್ಕಾರಕ್ಕೆ ಬರೆಯುತ್ತೇವೆ, ಅಸೆಸಿಂಗ್ ಆಫೀಸರ್ ಸರಿಯ್ಯಾಗಿ ಮಾಡಿಲ್ಲ; ಆದ್ದರಿಂದ ದಯವಿಟ್ಟು ಇದನ್ನು ಕ್ಯಾನ್ಸಲ್ ಮಾಡಿ ಹೊಸ ಅಸೆಸಿಂಗ್ ಆಫೀಸರನ್ನು ನೇಮಕ ಮಾಡಿ ಎಂದು ನಾವು ಸರ್ಕಾರವನ್ನು ಮೊರೆಹೋಗುತ್ತೇವೆ. ಅದಾಗದೇ ಇರಬೇಕಾದರೆ ಅಸೆಸಿಂಗ್ ಆಫೀಸರ್‌ಗೂ ಕೂಡ ಅಕೌಂಟಬಲಿಟಿ ಇರಬೇಕು. ಸಾರ್ವಜನಿಕರಿಗೆ ಅವನು ಏನು ಫಿಕ್ಸ್ ಮಾಡಿದ್ದಾನೆ ಎನ್ನುವುದು ಎಲ್ಲರಿಗೂ ಗೊತ್ತಾಗುವ ಹಾಗೆ ಆಗಬೇಕು. ಮತ್ತು ಅವನು ಮಾಡತಕ್ಕ ರೀತಿ ಅಲ್ಲಲ್ಲೇ ಪುರಸಭೆಗೆ ಕೊಡಬೇಕು ಎನ್ನುವ ಮಾತನ್ನು ನಾನು ತಮ್ಮ ಮುಖಾಂತರ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ನ್ಯಾಯಬೆಲೆ ಅಂಗಡಿಗಳ ಬಗ್ಗೆ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇದು ಸರ್ಕಾರಕ್ಕೂ ಗೊತ್ತಿದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಅನ್ಯಾಯ ಆಗುತ್ತಿದೆ, ಗ್ರಾಹಕರಿಗೆ

ಪದಾರ್ಥಗಳು ತಲುಪುತ್ತಿಲ್ಲ. ಈಗ ಯಾರ್ಯಾರೋ ಚೆಕ್ ಮಾಡಬಹುದಂತೆ. ಆ ಪುರಸಭೆ ವ್ಯಾಪ್ತಿಯಲ್ಲಿ ರೆವಿನ್ಯೂ ಅಧಿಕಾರಿಗಳು ಚೆಕ್ ಮಾಡಬಹುದು. ಅಲ್ಲಿನ ಚೀಫ್ ಆಫೀಸರ್ ಹೋಗಿ ಚೆಕ್ ಮಾಡುವಹಾಗಿಲ್ಲ. ಅವರಿಗೂ ಅಧಿಕಾರ ಕೊಡಿ. ಅಲ್ಲಿರತಕ್ಕ ಅಧಿಕಾರ ಪುರಸಭೆಗೆ ಕೊಟ್ಟಾಗ ಅವನು ಕೂಡ ಚೆಕ್ ಮಾಡುವಂಥ ವ್ಯವಸ್ಥೆಯಾಗಬೇಕಾಗುತ್ತದೆ. ನ್ಯಾಯಬೆಲೆ ಅಂಗಡಿಗಳಲ್ಲಿ ಹಸಿರು ಕಾರ್ಡ್ ಮತ್ತು ಇನ್ನೊಂದು ಕಾರ್ಡ್ ಕೊಡುತ್ತಾರಲ್ಲ ಆ ಕಾರ್ಡ್‌ಗಳಲ್ಲಿ ಸುಮ್ಮನೆ 10 ಕೆ.ಜಿ. ಕೊಟ್ಟೆ, 3 ಕೆ.ಜಿ. ಕೊಟ್ಟೆ ಎಂದು ಬರೆದಿರುತ್ತಾರೆ. ಅದರಲ್ಲಿ ತಾರಿಖಿಲ್ಲ, ರಶೀತಿ ನಂಬರ್ ಇಲ್ಲ, ಆ ತಿಂಗಳು ಹಾಕಿಬಿಟ್ಟಿರುತ್ತಾರೆ. ಮೇ, ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ಎಂದು ತಿಂಗಳನ್ನು ಹಾಕಿರುತ್ತಾರೆ. ಅಲ್ಲಿ 3 ಕೆ.ಜಿ. ಸಕ್ಕರೆ, ಐದು ಲೀಟರ್ ಸೀಮೆಎಣ್ಣೆ ಎಂದು ಬರೆದಿರುತ್ತಾರೆ. ಅಲ್ಲಿ ಅವನ ಹತ್ತಿರ ರಶೀತಿ ನಂಬರ್ ಇಲ್ಲ, ತಾರೀಖಿರುವುದಿಲ್ಲ. ಇಂಥ ತಿಂಗಳಲ್ಲಿ ಕೊಟ್ಟೆ ಎಂದು ಇರುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಅವಿದ್ಯಾವಂತರು ಜಾಸ್ತಿ ಇದ್ದಾರೆ. ಅವರು ಕೊಟ್ಟಷ್ಟು ಸಾಕು ಎಂದು ತಿಳಿದುಕೊಳ್ಳುತ್ತಾರೆ. ಕಾರ್ಡ್ ಕೊಟ್ಟ ತಕ್ಷಣ ಇನ್ನೂ ಎರಡು ತಿಂಗಳು ಕೊಡದೇ ಇದ್ದರೂ ಅದರಲ್ಲಿ ಬರೆದಿರುತ್ತಾನೆ. ಈ ತಿಂಗಳು ಕೊಟ್ಟು ಹಿಂದೆ ಪದಾರ್ಥ ಬರಲಿಲ್ಲ ಎಂದು ಹೇಳಿಬಿಟ್ಟು ಆ ಎರಡು ತಿಂಗಳದೂ ಎಂಟ್ರಿ ಮಾಡಿ ಕೊಡುತ್ತಾನೆ. ಅದಕ್ಕೆ ನಾನು ಕಡ್ಡಾಯವಾಗಿ ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ; ಇದು ನಿಮಗೆ ಮಾಡುವುದಕ್ಕೆ ಸಾಧ್ಯವೇ? ಏನೆಂದರೆ ಕಾರ್ಡಿನ ಮೇಲೆ ಬಿಲ್ ನಂಬರ್, ತಾರೀಖು ಬರೆಯಬೇಕು. ಇದು ಕಡ್ಡಾಯವಾಗಿ ಆಗಬೇಕು. ಕಾರ್ಡಿನ ಮೇಲೆ ಎಲ್ಲಾದರೂ ಇದೆಯೇ ಎಂದು ತೋರಿಸಿ ನೋಡೋಣ. ದಯವಿಟ್ಟು ಮಂತ್ರಿಗಳು ನ್ಯಾಯಬೆಲೆ ಅಂಗಡಿಗೆ ಹೋಗಿ ಚೆಕ್ ಮಾಡಿ ಯಾವುದಾದರೂ ಕಾರ್ಡ್ ಮೇಲೆ ಇದೆಯೋ ಎಂದು ನೋಡಿ. ಕೊಟ್ಟಂಥ ತಾರೀಖು ಮತ್ತು ರಶೀತಿ ನಂಬರ್ ಆ ಕಾರ್ಡ್ ಮೇಲೆ ಇದೆಯೇ? ಕಡೆಗೆ ನ್ಯಾಯ ಬೆಲೆ ಅಂಗಡಿಗಳಲ್ಲಿ ಬೋರ್ಡಿದೆಯಾ? ಇನ್ನೂ ಕೆಲವರಿದ್ದಾರೆ. 2 ಕಿಲೋ ಮೀಟರ್, 3 ಕಿಲೋ ಮೀಟರ್ ನಡೆದುಕೊಂಡು ಹೋಗಬೇಕು. ಸರ್ಕಾರಕ್ಕೆ ನ್ಯಾಯಬೆಲೆ ಅಂಗಡಿ ಪಕ್ಕದ ಹಳ್ಳಿಯವರಿಗೂ ಕೊಡಿ ಅಂದರೆ ಇಲ್ಲ ಇಲ್ಲ, 500 ಕಾರ್ಡ್ ಇರದ ಹೊರತು ಕೊಡುವುದಕ್ಕೆ ಬರುವುದಿಲ್ಲ ಎಂದು ಹೇಳುತ್ತಾರೆ. ಇವನು ಮೂರು ಕಿಲೋಮೀಟರ್ ನಡೆದು ಹೋಗುವಹಾಗಿಲ್ಲ, ಅವನಿಗೆ ಕೊಡಬೇಕಾದರೆ ಆ ಊರಿನಲ್ಲಿ 500 ಕಾರ್ಡ್ ಇಲ್ಲ. ಇನ್ನು ಅವನು ಹೋಗಿ ಆ ಕಾರ್ಡ್ ತರುವಹಾಗಿಲ್ಲ. ಇವನು ಹೋಗಿ ಎರಡು ಮೂರು ಸಾರಿ ಸುತ್ತಿ ಬಂದರೆ ಆ ನ್ಯಾಯಬೆಲೆ ಅಂಗಡಿ ಮುಚ್ಚಿರುತ್ತದೆ. ಪದಾರ್ಥ ಏನಾಗಬೇಕು? ಯಾರೂ ಸರ್ಕಾರಕ್ಕೆ ವಾಪಸ್ಸೇ ಮಾಡುತ್ತಾ ಇಲ್ಲ. ಅಥವಾ ಈ ವರ್ಷ ಇಷ್ಟಿತ್ತು ಎಂದು ಹೇಳಿರುವ ಇನ್‌ಸ್ಟೆನ್ಸ್ ಇದೆಯೇ? ಹಳ್ಳಿಯಲ್ಲಿರತಕ್ಕ ನ್ಯಾಯಬೆಲೆ ಅಂಗಡಿಗೆ ಮೂರು ಕಿಲೋಮೀಟರ್ ದೂರ ಹೆಣ್ಣುಮಕ್ಕಳು ಹೋಗಬೇಕು. ಗಂಡಸರು ಹೋಗುವುದಿಲ್ಲ. ಹೆಣ್ಣುಮಕ್ಕಳು ಹೋಗಿ ತರುವಹಾಗಿಲ್ಲ. ಎರಡು ದಿವಸ ಹೋಗದೇ ಇದ್ದರೆ ಅವನು ಸಿಗುವುದಿಲ್ಲ. ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲೂ ಕೂಡ, ಮೂರು ದಿವಸ ಬಾಗಿಲು ತೆಗೆದಿದ್ದೆ ಒಬ್ಬರೂ ಬರಲಿಲ್ಲ, ಎರಡು ದಿವಸ ಬಾಗಿಲು ತೆಗೆದಿದ್ದೆ ಒಬ್ಬರೂ ಬರಲಿಲ್ಲ ಎಂದು ಹೇಳುತ್ತಾರೆಯೇ ವಿನಾಃ ಪದಾರ್ಥವನ್ನು ಅವರಿಗೆ ಕೊಡಬೇಕು, ಅವರದು

ಪದಾರ್ಥ, ನಾನು ಪ್ರಿಸರ್ವ್ ಮಾಡಬೇಕು ಎನ್ನುವ ಉದ್ದೇಶ ಯಾವ ನ್ಯಾಯಬೆಲೆ ಅಂಗಡಿಗಳಿಗೂ ಇಲ್ಲ. ಯಾರು ಬಂದು ತೆಗೆದುಕೊಂಡು ಹೋಗಲಿಲ್ಲ ಎಂದರೆ ಅದನ್ನು ಅವನ್ನು ಸರ್ಕಾರಕ್ಕೆ ವಾಪಸ್ಸು ಕೊಡಬೇಕಾಗುತ್ತದೆ. ನನ್ನಲ್ಲಿರುವ 100 ಕಾರ್ಡ್‌ಗಳಲ್ಲಿ 25-30 ಕಾರ್ಡಿನ ಪದಾರ್ಥ ಇವತ್ತು ಎತ್ತಿಲ್ಲ, ಕಡಿಮೆ ಕೊಡಿ ಎನ್ನತಕ್ಕದ್ದನ್ನು ಅವನು ಹೇಳಬೇಕು. ಎಷ್ಟು ಜನ ಹಾಗೆ ಹೇಳಿದ್ದಾರೆ ಸ್ವಾಮಿ? ಅಂಥ ಇನ್ಸಿಡೆಂಟ್ ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಹೌದು, ಈ ತಿಂಗಳು ನನ್ನಲ್ಲಿ 50 ಜನ ಪದಾರ್ಥ ತೆಗೆದುಕೊಳ್ಳಲಿಲ್ಲ ಎಂದು ಹೇಳಬೇಕು. ಅಲ್ಲಿ ನೋಡಿದರೆ ಮೂರು ತಿಂಗಳು ನಾಲ್ಕು ತಿಂಗಳು ಪದಾರ್ಥವೇ ಬಂದಿರುವುದಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಹೇಳುತ್ತೇನೆ, ಕಡ್ಡಾಯವಾಗಿ ಮೂರು ಕಿಲೋಮೀಟರ್‌ನಲ್ಲೋ ಎರಡು ಕಿಲೋಮೀಟರ್‌ನಲ್ಲೋ ಅವರಿಗೆ 200 ಕಾರ್ಡ್ ಬರಲಿ 250 ಕಾರ್ಡ್ ಬರಲಿ ಅಲ್ಲಿಗೆ ಒಂದು ನ್ಯಾಯಬೆಲೆ ಅಂಗಡಿ ಕೊಡ-ಬೇಕು. ನೀವು 10 ಕೆ.ಜಿ. ಕೊಡುತ್ತೀರಿ ಎಂದು ಅವರು ಹೋಗಿ ತಿರುಗುವುದಕ್ಕಾಗುವುದಿಲ್ಲ. ಅವರು ಬೇರೆ ಕಡೆಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ ಸಮಯ ಸಿಕ್ಕಾಗ ಅಲ್ಲಿಗೆ ಹೋಗುತ್ತಾರೆ. ಅವರು ಹೋದಾಗ ಅಂಗಡಿಯವನು ಇರುವುದಿಲ್ಲ. ಫೀಸಬಲ್, ನಾನ್‌ಫೀಸಬಲ್ ಬಗ್ಗೆ ನಾನು ಮಾತ-ನಾಡುವುದಿಲ್ಲ. ಸರ್ವೀಸಬಲ್ ಮೋಟೀವ್ ನೀವು ಇಟ್ಟುಕೊಳ್ಳಬೇಕು. ಲಾಭ ಬರುವುದಿಲ್ಲ, ಆದ್ದ-ರಿಂದ ನ್ಯಾಯಬೆಲೆ ಅಂಗಡಿಯನ್ನು ಕೊರುವುದಕ್ಕಾಗುವುದಿಲ್ಲ ಎಂದು ಸರ್ಕಾರದಲ್ಲಿ ಹೇಳಬಾರದು. ನೂರೇ ಕಾರ್ಡ್ ಆಗಿರಲಿ. ಪದಾರ್ಥಗಳನ್ನು ಸರಿಯಾಗಿ ಹಂಚುವಂಥ ವ್ಯವಸ್ಥೆಯಾಗಬೇಕು. ಆ ಕಾರ್ಡಿನ ಮೇಲೆ ರಶೀತಿ ನಂಬರ್ ಮತ್ತು ಡೇಟ್ ಇರಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಹಾಕರ್ಸ್ ಇದ್ದಾರಲ್ಲ ಆ ಸೀಮೆಎಣ್ಣೆಯವರು 250 ಲೀಟರ್ ಹಾಕುವ ಡ್ರಮ್‌ನಲ್ಲಿ ನೂರೇ ಲೀಟರ್ ತಂದು ಹಂಚಿಬಿಟ್ಟು ಹೋಗುತ್ತಾನೆ. ಅವನಿಗೆ ಲೈಸೆನ್ಸ್ ನಂಬರ್ ಇರುವುದಿಲ್ಲ, ಒಂದು ಲೀಟರ್‌ನ್ನು ಎಷ್ಟಕ್ಕೆ ಮಾರಬೇಕು ಎಂದು ಇರುವುದಿಲ್ಲ, ಅವನು ಲೈಸೆನ್ಸ್ ರಿನ್ಯೂ ಮಾಡಿದ್ದಾನೋ ಇಲ್ಲವೋ ಗೊತ್ತಿರುವು-ದಿಲ್ಲ. ದಯಮಾಡಿ ಸರ್ಕಾರದಲ್ಲಿ ನಾನು ಕೇಳಿಕೊಳ್ಳುತ್ತೇನೆ, ಏಕೆಂದರೆ ಇದು ಸಲಹೆ. ಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕಾದರೆ ಇದನ್ನು ಕಡ್ಡಾಯವಾಗಿ ಮಾಡಬೇಕು ಎಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯಿಸುತ್ತೇನೆ ಸಾರ್, ನನ್ನ ಸಲಹೆ ಚೆನ್ನಾಗಿಲ್ಲದಿದ್ದರೆ ನಿಲ್ಲಿಸಿಬಿಡುತ್ತೇನೆ.

ಅಧ್ಯಕ್ಷರು:- ಸಲಹೆ ಚೆನ್ನಾಗಿದೆ. ಟೈಮ್ ಚೆನ್ನಾಗಿಲ್ಲ.

ಶ್ರೀ ಎಸ್. ಕೃಷ್ಣಪ್ಪ:- ಇನ್ನು ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, ಸಹಕಾರ ಸಂಘ-ಗಳಲ್ಲಿ ನಾವು ಸಾಲವನ್ನು ಕೊಡುತ್ತೇವೆ. ವಿಫಲವಾದ ಬಾವಿಗಳು ಇರುತ್ತವೆ. ತಾವು ನೋಡಿರ-ಬಹುದು, ಈ ವರ್ಷ ತೆಗೆದ ಬೋರ್‌ನಲ್ಲಿ ಒಂದರಲ್ಲೂ ನೀರಿಲ್ಲ. ಹಿಂದೆ ಎರಡು ವರ್ಷಗಳಲ್ಲಿ ಕೊರೆ-ದಂತಹ ಬೋರ್‌ಗಳಲ್ಲಿ ಇವತ್ತು ನೀರಿಲ್ಲ. ಅವನು ಏನು ಮಾಡಬೇಕು ಸ್ವಾಮಿ? ಅವನು ಕಮರ್ಷಿ-ಯಲ್ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿರಲಿ, ಸಹಕಾರಸಂಘಗಳಲ್ಲಿ ಸಾಲ ತೆಗೆದುಕೊಂಡಿರಲಿ ಅಂತಹವರ ಸಾಲವನ್ನು ವಜಾ ಮಾಡಬೇಕು. ಏಕೆಂದರೆ ಮೊದಲೇ ಅವನು ನೊಂದಿರುತ್ತಾನೆ. ನಾನು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಯಾರೇ ಸಾಲ ತೆಗೆದುಕೊಂಡಿರಲಿ,

ಅವನು ದೊಡ್ಡರೈತ ಸಣ್ಣರೈತ, ಅತಿ ಸಣ್ಣರೈತ ಎನ್ನತಕ್ಕದ್ದು ಅಲ್ಲ. ಅವನು ಹಿಂದೆ ಬೆಳೆಯುತ್ತಿದ್ದ ಜಮೀನಿನಲ್ಲಿ ಬೆಳೆ ಬರಲಿಲ್ಲವೆಂದರೆ, ವಿಫಲವಾದ ಬಾವಿಗಳ ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆಂದು ಸರ್ಕಾರವನ್ನು ಕೇಳುತ್ತೇನೆ.

ಇನ್ನು, ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಂಡು ಬಾವಿ ತೆಗೆಸಿದವರಿಗೆ ತಾವು ತಕ್ಷಣ ವಿದ್ಯುಚ್ಛಕ್ತಿ ಕನೆಕ್ಷನ್ಸ್ ಕೊಡಿಸಬೇಕಾಗಿದೆ. ಕೆಲವು ಸಾರಿ ಏನಾಗುತ್ತದೆ ಎಂದರೆ ನನಗೆ ವಿದ್ಯುಚ್ಛಕ್ತಿ ಕನೆ-ಕ್ಷನ್ ಬೇಡ, ನೀರು ಹರಿಯುವ ಜಾಗ ಹತ್ತಿರ ಇದೆ. ನನಗೆ ಕೇವಲ ಒಂದು ಎಕರೆ ಇದೆ, ಡೀಸಲ್ ಮೋಟಾರಿನಿಂದ ನೀರು ಹೊಡೆದುಕೊಳ್ಳುತ್ತೇನೆಂದರೆ, ಡೀಸಲ್ ಮೋಟಾರ್‌ಗೆ ಸಾಲ ಕೊಡುವುದಿಲ್ಲ ಸ್ವಾಮಿ. ನೀನು ಕೆಇಬಿಯಿಂದ ನಿನಗೆ ವಿದ್ಯುಚ್ಛಕ್ತಿಕೊಡುವುದಕ್ಕೆ ಸಾಧ್ಯವಿಲ್ಲವೆಂದು ಬರೆಸಿಕೊಂಡು ಬಾ, ಆಗ ಮಾತ್ರ ಡೀಸಲ್ ಮೋಟಾರ್ ಕೊಡಿಸುವುದಕ್ಕೆ ಸಾಲ ಕೊಡುತ್ತೇವೆಂದು ಹೇಳುತ್ತಾರೆ. ಅವನಿಗೆ ಪಂಪ್‌ಸೆಟ್ ಸಾಲ ಬೇಕಾಗಿಲ್ಲ ಅವನಿಗೆ ಒಂದೇ ಒಂದು ಎಕರೆ ಭೂಮಿ ಇರುತ್ತದೆ. ಡೀಸಲ್ ಮೋಟರ್ ಸಾಲ ತೆಗೆದುಕೊಳ್ಳುವುದಕ್ಕೆ ಹಕ್ಕು ಇರುತ್ತದೆ. ನಾವು ಎಲೆಕ್ಟ್ರಿಸಿಟಿ ಕೊಡಿ ಅಂದರೆ ವಿದ್ಯು-ಚ್ಛಕ್ತಿ ಇಲ್ಲ. ಅವನಿಗೆ ವಿದ್ಯುಚ್ಛಕ್ತಿಯನ್ನು ಒದಗಿಸದೆ, ಅವನು ಅರ್ಜಿ ಹಾಕಿಕೊಂಡು ಆರು ತಿಂಗಳು ಒಂದು ವರ್ಷವಾದ ಮೇಲೆ ಆ ರೀತಿ ಹೇಳುತ್ತಾರೆ.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದಹಾಗೆ ಕೆ.ಇ.ಬಿ. ಯವರಿಂದ ಬರೆಸಿಕೊಂಡು ಬನ್ನಿ ಆಮೇಲೆ ಡೀಸಲ್ ಪಂಪ್‌ಸೆಟ್‌ಗೆ ಸಾಲ ಕೊಡುತ್ತೇವೆಂದು ನಾವು ಅಂದಿಲ್ಲ; ಕೊಡುತ್ತೇವೆ.

ಶ್ರೀ ಎಸ್. ಕೃಷ್ಣಪ್ಪ:- ಮಾನ್ಯ ಅಧ್ಯಕ್ಷರೆ, ನಾನು ಒಪ್ಪಿಕೊಳ್ಳುತ್ತೇನೆ. ಆ ತರಹ ಇದ್ದರೆ ನನ್ನ ಒಪ್ಪಿಗೆ ಇದೆ. ಏಕೆಂದರೆ ನಾನು ಹಿಂದಿನಿಂದ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ. ನಾನು ಅದರಲ್ಲಿ ಆರು ವರ್ಷ ಸರ್ವೀಸ್ ಮಾಡಿದವನು. 20 ವರ್ಷಗಳ ಕಾಲ ಕೋ-ಆಪರೇಟಿವ್‌ನಲ್ಲಿದ್ದೆ. ಈಗ ಆ ತರಹ ಇದ್ದರೆ ನನಗೆ ಬಹಳ ಸಂತೋಷ. ಮಂತ್ರಿಗಳು ಸಾಲವನ್ನು ಕೇಳಿದವರಿಗೆ ಕೊಟ್ಟರೆ ನನ್ನದೇನೂ ಅಭ್ಯಂತರ ಇಲ್ಲ. ತಾವೇನು 9 ಪರ್ಸೆಂಟ್ ಸಾಲವನ್ನು ಹಿಂದಿರುಗಿಸಬೇಕೆಂದು ಹೇಳಿದ್ದೀರಿ, ಅದನ್ನು ರೈತರು ವಾಪಸ್ಸು ಕೊಟ್ಟಿದ್ದಾರೆ. ಅಂಥವರಿಗೆ ತಕ್ಷಣಕ್ಕೆ ಆ ದುಡ್ಡನ್ನು ಕಟ್ಟಿಕೊಡುವಂತಹ ವ್ಯವಸ್ಥೆ-ಯಾಗಬೇಕು. ಏಕೆಂದರೆ ಇನ್ನು ರೀಇಂಬರ್ಸ್ ಆಗಿಲ್ಲ. ಆ ಸಬ್ಸಿಡಿ ಅಮೌಂಟ್ ಏನಿದೆ ಆ ಇಂಟರೆಸ್ಟ್ ಸಬ್ಸಿಡಿ ಅಮೌಂಟ್‌ನ್ನು ದಯವಿಟ್ಟು ಕೊಡಿಸಬೇಕೆಂದು ಹೇಳಿ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಫಾರೆಸ್ಟ್, ಇದರ ವಿಪರ್ಯಾಸ ಹೇಗಿದೆಯೆಂದರೆ ಕಾಡಿನಲ್ಲಿರುವ ಗಂಧದ ಮರಗಳು ಹೋಗುತ್ತವೆ. ಕಾಡಿನಲ್ಲಿರುವ ಸಾಗುವಾನಿ ಮರಗಳು ಹೋಗುತ್ತವೆ. ಅದನ್ನು ಕೇಳುವುದಕ್ಕೆ ಕಷ್ಟ. ಹಳ್ಳಿಯ ರೈತ ಒಬ್ಬ ಆಲದ ಮರ ಕಡಿದುಬಿಟ್ಟರೆ, ಹಳ್ಳಿಯ ರೈತ ನೇಗಿಲಿಗೆ ಒಂದು ಗೊಬ್ಬಳಿಮರ ಕಡಿದುಬಿಟ್ಟರೆ ಹಿಡಿದುಕೊಳ್ಳುತ್ತಾರೆ. ಒಂದು ಮರ ಕಡಿಯಿರಿ ಒಂದು ಸಸಿ ನೆಡಿರಿಯೆಂದು ಹೇಳು-ತ್ತಾರೆ. ರೈತ ಸಸಿಯನ್ನು ನೆಡುತ್ತಿರುತ್ತಾನೆ. ಏಕೆಂದರೆ ಅದು ಅವನಿಗೆ ಬೇಕೇ ಬೇಕು. ಅವನು ಆ

ಮರವನ್ನು ಕಡಿದ ತಕ್ಷಣ ಫಾರೆಸ್ಟ್‌ನವರು ಅಲ್ಲಿಗೆ ಬರುತ್ತಾರೆ. ಅದೇ ತಾಲ್ಲೂಕಿನಲ್ಲಿರತಕ್ಕ ಫಾರೆಸ್ಟ್‌ನಲ್ಲಿ ಕಳ್ಳತನವಾಯಿತೆಂದರೆ, ನಾನು ಏನು ಮಾಡಲಿ ಸ್ವಾಮಿ ರಾತ್ರಿ ಹೊತ್ತು ಕಡಿದುಕೊಂಡು ಹೋಗುತ್ತಾರೆಂದು ಹೇಳುತ್ತಾರೆ. ರೈತ ತನ್ನ ಜಮೀನಿನಲ್ಲಿ ಹಗಲುಹೊತ್ತು ಕಡಿದುಕೊಂಡು ಬಂದರೆ ಹಿಡಿಯುತ್ತಾರೆ. ಇವರ ಕಾಟದಿಂದ ರೈತ ರಾತ್ರಿಹೊತ್ತು ಮರ ಕಡಿಯಬೇಕಾಗಿದೆ. ರಾತ್ರಿಹೊತ್ತು ರೈತ ಮರ ಕಡಿಯುತ್ತಾನೆಂದು ಇವನನ್ನು ಕಾಯುತ್ತಾರೆ. ಫಾರೆಸ್ಟ್‌ನಲ್ಲಿ ಕಡಿಯುವವರನ್ನು ಬಿಟ್ಟುಬಿಡುತ್ತಾರೆ. ರೈತ ಎಲ್ಲಿಯಾದರೂ ಮರ ಹೊತ್ತುಕೊಂಡು ಹೋಗುತ್ತಾನೋ ಎಂದು ಕಾಯುತ್ತಿರುತ್ತಾರೆ. ಇದು ಹೋಗಬೇಕು. ಗ್ರಾಮೀಣ ಪ್ರದೇಶದಲ್ಲಿರತಕ್ಕ ರೈತ ತನ್ನ ಜಮೀನಿನಲ್ಲಿ ಏನು ಮರ ಬೆಳೆದಿದ್ದಾನೆ ಅದನ್ನು ಕಡಿದರೆ ಏಕೆ ಹಿಡಿಯಬೇಕು? ಸರ್ಕಾರೀ ಜಮೀನಿನಲ್ಲಿ ಇರತಕ್ಕ ಮರಗಳನ್ನು ಕಡಿದಿದ್ದರೆ ಹಿಡಿದುಕೊಳ್ಳಲಿ ಬೇಡವೆಂದು ಹೇಳುವುದಿಲ್ಲ.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿದ್ದರು)

ಆದರೆ ತನ್ನ ಜಮೀನಿನಲ್ಲಿ ಕಡಿದಂತಹ ಮರಗಳನ್ನು ತೆಗೆದುಕೊಂಡು ಹೋಗುವಾಗ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಕೊಡತಕ್ಕ ಕಿರುಕುಳವನ್ನು ತಪ್ಪಿಸಬೇಕು. ಫಾರೆಸ್ಟ್‌ನಲ್ಲಿ ಕಡಿಯುವವರನ್ನು ಹಿಡಿಯಿರಿ. ಅಲ್ಲಿ ಒಳ್ಳೊಳ್ಳೆಯ ಮರಗಳು ಇವೆ, ಅಲ್ಲಿ ಕಳ್ಳ ಸಾಗಾಣಿಕೆಯಾಗುತ್ತದೆ ಅಲ್ಲಿ ಹಿಡಿಯಿರಿ. ಆದರೆ ಗ್ರಾಮೀಣ ಪ್ರದೇಶದನ್ನು ಯಾರು ರೈತ ತನ್ನ ಜಮೀನಿನಲ್ಲಿ ಬೆಳೆದ ಮರವನ್ನು ಕಡಿದು ತೆಗೆದುಕೊಂಡು ಹೋಗುತ್ತಾನೊ ಅವನನ್ನು ಹಿಡಿಯಬೇಡಿ. ಅವರು ತಮಗೆ ಬೇಕಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಡಬೇಕು. ರೈತ ಏನಾದರೂ ಮರವನ್ನು ತಂದು ಸಾ ಮಿಲ್‌ಗೆ ಹಾಕಿದರೆ ಅಲ್ಲಿಗೇ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬರುತ್ತಾರೆ. ಸಾಗುವಾನಿ ಮರವನ್ನು ಹಿಡಿಯುವುದಿಲ್ಲ, ಯಾರು ರೈತರು ಇರುತ್ತಾರೆ ಅವರನ್ನು ಹೋಗಿ ಹಿಡಿಯುತ್ತಾರೆ. ಸಾ ಮಿಲ್‌ನಲ್ಲಿ ಹೇಳುತ್ತಾರೆ, ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಬಂದಿದ್ದರು ನಿನ್ನ ಮರವನ್ನು ಕೊಯ್ಯಬೇಕಾದರೆ ಒಂದು ಕ್ಯುಬಿಕ್‌ಮೀಟರ್‌ಗೆ ಇಷ್ಟು ಜಾಸ್ತಿಯಾಗುತ್ತದೆಂದು ಹೇಳುತ್ತಾರೆ. ಇಲ್ಲದಿದ್ದರೆ ಸಾ ಮಿಲ್‌ನವರು ಏನಾದರೂ 500 ಅಥವಾ ಸಾವಿರ ರೂಪಾಯಿ ಫೈನ್ ಕಟ್ಟಿದ್ದರೆ ಅದನ್ನು ರೈತನ ಮೇಲೆ ಹಾಕುತ್ತಾರೆ. ನಾನು ಗ್ರಾಮೀಣ ಪ್ರದೇಶದ ಸ್ಥಿತಿಯನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಆ ಕಿರುಕುಳ ಹೋಗಬೇಕಾದರೆ ಕಾನೂನಿಗೆ ತಿದ್ದುಪಡಿ ತರಬೇಕು. ಗ್ರಾಮೀಣ ಪ್ರದೇಶದಲ್ಲಿರತಕ್ಕ ರೈತ ತನ್ನ ಸ್ವಂತಕ್ಕೆ ಒಂದು ಇಟ್ಟಿಗೆಗೂಡು ಬೇಯಿಸಲಿಕ್ಕೆ ಒಂದು ಲಾರಿ ಸೌದೆ ತಂದರೆ ಹಿಡಿದುಕೊಳ್ಳುತ್ತಾರೆ. ರೈತರಿಗೆ ಆಗತಕ್ಕ ಕಿರುಕುಳವನ್ನು ತಪ್ಪಿಸಬೇಕೆಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ತಾವು ಈಗಾಗಲೇ ಬಹಳಷ್ಟು ಸಮಯವನ್ನು ಕೊಟ್ಟಿದ್ದೀರಿ, ನಾನು ಈಗ ಪೋಲೀಸ್ ಇಲಾಖೆಯ ಬಗ್ಗೆ ಒಂದು ಮಾತು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಮ್ಮಲ್ಲಿ ದಕ್ಷತೆ ಹೋಗಿದೆ. ನಿನ್ನೆ ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಇನ್ನಿತರ ಕೆಲವು ಮಿತ್ರರು ಬಹಳ

ಚೆನ್ನಾಗಿ ಮಾತನಾಡಿದರು. ಕಾರಣ ಏನೆಂದರೆ, ಪೋಲೀಸ್ ಕಾನ್ಸ್‌ಟೇಬಲ್ ಆಗಿದ್ದವರು ಈಗ ಪೋಲೀಸ್ ಸಬ್‌ಇನ್ಸ್‌ಪೆಕ್ಟರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್‌ಗಳಾಗಿದ್ದಾರೆ. ನಮ್ಮಲ್ಲಿ ಹಳೆಯ ಒಂದು ಮಾತು ಇದೆ. "ಏನೂ ಹೇಳಿದರೂ ಅದು ಮಾತ್ರ ನಾನು ಬಿಡುವುದಿಲ್ಲ ಅಂತ" ದಕ್ಷತೆ ಹೆಚ್ಚಬೇಕು. ದಕ್ಷತೆ ಹೆಚ್ಚಬೇಕಾದರೆ ಏನು ಮಾಡಬೇಕು? ಒಬ್ಬ ಸಬ್‌ಇನ್ಸ್‌ಪೆಕ್ಟರ್ ಸರಿಯಾದವರನ್ನು ಹಾಕಿ-ಕೊಳ್ಳಬೇಕೆಂದು ಹುಡುಕುತ್ತಿದ್ದೇವೆ ಯಾರೂ ಸರಿಯಾದವರು ಬರುವುದಿಲ್ಲ. ಮಾನ್ಯ ಪುಟ್ಟಣ್ಣಯವರು ಹೇಳಿದಹಾಗೆ ಬೆದರುಬೊಂಬೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಅದೇನು ಇಲ್ಲವೆಂದು ಹೇಳುವು-ದಿಲ್ಲ. ಇವತ್ತು ದಕ್ಷತೆಯ ಮೇಲೆ ಯಾರಿಗೂ ಪ್ರಮೋಷನ್ ಕೊಡುತ್ತಿಲ್ಲ. ನೀವು ಬ್ಯಾಕ್‌ಲಾಗ್ ಮಾಡಿ ನಾನು ಬೇಡವೆಂದು ಹೇಳುವುದಿಲ್ಲ. ಆದರೆ ದಕ್ಷತೆಯ ಮೇಲೆ ಪ್ರಮೋಷನ್ ಕೊಡುವಂತಹ ವ್ಯವಸ್ಥೆಯಾಗಬೇಕು. ಪೋಲೀಸ್ ಇಲಾಖೆಯಲ್ಲಿ ಬಟ್ಟೆಯನ್ನು ಕೊಟ್ಟಿದ್ದೀರಿ. ಅದರಲ್ಲಿ ಎರಡು ಸ್ಟಾರ್ ಮೂರು ಸ್ಟಾರ್ ಇದೆಲ್ಲ ಇವೆ. ನನಗೆ ಅನುಮಾನ ಬರುತ್ತದೆ, ಕೆ.ಎಸ್.ಆರ್.ಟಿ.ಸಿ. ನೌಕರರು ಇರು-ತ್ತಾರೆ ಅವರೂ ಎರಡು ಸ್ಟಾರ್ ಹಾಕಿಕೊಂಡಿರುತ್ತಾರೆ. ಇನ್ನು ಯಾವುದಾದರೂ ಒಂದು ಫ್ಯಾಕ್ಟರಿ ನೌಕರ ಅವನು ಎರಡು ಸ್ಟಾರ್ ಹಾಕಿಕೊಂಡಿರುತ್ತಾನೆ. ಇದು ಹೋಗಬೇಕು. ನಮ್ಮಲ್ಲಿರತಕ್ಕ ಪೋಲೀಸರ ಡ್ರೆಸ್ ಏನಿದೆ ಅದು ನಮಗೆ ಅನುಮಾನ, ಕೆ.ಎಸ್.ಪಿ. ಅಂದರೆ ಕರ್ನಾಟಕ ಸ್ಟೇಟ್ ಪೋಲೀಸ್ ಅಂತ ಬರುತ್ತದೆ. ಇಲ್ಲದಿದ್ದರೆ ಏನಾಗುತ್ತದೆಯೆಂದರೆ, ಪೋಲೀಸ್‌ನವನು, ಕೆ.ಎಸ್.-ಆರ್.ಟಿ.ಸಿ.ಯವನು, ಹೋಮ್ ಗಾರ್ಡ್‌ನವನು ಅಥವಾ ಇನ್ನಾವುದಾದರೂ ಫ್ಯಾಕ್ಟರಿಯವನು ಎನ್ನತಕ್ಕದ್ದು ಅನುಮಾನವಾಗುತ್ತದೆ. ದಯಮಾಡಿ ಪೋಲೀಸ್‌ನ ವ್ಯವಸ್ಥೆ ಇದೆಯಲ್ಲ ಅದರಲ್ಲಿ ದಕ್ಷತೆಯ ಮೇಲೆ ಅವರಿಗೆ ಪ್ರಮೋಷನ್ ಕೊಡತಕ್ಕದ್ದು, ಜೊತೆಗೆ ಡ್ರಸ್‌ನ್ನು ಬದಲಾವಣೆ ಮಾಡ-ಬೇಕೆಂದು ಕೇಳಿಕೊಳ್ಳುತ್ತಾ, ಗ್ರಾಮೀಣ ಪ್ರದೇಶಗಳಲ್ಲಿ 3 ಕಿಲೋಮೀಟರ್‌ನಿಂದ ಹಿಡಿದು 20 ಕಿಲೋ ಮೀಟರ್‌ರವರೆಗೂ ಒಂದು ಪೋಲೀಸ್ ಸ್ಟೇಶನ್ ಇರುತ್ತದೆ. ಹಳ್ಳಿಯ ಜನರು ಇವತ್ತು ಏನಾದರೂ ಕಂಪ್ಲೈಂಟ್ ಕೊಟ್ಟರೆ ಪೋಲೀಸ್‌ನವರು ಹೋಗುವುದೇ ಮೂರು ದಿವಸಕ್ಕೆ. ಮೂರು ದಿವಸಕ್ಕೆ ಹೋದರೆ ಅವನ ಶಕ್ತಿಯೇ ಹೊರಟುಹೋಗಿರುತ್ತದೆ ಅವನು ಏನೂ ಮಾಡುವ ಹಾಗೆ ಇಲ್ಲ. ಆದ್ದ-ರಿಂದ ಗ್ರಾಮೀಣ ಪ್ರದೇಶಗಳಲ್ಲಿರತಕ್ಕ ಪೋಲೀಸ್ ಸ್ಟೇಶನ್‌ಗಳಿಗೆ ಹೆಚ್ಚಿಗೆ ಪೋಲೀಸರನ್ನು ಕೊಡ-ಬೇಕಾಗುತ್ತದೆ. ಇಲ್ಲದಿದ್ದರೆ ಮಾನ್ಯ ಪುಟ್ಟಣ್ಣಯ್ಯನವರು ಹೇಳಿದ ಹಾಗೆ ತಾಲ್ಲೂಕು ಆಫೀಸಿಗೆ ಒಂದು ಅರ್ಜಿ ಬರೆದರೆ ಆ ಸರ್ವೇಯರ್ ಲಿಟಿಗೇಷನ್‌ನಲ್ಲಿ ಬರುವುದಿಲ್ಲ ಅವನನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಹೀಗಾಗಿ ಗ್ರಾಮೀಣ ಪ್ರದೇಶಗಳ ಪೋಲೀಸ್ ಸ್ಟೇಶನ್ ಸ್ಥಿತಿ ಹೇಗಿದೆಯೆಂದರೆ, ಅಲ್ಲಿ ಹೇಳುವವರು ಕೇಳುವವರು ಇರುವುದಿಲ್ಲ. ಈ ಸಿಟಿಗಳಲ್ಲಿ ಎಲ್ಲಾ ಬುದ್ಧಿವಂತರು ಇರುತ್ತಾರೆ ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲಾ ದಡ್ಡರು. ಅಲ್ಲಿ ಏನು ಮಾಡುತ್ತಾರೆಂದರೆ, ಇದನ್ನು ಒಪನ್ ಆಗಿ ಹೇಳಿದರೆ ತಪ್ಪೆ. ಇರಲಿ, ಇದನ್ನೆಲ್ಲ ಅಧಿಕಾರಿಗಳು ಚೆಕ್ ಮಾಡಬೇಕಾಗುತ್ತದೆ. ಸ್ಟೇಶನ್‌ಗೆ ಹೋಗಿ ರಾತ್ರಿ ಹೊತ್ತು ನೋಡಬೇಕಾಗುತ್ತದೆ. ಅವರು ಯಾವ ಮಟ್ಟದಲ್ಲಿರುತ್ತಾರೆ ಎಂದು ಕಂಪ್ಲೈಂಟ್ ಕೊಟ್ಟವರು ಯಾವ ತರಹ ಇರುತ್ತಾರೆ, ಪೋಲೀಸ್ ಸ್ಟೇಶನ್‌ನಲ್ಲಿರತಕ್ಕವರು ಯಾವ ತರಹ

ಇರುತ್ತಾರೆಂಬುದನ್ನು ನೋಡಬೇಕಾಗುತ್ತದೆ. ಅಲ್ಲಿ ಇರುವುದು ಅವ್ಯವಸ್ಥೆ. ಅವ್ಯವಸ್ಥೆಯ ಬಗ್ಗೆ ಚೆನ್ನಾಗಿ ಮಾತನಾಡಿದ್ದಾರೆ. ಸ್ವಲ್ಪ ಘನತೆ ಗೌರವ ಉಳಿಯಬೇಕಾದರೆ, ಈಗ ನಾವೇನು ಪ್ರಾಹಿಬಿಷನ್ ಅದು ಇದು ಎಂದು ಹೇಳುತ್ತೇವೆ, ಕೊನೆಗೆ ಅಲ್ಲಿಯಾದರೂ ಪ್ರಾಹಿಬಿಷನ್ ಜಾರಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕು. ನಾನು ಎಷ್ಟೋ ಸಾರಿ ನೋಡಿದ್ದೇನೆ ನೊಂದಿದ್ದೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಬಿಡಿಸಿ ಹೇಳಿ, ಏನು ಕುಡಿಯುತ್ತಿರುತ್ತಾರೆಯೇ? ಪ್ರಾಹಿಬಿಷನ್ ಅಂದರೆ ಏನು ಪ್ರಾಹಿಬಿಷನ್?

ಶ್ರೀ ಎಸ್. ಕೃಷ್ಣಪ್ಪ:- ಪ್ರಾಹಿಬಿಷನ್ ತರಬೇಕೆಂದು ಹೇಳುತ್ತಿದ್ದೀರಿ, ಅಲ್ಲಿಯಾದರೂ ಪ್ರಾಹಿ-ಬಿಟ್ ಮಾಡಿ ಅಂತ. ದಕ್ಷತೆ ಹೆಚ್ಚಿಸಬೇಕಾದರೆ ಈ ಕೆಲಸ ಮಾಡಬೇಕಾಗುತ್ತದೆ.

ಶ್ರೀ ಬಿ.ಎ. ಮೊಯಿದ್ದೀನ್:- ಮಾನ್ಯ ಕೃಷ್ಣಪ್ಪನವರು ಹೇಳಿದ್ದುದು ಮಂತ್ರಿಗಳಿಗೆ ಅರ್ಥವಾಗಿದೆ ನಮಗೆಲ್ಲರಿಗೂ ಅರ್ಥವಾಗಿದೆ, ಅದನ್ನು ಬಿಡಿಸಿ ಹೇಳುವ ಅವಶ್ಯಕತೆ ಏನಿದೆ?

ಶ್ರೀ ಎಸ್. ಕೃಷ್ಣಪ್ಪ:- ನಾನು ಬಿಡಿಸಿ ಹೇಳುತ್ತಿದ್ದೆ, ಅದರ ಮೇಲೆ ಬರೀ ಚರ್ಚೆ ನಡೆಯುತ್ತಿದೆ. ಇನ್ನು ಹೇಳಿದರೆ, ಏನಪ್ಪ ಹೇಳಿದ್ದನ್ನೆ ಹೇಳುತ್ತಿದ್ದಾರೆ ಎಂದು ಮಾನ್ಯ ಪುಟ್ಟಣ್ಣಯ್ಯನವರು ಏನಾದರೂ ತಿಳಿದುಕೊಂಡಾರು ಎಂದು ನಾನು ಬಾಯಿಬಿಡುತ್ತಿಲ್ಲ. ಅದು ಹಾಗೆಯೇ ಇರಲಿ ಎಂದು ಅಷ್ಟೆ. ದಯವಿಟ್ಟು ಈ ಪೋಲೀಸ್‌ಸ್ಟೇಷನ್‌ಗಳಲ್ಲಿನ ದಕ್ಷತೆಯನ್ನು ಹೆಚ್ಚಿಸುವಂತಹ ವ್ಯವಸ್ಥೆಯಾಗಬೇಕು. ದಕ್ಷತೆಯನ್ನು ಹೆಚ್ಚಿಸುವಂತಹ ವ್ಯವಸ್ಥೆಯಾಗದೇ ಹೋದರೆ ಒಬ್ಬೊಬ್ಬರಿಗೊಬ್ಬರಿಗೆ ಅಲ್ಲೇ ಕಚ್ಚಾಟ-ವಾಗುತ್ತದೆ. ನಾನು ಕೆಲವು ದಿವಸಗಳ ಹಿಂದೆ ಕೆಲವು ಅಧಿಕಾರಿಗಳನ್ನು ಭೇಟಿ ಮಾಡಿದಂತಹ ಸಂದ-ರ್ಭದಲ್ಲಿ ಕೇಳಿದೆ, ಏನು ಈ ತರಹ ಇರುತ್ತಾರೆ ಅಂತ ಕೇಳಿದ್ದಕ್ಕೆ ಅವರು ಏನು ಹೇಳುತ್ತಾರೆಂದರೆ, ಪೋಲೀಸಿನವರ ರಿಕ್ರೂಟ್‌ಮೆಂಟ್ ಆಗಿಲ್ಲ, ಸಬ್‌ಇನ್ಸ್‌ಪೆಕ್ಟರುಗಳ ರಿಕ್ರೂಟ್‌ಮೆಂಟ್ ಆಗಿಲ್ಲವೆಂದು ಹೇಳುತ್ತಾರೆ. ದಯವಿಟ್ಟು ಸರ್ಕಾರ ಇದರ ಕಡೆಗೆ ಗಮನ ಹರಿಸಬೇಕು ಹಾಗು ಅವರ ದಕ್ಷತೆಯನ್ನು ಹೆಚ್ಚಿಸಲಿಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಅಕೌಂಟಬಲಿಟಿ ಬಗ್ಗೆ ಪೋಲೀಸ್‌ನವರನ್ನು ಕೇಳಿದರೆ ಅವರು ಹೇಳುತ್ತಾರೆ, ನಮಗೆ ಇರತಕ್ಕವರು ನಾಲ್ಕು ಜನ ಪೋಲೀಸಿನವರು ನಾವೇನು ಮಾಡೋಣವೆನ್ನುತ್ತಾರೆ. ಜಿಲ್ಲೆಯಲ್ಲಿ ಎಲ್ಲಿಯಾದರೂ ಜಗಳವಾದರೆ ಡೆಪ್ಯುಟಿ ಕಮೀಷನರ್ ಮತ್ತು ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರನ್ನು ಜವಾಬ್ದಾರರನ್ನಾಗಿ ನಾವು ಮಾಡುತ್ತೇವೆ. ಒಂದು ಸ್ಟೇಷನ್ ವ್ಯಾಪ್ತಿಯಲ್ಲಿ ಆಗತಕ್ಕಂಥ ಜೂಜಾಗಿರಬಹುದು, ಮಟ್ಕಾ ಆಗಿರಬಹುದು, ಒಂದಂಕಿ ಲಾಟರಿ ಆಗಿರಬಹುದು, ಇದನ್ನು ಯಾರು ಕೊಡುವವರು? ಇದು ಪೋಲೀಸ್‌ಸ್ಟೇಷನ್‌ಗೆ ಗೊತ್ತಿಲ್ಲದೆ ಏನೂ ಆಗುವುದಿಲ್ಲ. ಎಲ್ಲ ಅವರಿಗೆ ಗೊತ್ತಿದ್ದೇ ಆಗುತ್ತದೆ. ಹೊರಗಡೆಯವರು ಬಂದು ಹಿಡಿಯುತ್ತಾರೆ. ಆದರೆ ಇಲ್ಲಿಯವರಿಗೆ ಗೊತ್ತಿರುವುದಿಲ್ಲ. ಸಬ್ ಇನ್ಸ್‌ಪೆಕ್ಟರ್ ಅವರ ಗಮನಕ್ಕೇ ಬಂದಿಲ್ಲವೆಂದರೆ ಅದು ಪೋಲೀಸ್ ಕಾನ್ಸ್‌ಟೇಬಲ್ ಗಮನಕ್ಕೆ ಬಂದಿರುತ್ತದೆ. ಇದು ಒಂದು ರೀತಿಯ ಹೊಂದಾಣಿಕೆ. ಈ ಹೊಂದಾಣಿಕೆ ಮತ್ತು ಅದಕ್ಷತೆ ಹೆಚ್ಚಾಗುತ್ತಾ ಹೋದರೆ ಅಶಾಂತಿಗೆ ಅವಕಾಶವಾಗುತ್ತದೆ. ತಾವು

ನೋಡಿರಬಹುದು, ಈಗ ವೀರಪ್ಪನ್ ಹಾಗೆ ಮಾಡಿದ, ಹೀಗೆ ಮಾಡಿದ ಎಂದು ಹೇಳುತ್ತಾರೆ. ಕಾರಣ ಇಷ್ಟೇ. ಹಿಂದೆ ಏನೋ ಸರ್ಕಾರ ಮಾಡಿತ್ತು ಪೋಲೀಸಿನವರಿಗೆ 10 ಕೆ.ಜಿ. ಅಕ್ಕಿ ಫ್ರೀಯಾಗಿ ಕೊಡ-ಬೇಕು ಅಂತ. ಅವರಿಗೆ ಏನು ಸೌಲಭ್ಯಗಳನ್ನು ಕೊಡಬೇಕೋ ಕೊಡಿ, ಅದನ್ನು ನಾವು ಬೇಡ ಎಂದು ಹೇಳುವುದಿಲ್ಲ. ಅವರಿಗೆ ಹೆಚ್ಚಿನ ಸೌಕರ್ಯ ಕೊಡಿ, ಭತ್ಯೆ ಕೊಡಿ, ದಕ್ಷತೆ ಹೆಚ್ಚಿಸಬೇಕಾದರೆ ಏನು ಬೇಕೋ ಅದನ್ನು ಕೊಡಿ. ಏಕೆಂದರೆ ಅವರು ಕರಪ್ಟ್ ಆಗಿ ಬಿಟ್ಟರೆ ಇನ್ನು ನಾವು ಸರಿ ಮಾಡುವುದು ಯಾರನ್ನು? ಇಲ್ಲದೇ ಹೋದರೆ ನಮ್ಮಲ್ಲಿ ಹಳ್ಳಿ ಕಡೆ ಹೇಳುವ ಹಾಗೆ "ಬೇಲಿ ಎದ್ದು ಹೊಲ ಮೇಯ್ದ ಹಾಗೆ" ಆಗುತ್ತದೆ. ಆದ್ದರಿಂದ ಅವರಿಗೆ ಹೆಚ್ಚಿನ ಸೌಕರ್ಯಗಳನ್ನು ಕೊಡಿ. ನಿನ್ನೆ ಒಬ್ಬರು ಹೇಳುತ್ತಿದ್ದರು "ನನಗೆ ಇರತಕ್ಕಂಥಾದ್ದು ಇಷ್ಟೆ. ಇದರಲ್ಲಿ ನನಗೇನೂ ಅವಕಾಶವೇ ಇಲ್ಲ. ನಾನು ಮುಂದೆ ಬರಲಾರೆ, ನಾನು ಬದುಕುವುದಕ್ಕೆ ಆಗುವುದಿಲ್ಲ" ಎಂದು. ಆದ್ದರಿಂದ ಅವರಿಗೆ ಸೌಕರ್ಯ ಕೊಟ್ಟರೆ ಅವರು ಮುಂದೆ ಬರುತ್ತಾರೆ. ಹಾಗೆ ಮಾಡಿ ಅವರಲ್ಲಿ ದಕ್ಷತೆಯನ್ನು ಹೆಚ್ಚಿಸುವ ಕೆಲಸ ಆಗಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಂಡು ಹೇಳುತ್ತೇನೆ.

ಇನ್ನು ಸಭಾಧ್ಯಕ್ಷರೇ, ಕೆ.ಎಸ್.ಆರ್.ಟಿ.ಸಿ. ಬಗ್ಗೆ ಒಂದೇ ಒಂದು ಮಾತು ಆಡುವುದಕ್ಕೆ ನಾನು ಇಚ್ಛೆಪಡುತ್ತೇನೆ. ತಮಗೆ ಗೊತ್ತಿದೆ ಈ ಕೆ.ಎಸ್.ಆರ್.ಟಿ.ಸಿ. ಒಂದೊಂದು ಕಡೆ ಒಂದೊಂದು ತರಹ ಇದೆ. ಈಗ ನಮ್ಮದು ಕೇವಲ 24 ಕಿಲೋಮೀಟರ್ ಇರತಕ್ಕಂಥ ಒಂದು ಊರು. ಇದು ಪಟ್ಟಣಕ್ಕೆ ಬಹಳ ಹತ್ತಿರ ಇರತಕ್ಕಂಥ ಊರು. ಇದು ಯಾವುದೋ ಕಾಲದಲ್ಲಿ ಕೆ.ಎಸ್.ಆರ್.ಟಿ.ಸಿ. ಯವರು ರಾಷ್ಟ್ರೀಕೃತ ಮಾಡಿದಂಥ ರೂಟು, ಹಿಂದೆ ಅಲ್ಲೇನು ಹತ್ತು-ಹದಿನೈದು ಬಸ್ಸುಗಳು ಓಡುತ್ತಿದ್ದವು, ಇವತ್ತೂ ಅಷ್ಟೇ ಓಡುತ್ತಿವೆ. ಹೀಗಾದರೆ ಜನ ಪ್ರಯಾಣ ಮಾಡುವುದು ಹೇಗೆ? ಅಲ್ಲಿ ಅವರ ಸ್ಥಿತಿ ಏನು? ಇನ್ನು ಟಾಪ್‌ನಲ್ಲಿ ಹೋಗಿ ಕುಳಿತುಕೊಂಡರೆ ಆಕ್ಸಿಡೆಂಟ್ ಆಗುತ್ತಲೇ ಇರುತ್ತವೆ. ಇನ್ನು ಒಂದೊಂದು ಸಾರಿ ಬಸ್ಸು ಬಂದರೆ ಬಂತು, ಇಲ್ಲದಿದ್ದರೆ ಬಸ್ಸು ಬರುವುದೇ ಇಲ್ಲ. ಇಲ್ಲದಿದ್ದರೆ ಮೂರು ಬಸ್ಸುಗಳು ಒಟ್ಟಿಗೇ ಬರುತ್ತವೆ. ಇನ್ನು ಅಲ್ಲಿ ಬಸ್‌ಸ್ಟ್ಯಾಂಡಿನಲ್ಲಿ ನಮ್ಮಂಥವರಿಗೆ ಹೋಗುವುದಕ್ಕೇ ಆಗುವುದಿಲ್ಲ. ನಮ್ಮನ್ನು ಜನ ಕೇಳುತ್ತಾರೆ ಏನಪ್ಪ ಮಾಡುತ್ತಿದ್ದೀರಿ? ಏಕೆ ನೀವು ಬಸ್ಸುಗಳನ್ನು ಹಾಕಿಸಿಲ್ಲ ಎಂದು. ನಿಜ ನನಗೆ ಗೊತ್ತಿದೆ, ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ಮೀಟಿಂಗ್ ಕರೆದಿದ್ದರು ಮಾತನಾಡಿದ್ದೇವೆ. ಸಾಕಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ, ಅವರದ್ದೇ ಆದ ಒಂದು ರಿಪೋರ್ಟ್ ಕೂಡ ಇದೆ. ಅವರಿಗೆ ಇದರ ಪೂರ್ಣ ಜ್ಞಾನ ಇದೆ, ಪರಿಪಕ್ವವಾದಂಥ ನಾಲೆಡ್ಜ್ ಇದೆ. ಅವರು ಇದನ್ನು ಉತ್ತಮವಾಗಿ ಮಾಡಿಕೊಡುತ್ತಾರೆ. ಆದರೆ, ಕೆಲವರಿಗೆ ಹೆದರಿಕೊಂಡು ನಾವು ಇವತ್ತು ಸಾರ್ವಜನಿಕರಿಗೆ ಅನುಕೂಲ, ಸೌಕರ್ಯವನ್ನು ಒದಗಿಸಿಕೊಡುತ್ತಿಲ್ಲ. ಕೇವಲ ಕಾರ್ಮಿಕರಿಗೆ ಹೆದರಿಕೊಂಡು ನಾವು ಸಾರ್ವಜನಿಕರಿಗೆ ಸೌಕರ್ಯಗಳನ್ನು ಕೊಡುವುದಕ್ಕೆ ಇಚ್ಛೆಪಡುತ್ತಿಲ್ಲ. ಇದನ್ನು ನೀವು 4 ವಿಭಾಗಗಳಾಗಿ ವಿಂಗಡಣೆ ಮಾಡಬೇಕೆಂದು ಯಾರೋ ವಿರೋಧ ಮಾಡಿದರು. ಇಲ್ಲಿ 60 ಸಾವಿರ ನೌಕರರು ಇದ್ದಾರೆ ಎಂದು ಹೇಳುತ್ತಾರೆ. ಎಷ್ಟು ಜನ ಸಸ್ಪೆಂಡ್ ಆಗಿದ್ದಾರೆ, ಎಷ್ಟು ಜನರ ಮೇಲೆ ಎನ್‌ಕ್ವೈರಿ ಆಗುತ್ತಿದೆ ಎಂದು ಕೇಳಿದರೆ, 40 ಸಾವಿರ ಜನರ ಮೇಲೆ ಎನ್‌ಕ್ವೈರಿ ಇದೆ. ಇದು

ಯಾವ ತರಹ? ಇವರಿಗೆ ಏಕೆ ಹೆದರಿಕೊಳ್ಳಬೇಕು? ಇವರು ಪ್ರತಿಭಟನೆ ಮಾಡುತ್ತಿದ್ದಾರೆ ಎಂದರ್ಥ. ಕೆ.ಎಸ್.ಆರ್.ಟಿ.ಸಿ. ಬಂದಿದ್ದು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಕ್ಕಾಗಿ. ಇದನ್ನು ನಾನೂ ಕೂಡ ಒಪ್ಪಿಕೊಳ್ಳುತ್ತೇನೆ. ಈ ಆಸಕ್ತಿಯೇ ಹೋಗುವಾಗ, ನಾವು ಯಾರಿಗೆ ಹೆದರಿಕೊಳ್ಳ-ಬೇಕು? ಏಕೆ ನೀವು ಡಿವಿಜನ್‌ಗಳನ್ನು ಮಾಡಬಾರದು? ಈಗ ಬಸ್ಸು ಹೋಗ್ತಾ, ಹೋಗ್ತಾ ಬಸ್-ಸ್ಟ್ಯಾಂಡಿನಲ್ಲಿ ಯಾರಾದರೂ ಬಯ್ದುಬಿಟ್ಟರು ಎಂದರೆ, ಕೂಡಲೇ ರಾಜ್ಯದಾದ್ಯಂತ ಸ್ಟ್ರೈಕ್ ಶುರು-ವಾಗುತ್ತದೆ. ಎಲ್ಲೆಲ್ಲಿ ಬಸ್ಸುಗಳು ಇರುತ್ತವೆಯೋ, ಅಲ್ಲೇ ಅವುಗಳು ನಿಂತುಬಿಡುತ್ತವೆ. ಪ್ರಯಾಣಿಕರು ಏನಾಗಬೇಕು? ದಕ್ಷತೆಯನ್ನು ಹೆಚ್ಚಿಸಬೇಕಾದರೆ ಇದು ವಿಂಗಡಣೆ ಆಗಲೇಬೇಕು. ಮಂತ್ರಿಗಳು ಗಟ್ಟಿ-ಯಾಗಿದ್ದಾರೆ ಮತ್ತು ಅವರಿಗೆ ಪೂರ್ತಿ ಗೊತ್ತಿದೆ. ಅವರು ಮಾಡುತ್ತಾರೆ, ಇಲ್ಲ ಎಂದು ನಾನೇನೂ ಹೇಳುವುದಿಲ್ಲ. ಆದರೆ ಇದರಲ್ಲಿ ಬೇರೆ ಕಡೆ ಒತ್ತಡ ಬರುವಾಗ, ದಯವಿಟ್ಟು ಮಂತ್ರಿಗಳು ಅದರ ಬಗ್ಗೆ ಲಕ್ಷ್ಯ ಕೊಡದೇನೆ ಈಗ, ನೋಡಿ ಬೆಂಗಳೂರಿನಿಂದ 25 ಕಿ.ಮೀ. ವರೆಗೆ ಸಿಟಿ ಬಸ್ಸುಗಳನ್ನು ಹಾಕಿ-ದ್ದೀರಿ. ಗ್ರಾಮೀಣ ಪ್ರದೇಶದಲ್ಲಿ ಸಿಟಿಬಸ್ಸು ಇಲ್ಲ. ಏಕೆ ಹಾಕುವುದಿಲ್ಲ? ಇಲ್ಲಿ ಜನಸಂಖ್ಯೆ ಜಾಸ್ತಿ, ಒತ್ತಡ ಜಾಸ್ತಿ, ಸ್ಟ್ರೈಕ್ ಜಾಸ್ತಿ. ಅಲ್ಲಿ ಕೇಳುವವರಿಲ್ಲ. ನಾವು ಲೀಡರ್‌ಗಳಾದ ಮೇಲೆ ಅಲ್ಲಿ ಹೋಗಿ ಸಾಮಾನ್ಯ ಜನರ ಎದುರಿಗೆ ನಿಂತು ಕೊಳ್ಳುವ ಹಾಗಿಲ್ಲ. ಆದ್ದರಿಂದ ಇದಕ್ಕೂ ಕಾಂಪಿಟೇಶನ್ ಆಗಲಿ. ಈಗ ಬೇರೆ ಕಡೆ ಡಿವಿಜನ್‌ಗಳನ್ನು ಮಾಡಿದ್ದಾರೆ. ಪ್ರೈವೇಟ್ ಬಸ್ಸು ಮತ್ತು ಸರ್ಕಾರಿ ಬಸ್ಸು - ಎರಡೂ ಕೂಡ ಓಡುವಂಥ ವ್ಯವಸ್ಥೆಯನ್ನು ಮಾಡಿದ್ದಾರೆ. ಅದೇ ತರಹ ವ್ಯವಸ್ಥೆಯನ್ನು ತಾವೂ ಮಾಡಿ. ಯಾವ ತರಹ ಎಂದರೆ, ಈಗ ಕೊನೆಯ ಪಕ್ಷ 30-40 ಕಿಲೋಮೀಟರ್‌ವರೆಗೆ ಮಾಡಿ. ಬೆಂಗಳೂರಿನಿಂದ 50 ಕಿಲೋಮೀಟರ್, ಮೈಸೂರಿನಿಂದ 50 ಕಿಲೋಮೀಟರ್, ಹುಬ್ಬಳ್ಳಿ ಧಾರವಾಡದಿಂದ ಒಂದು ಐವತ್ತು ಕಿಲೋಮೀಟರ್, ಇಷ್ಟು ಕಿಲೋಮೀಟರ್ ದೂರದವರೆಗೆ ಪ್ರೈವೇಟ್ ಮತ್ತು ಸರ್ಕಾರಿ ಬಸ್ಸುಗಳು ಓಡಾಡುವ ವ್ಯವಸ್ಥೆ ಮಾಡಿ. ಅವರು ಕಾಂಪೀಟ್ ಮಾಡುವುದಕ್ಕೆ ಬಿಡಿ. ಇವರು ಏನು ಮಾಡುತ್ತಾರೆ ಎಂದರೆ, ಬರೇ ಮೆಟಾಡಾರ್‌ಗೇ ಏನೂ ಮಾಡಲಾರರು. ಇನ್ನು ಬಸ್ಸುಗಳನ್ನು ಬಿಟ್ಟರೆ ಏನಾಗಬಹುದು ಎನ್ನುವ ಭಯದಿಂದ ಇರಬಹುದು. ನೀವು 60-65 ಸಾವಿರ ಜನ ಕಾರ್ಮಿಕರಿಗೆ ಹೆದರಿಕೊಂಡು, ಕೇವಲ ನಮ್ಮ ಹತ್ತಿರ ಇಷ್ಟು ಬಸ್ಸುಗಳು ಇವೆ, ಇವುಗಳಿಂದ ಹೇಗಪ್ಪ ನಡೆಸಬೇಕು ಎಂದು ನಿಮಗೆ ಭಯ ಇದ್ದರೆ, ನ್ಯಾಷನಲೈಸೇಶನ್ ಎನ್ನುವುದನ್ನು ತೆಗೆದುಹಾಕಿಬಿಡಿ. ನಾವು ಅದಕ್ಕೆ ಒಪ್ಪಿಗೆಯನ್ನು ಕೊಡುತ್ತೇವೆ. ಸರ್ಕಾರ ಏನೇ ಮಾಡಿದರೂ ಕೂಡ ಅದು ಸಾರ್ವಜನಿಕರ ಹಿತಾಸಕ್ತಿಯಿಂದ ಕೂಡಿ-ದ್ದಾಗಿರಬೇಕು. ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡುವುದಕ್ಕೆ ಯೋಗ್ಯತೆ ಇಲ್ಲದಿದ್ದಾಗ, ಏಕೆ ಸರ್ಕಾರ ಅಂತಹ ಸ್ಥಿತಿಯನ್ನು ತಂದುಕೊಳ್ಳಬೇಕು? ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕಳಕಳಿ-ಯಿಂದ ಮನವಿ ಮಾಡಿಕೊಳ್ಳುತ್ತೇನೆ. ಅವರು ನ್ಯಾಷನಲೈಸ್ಡ್ ರೂಟ್‌ನಲ್ಲಿ ಓಡಾಡತಕ್ಕಂಥ ಬಸ್ಸುಗಳ ಜೊತೆಗೆ ಪ್ರೈವೇಟ್‌ನವರೂ ಓಡಿಸುವಂತೆ ಮಾಡಿಕೊಡಬೇಕು. ಇನ್ನು ಕೇವಲ ಮೂರು, ನಾಲ್ಕು ಅಥವಾ ಐದು ಕಿಲೋಮೀಟರ್ ಕೆಲವು ಕಡೆಗಳಲ್ಲಿ ಕ್ರಾಸ್ ಮಾಡಬೇಕಾಗುತ್ತದೆ. ನಮ್ಮಲ್ಲಿ ಪರಿ-ಪೂರ್ಣವಾಗಿ ರೂಟು ನ್ಯಾಷನಲೈಸ್ ಆಗಿಲ್ಲ. ಅಂತಹ ಕಡೆ ಏನಾಗುತ್ತದೆ ಎಂದರೆ, ಗ್ರಾಮೀಣ

ಪ್ರದೇಶಗಳಲ್ಲಿ ಓಡುವ ಬಸ್ಸುಗಳನ್ನು ಪ್ರೈವೇಟ್‌ನವರಿಗೆ ಕೊಟ್ಟರೆ, ಆ ಬಸ್ಸು ನ್ಯಾಷನಲೈಸ್ಡ್ ರೂಟ್‌ನಲ್ಲೇ ಒಂದು ಕಿಲೋಮೀಟರ್, ಎರಡು ಕಿಲೋಮೀಟರ್ ಓಡಬೇಕಾಗುತ್ತದೆ. ನಾನು ಉದಾಹರಣೆಯಾಗಿ, ಒಂದೇ ಒಂದು ಮಾತನ್ನು ಹೇಳುತ್ತೇನೆ. ಶ್ರೀರಂಗಪಟ್ಟಣದಿಂದ ನನ್ನ ಬನ್ನೂರು, ಸೋಮನಾಥಪುರ, ತಲಕಾಡಿಗೆ ಬರಬೇಕಾದರೆ ಪಶ್ಚಿಮವಾಹಿನಿ ಬರುತ್ತದೆ. ಪಶ್ಚಿಮವಾಹಿನಿಯಿಂದ ಶ್ರೀರಂಗ ಪಟ್ಟಣ, ಬಾಬುರಾಯನಕೊಪ್ಪಲಿನವರೆಗೆ ನಾಲ್ಕು ಕಿಲೋಮೀಟರ್ ಆಗುತ್ತದೆ. ಅಲ್ಲಿ ಪ್ರೈವೇಟ್‌ನವರ ಬಸ್ ಓಡಾಡಕೂಡದು. ಹಾಗಾದರೆ ಆ ಬಾಬುರಾಯನ ಕೊಪ್ಪಲಿನಿಂದ ಜನರು ಹೇಗೆ ವಾಪಸ್ಸು ಬರುವುದಕ್ಕೆ ಆಗುತ್ತದೆ? ಮೈಸೂರು, ಶ್ರೀರಂಗಪಟ್ಟಣ, ಕೆ.ಆರ್.ಎಸ್.ಗೆ ಹೋಗಬೇಕೆಂದರೆ, ಈ ಕಡೆಗೆ ನಾಲ್ಕು - ಐದು ಕಿಲೋಮೀಟರ್ ಎಲ್ಲಿ ಡಿಸ್ಟೆನ್ಸ್ ಇದೆಯೋ, ನ್ಯಾಷನಲೈಸ್ಡ್ ರೂಟ್ಸ್ ಇದೆಯೋ, ಅಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಓಡಾಡಲಿಕ್ಕೆ ಅವಕಾಶ ಆಗಬೇಕಾದರೆ ಅಲ್ಲಿ ಬಹಳ ಜನರಿಗೆ ತೊಂದರೆಯಾಗಿದೆ. ಆದ್ದರಿಂದ ಇದನ್ನು ಐದರಿಂದ ಹತ್ತು ಕಿ.ಮೀ. ವರೆಗೆ ಎಷ್ಟು ಬೇಕೋ ಅಷ್ಟು, ಕಿ.ಮೀ.ವರೆಗೆ ಪ್ರೈವೇಟ್‌ನವರಿಗೆ ಬಸ್ಸುಗಳನ್ನು ಓಡಾಡಿಸುವುದಕ್ಕೆ ಅನುಕೂಲವಾಗುವ ಹಾಗೆ ತಾವು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇದರ ದಕ್ಷತೆ ಹೆಚ್ಚಬೇಕಾದರೆ, ಈಗಾಗಲೇ ನಾವು ಹೇಳಿದ್ದೇವೆ. ಹಿಂದೆ ಮಾನ್ಯ ದೇವರಾಜ ಅರಸು ಅವರು ಇದ್ದಾಗ, ಆನ್‌ಕಾಂಟ್ರ್ಯಾಕ್ಟ್ ಬಸ್ಸುಗಳನ್ನು ಇವರು ನ್ಯಾಷನಲೈಸ್ ಮಾಡಿ ಕೊಂಡರು. ಈಗ ಆನ್ ಕಾಂಟ್ರ್ಯಾಕ್ಟ್ ಬಸ್ಸುಗಳು ನಮ್ಮ ರಾಜ್ಯದಲ್ಲಿ ಓಡಾಡುತ್ತಿಲ್ಲವೇನು? ಈ ಲಕ್ಸುರಿ ಬಸ್ಸುಗಳು ಎಲ್ಲಿಂದ ಬಂದವು, ಇವು ಎಲ್ಲಿ ರಿಜಿಸ್ಟ್ರೇಷನ್ ಆದವು? ಇವು ನಮ್ಮಲ್ಲಿ ರಿಜಿಸ್ಟ್ರೇಷನ್ ಆಗುವಹಾಗಿಲ್ಲ. ನಾವೇನಾದರೂ ಮದುವೆಗೆ ಬಸ್ಸು ತೆಗೆದುಕೊಳ್ಳಬೇಕಾದರೆ ಕೆ.ಎಸ್.ಆರ್.ಟಿ.ಸಿ.ಗೆ ಹೋಗಬೇಕು, ಮೂರು - ನಾಲ್ಕು ಸಾವಿರ ರೂಪಾಯಿಗಳನ್ನು ಕೊಡಬೇಕು. ನಮಗೆ ಕೇವಲ 20 ಕಿಲೋಮೀಟರ್ ಅಂದರೂ ಸಹ ಅವರಿಗೆ ಮೂರು ಸಾವಿರ ರೂಪಾಯಿಗಳನ್ನು ಕೊಡಬೇಕು. ಈಗ ಆನ್‌ಕಾಂಟ್ರ್ಯಾಕ್ಟ್ ಬಸ್ಸುಗಳು ಆಂಧ್ರ, ತಮಿಳುನಾಡು ಈ ಕಡೆ ರಿಜಿಸ್ಟ್ರೇಷನ್ ಆಗುತ್ತವೆ. ಅವರು ಈ ಬಸ್ಸುಗಳನ್ನು ಬಾಡಿಗೆಗೆ ತಂದು ಇಲ್ಲೆಲ್ಲ ಓಡಿಸುತ್ತಿದ್ದಾರೆ. ತಾವು ಕಲಾಸಿಪಾಳ್ಯ, ಕೆ.ಎಸ್.ಆರ್.ಟಿ.ಸಿ. ಯಲ್ಲಿ ನೋಡಿ. ನಮ್ಮ ರಾಜ್ಯದಲ್ಲೇ ನೋಂದಾಯಿಸಿದ ಬಸ್ಸುಗಳಿಗೆ, ಕಾಂಟ್ರಾಕ್ಟ್ ಬಸ್ಸುಗಳಿಗೆ, ಯಾರು ಮೋಟಾರ್ ವೆಹಿಕಲ್ಸ್ ಡಿಪಾರ್ಟಮೆಂಟಿಗೆ ಬಂದು ನಾವು ಮಾಡುತ್ತೇವೆ ಎಂದು ಹೇಳುತ್ತಾರೆ, ಅಂತಹವರಿಗೆ ನಾವು ಅವಕಾಶ ಕೊಡಬೇಕಾಗುತ್ತದೆ. ದಯಮಾಡಿ ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ, ಆನ್‌ಕಾಂಟ್ರಾಕ್ಟ್ ಬೆಸಸ್ ಕೊಡುವಂಥ, ವ್ಯವಸ್ಥೆ ರಾಜ್ಯದಲ್ಲೂ ಆಗಬೇಕು. ಇದರಿಂದ ಬೊಕ್ಕಸಕ್ಕೆ ಬರುವ ಹಣ ಇಲ್ಲೇ ಭರ್ತಿಯಾಗಬೇಕು. ಇದು ಮೋಸ ಆಗುತ್ತಿದೆ. ಏಕೆಂದರೆ ತಾವು ಒಂದು ಲೆಕ್ಕ ಹಾಕಿ, ಆನ್‌ಕಾಂಟ್ರ್ಯಾಕ್ಟ್ ಬಸ್ಸುಗಳು ನಮ್ಮ ರಾಜ್ಯದಲ್ಲಿ ಎಷ್ಟು ಓಡಾಡುತ್ತಿವೆ ಎಂದು. ಅದು ರಿಜಿಸ್ಟ್ರೇಷನ್ ಆಗಿರುವುದನ್ನು ತೆಗೆದುಕೊಂಡಾಗ ಅದು ತಮಿಳುನಾಡು, ಆಂಧ್ರಪ್ರದೇಶ ಬೇರೆಬೇರೆ ಕಡೆಯದ್ದು ಇರುತ್ತದೆ. ಆದ್ದರಿಂದ ದಯಮಾಡಿ ಆನ್‌ಕಾಂಟ್ರ್ಯಾಕ್ಟ್ ಬಸ್ಸುಗಳು ಕೂಡ ಇಲ್ಲೇ ನಮ್ಮಲ್ಲೇ ರಿಜಿಸ್ಟ್ರೇಷನ್ ಆಗುವಂತೆ ವ್ಯವಸ್ಥೆ ಆಗಬೇಕು.

ಇನ್ನು ಬಸ್‌ಶೆಲ್ಟರ್ ಬಗ್ಗೆ ಹೇಳಬೇಕೆಂದರೆ, ಎಲ್ಲೆಲ್ಲಿ ಉಚಿತವಾಗಿ ಸೈಟು ಸಿಗುತ್ತದೆ, ಅಲ್ಲಿ ಬಸ್ ಸ್ಟಾಂಡ್‌ಗಳನ್ನು ಕಟ್ಟುತ್ತಾರೆ. ನಮ್ಮಂಥ ಪ್ರದೇಶಗಳಲ್ಲಿ ಹೀಗೆ ಫ್ರೀ ಸೈಟುಗಳನ್ನು ಕೊಡುವುದಕ್ಕೆ ಆಗು-ವುದಿಲ್ಲ. ಆದರೆ ಅಲ್ಲಿ ಬಸ್‌ಸ್ಟಾಂಡ್ ಅವಶ್ಯಕತೆ ಇದೆ. ಅಂತಹ ಕಡೆ ಅಕ್ವಿಸಿಶನ್ ಮಾಡಿ ಕಟ್ಟಿ. ಕೆ.ಎಸ್.ಆರ್.ಟಿ.ಸಿ.ಗೇನೂ ಬಡತನ ಇಲ್ಲ, ಎಲ್ಲಿ ಸೂಕ್ತವಾದ ಸ್ಥಳ ಸಿಗುತ್ತದೆಯೋ ಅಲ್ಲಿ ಅಕ್ವೀಸಿಶನ್ ಮಾಡಿ ಕಟ್ಟಿ. ಅವಶ್ಯಕತೆ ಇರುವ ಕಡೆ ಕೊಡಿ. ಅವಶ್ಯಕತೆ ಇಲ್ಲದಿರುವ ಕಡೆ ಅಥವಾ ಬೇರೆ ಎಲ್ಲೋ ಜಾಗ ಕೊಡುತ್ತಾರೆ ಎಂದು ಹೇಳಿಬಿಟ್ಟು ತಾವು ಅಲ್ಲಿ ಬಸ್‌ಸ್ಟ್ಯಾಂಡ್‌ನ್ನು ಕಟ್ಟಿಬಿಟ್ಟು ಅನುಕೂಲ-ಮಾಡಿದ್ದೇವೆ ಎಂದರೆ ಆಗುವುದಿಲ್ಲ. ಆದರೆ ಬಸ್ ಶೆಲ್ಟರ್‌ಗಳು ಬೇಕು. ಈಗ ತಾವು ತಾಲ್ಲೂಕು, ಜಿಲ್ಲಾ ಪಂಚಾಯತಿಗಳಲ್ಲಿ ಬಸ್‌ಶೆಲ್ಟರ್‌ಗಳನ್ನು ಕಟ್ಟಬೇಕೆಂದು ಮಾಡಿದ್ದೀರಿ. ಆದರೆ ರಾಷ್ಟ್ರೀಯ ಹೆದ್ದಾರಿ-ಗಳಲ್ಲಿ ಬಸ್ಸುಗಳು ಓಡಾಡುವಂಥ ಕಡೆ ಬಸ್‌ಶೆಲ್ಟರ್‌ಗಳನ್ನು ಎಲ್ಲಾ ಪಂಚಾಯತ್‌ನವರು ಕಟ್ಟುವುದಕ್ಕೆ ಆಗುವುದಿಲ್ಲ. ಆದ್ದರಿಂದ ಎಲ್ಲೆಲ್ಲಿ ನಿಮ್ಮ ನ್ಯಾಷನಲೈಸ್ಡ್ ರೂಟುಗಳಲ್ಲಿ ನಿಮ್ಮ ಬಸ್ಸುಗಳು ಓಡುತ್ತವೆ, ಅಲ್ಲಿ ಬಸ್‌ಶೆಲ್ಟರ್‌ಗಳನ್ನು ಕಟ್ಟುವಂಥ ವ್ಯವಸ್ಥೆಯಾಗಬೇಕು. ಈಗ ಒಂದೆರೆಡು ಕಿಲೋಮೀಟರ್ ದೂರ-ದಿಂದ ಬರುತ್ತಾರೆ, ಬಂದು ನಿಂತರೆ ಅಲ್ಲಿ ಬಸ್‌ಶೆಲ್ಟರ್ ಇರುವುದಿಲ್ಲ.

(ಮಾನ್ಯ ಅಧ್ಯಕ್ಷರು ತಮ್ಮ ಪೀಠದಲ್ಲಿ ಉಪಸ್ಥಿತರಾದರು)

ಅಲ್ಲಿ ನಿಂತುಕೊಳ್ಳುವುದಕ್ಕೆ ಅವರಿಗೆ ಸ್ಥಳ ಇರುವುದಿಲ್ಲ. ತಾಲ್ಲೂಕು ಪಂಚಾಯತಿಗೆ ಬರತಕ್ಕಂಥ ಹಣ-ದಲ್ಲಿ ಎರಡು - ಮೂರು ಬಸ್‌ಶೆಲ್ಟರ್‌ಗಳನ್ನು ಅವರು ಕಟ್ಟುತ್ತಾರೆ. ಅದು ಎಷ್ಟು ವರ್ಷಕ್ಕೆ ಪೂರ್ಣ-ವಾಗುತ್ತದೆ? ಆದ್ದರಿಂದ ತಾವು ದಯಮಾಡಿ ಕೆ.ಎಸ್.ಆರ್.ಟಿ.ಸಿ. ಬಸ್‌ಶೆಲ್ಟರ್‌ಗಳನ್ನು ಎಲ್ಲೆಲ್ಲಿ ಜಂಕ್ಷನ್ಸ್ ಇವೆ, ಎಲ್ಲಿ ಹಳ್ಳಿಗಳಿಂದ ಜನರು ಬಂದು ನಿಲ್ಲುತ್ತಾರೆ, ಅಲ್ಲಿ ಬಸ್‌ಶೆಲ್ಟರ್‌ಗಳನ್ನು ಕಟ್ಟಿ-ಕೊಡುವ ವ್ಯವಸ್ಥೆಯನ್ನು ತಾವು ಮಾಡಿಕೊಡಬೇಕು ಎಂದು ನಾನು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಈ ಕೆ.ಎಸ್.ಆರ್.ಟಿ.ಸಿ. ಬಗ್ಗೆ ನಾನು ಹೆಚ್ಚಿಗೆ ಹೇಳಬೇಕಾಗಿಲ್ಲ. ಏಕೆಂದರೆ ಯಾವುದೇ ಒಂದು ಊರಿಗೆ ಹೋಗಬೇಕಾದರೂ ಕೂಡ ಆ ಊರಿನ ಜನ ಹೇಳುತ್ತಾರೆ, ಸಿಂಧ್ಯರವರು ಮಂತ್ರಿ-ಯಾದ ಮೇಲೆ ಕೆ.ಎಸ್.ಆರ್.ಟಿ.ಸಿ. ಇನ್ನು ಬಿಡಪ್ಪ ಎಂದು.

ಅಧ್ಯಕ್ಷರು:- ನಿಮ್ಮ ಊರಿನಲ್ಲಿ ಏನೋ ಕಾರ್ಯಕ್ರಮ ಇದೆ ಬೇಗ ಹೋಗಬೇಕು ಎಂದು ಹೇಳುತ್ತಿದ್ದೀರಿ!

ಶ್ರೀ ಎಸ್. ಕೃಷ್ಣಪ್ಪ:- ಮಾನ್ಯ ಸಭಾಧ್ಯಕ್ಷರೇ, ಪ್ರೈವೇಟ್ ಮತ್ತು ಕೆ.ಎಸ್.ಆರ್.ಟಿ.ಸಿ. ಎರಡೂ ಬಸ್ಸುಗಳು ಕೂಡ ನ್ಯಾಷನಲೈಸ್ಡ್ ರೂಟ್‌ನಲ್ಲಿ ಹೋಗಬೇಕು. ಪಟ್ಟಣದ ಸುತ್ತಮುತ್ತ ಇರತಕ್ಕಂಥ ಜನರಿಗೆ ಮತ್ತು ಹಳ್ಳಿಗಾಡಿನಿಂದ ಬರತಕ್ಕಂಥ ಜನರಿಗೆ ಅನುಕೂಲವಾಗುವಂತೆ ಈ ಬಸ್ಸುಗಳು ಹೆಚ್ಚಿಗೆ ಓಡಾಡಲು ಅವಕಾಶ ಮಾಡಿಕೊಡಬೇಕೆಂದು ಕೇಳುತ್ತಾ, ಸರ್ಕಾರ ಏನು ಇವತ್ತಿನ ದಿವಸ ಹಣಕಾಸಿನ ಬೇಡಿಕೆಯನ್ನು ಮಂಡಿಸಿದೆ ಅದಕ್ಕೆ, ನಾನು ಪರಿಪೂರ್ಣವಾದ ಬೆಂಬಲವನ್ನು ಕೊಡುತ್ತಾ, ಸರ್ಕಾರ-

ದವರು ನಾನು ಕೊಟ್ಟಂಥ ಸಲಹೆಯನ್ನು ತೆಗೆದುಕೊಂಡು ತಾವು ಉತ್ತರ ಕೊಡುವಾಗ ಅದರ ಬಗ್ಗೆ ಹೇಳಬೇಕು ಮತ್ತು ಇದನ್ನೆಲ್ಲ ಸಾರ್ವಜನಿಕ ಹಿತದೃಷ್ಟಿಯಿಂದ ಮಾಡಿಕೊಡಬೇಕು ಎಂದು ಕೇಳಿ, ಮೊದಲನೇ ಸಾರಿ ನಾನು ಭಾಷಣ ಮಾಡಿದ್ದೇನೆ. ಇಷ್ಟು ಅವಕಾಶ ಮಾಡಿಕೊಟ್ಟಿದ್ದಕ್ಕೆ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು:- ಇನ್ನೂ ಮುಂದೆ ಸಾಕಷ್ಟು ಅವಕಾಶ ಕೊಡುತ್ತೇನೆ. ಈಗ ಪ್ರಶ್ನೋತ್ತರ.

ಪ್ರಶ್ನೋತ್ತರ

(2) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ವಿಷಯ:- ಧಾರವಾಡದಲ್ಲಿ ಶೀತಾಗಾರದ ಅವಶ್ಯಕತೆ.

286 (1828) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ):- ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡದಲ್ಲಿ ಶೀತಾಗಾರದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಯಾವ ಬೆಳೆಗಳ ಸಲುವಾಗಿ?

ಆ) ಪ್ರತಿ ವರ್ಷದ ತೋಟಗಾರಿಕೆ ಉತ್ಪನ್ನಗಳು ಹಾಗೂ ಶೀತಾಗಾರರ ಅವಶ್ಯಕತೆ ಇರುವ ಬೆಳೆಗಳು ಯಾವ ಪ್ರಮಾಣದಲ್ಲಿ ಬೆಳೆಸಲಾಗುತ್ತಿದೆ?

ಇ) ಹಾಗಿದ್ದಲ್ಲಿ ಕಟ್ಟಡವನ್ನು ಯಾವಾಗ ಕಟ್ಟಿಸಲಾಗುವುದು?

ಶ್ರೀ ಡಿ.ಟಿ. ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):-

ಅ) ಬಂದಿದೆ, ಧಾರವಾಡ ಜಿಲ್ಲೆಯಲ್ಲಿ ಬೆಳೆಯುತ್ತಿರುವ ಆಲೂಗಡ್ಡೆ, ಮೆಣಸಿನಕಾಯಿ, ದ್ರಾಕ್ಷಿ, ದಾಳಿಂಬೆ, ಮಾವು, ಟೊಮೆಟೋ ಮತ್ತು ಇತರೆ ತೋಟಗಾರಿಕೆ ಉತ್ಪನ್ನಗಳನ್ನು ಶೀತಲಗೃಹಗಳಲ್ಲಿ ಕೆಡದಂತೆ ಕೆಲಕಾಲ ಸಂಗ್ರಹಿಸಿ ಇಡಬಹುದು.

ಆ) ಧಾರವಾಡ ಜಿಲ್ಲೆಯಲ್ಲಿ 1,53,667 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ಬೆಳೆಯಲಾಗುತ್ತಿದ್ದು 9,46,705 ಮೆಟ್ರಿಕ್ ಟನ್ ಉತ್ಪಾದನೆ ಮಾಡಲಾಗುತ್ತಿದೆ. ಶೈತ್ಯಾಗಾರಗಳಲ್ಲಿ ಕೆಡದಂತೆ ಶೇಖರಿಸಬಹುದಾದ ಉತ್ಪನ್ನಗಳು ಇಂತಿವೆ.

	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)	ಉತ್ಪಾದನೆ (ಮೆಟ್ರಿಕ್ ಟನ್)
1. ಆಲೂಗಡ್ಡೆ	4118	73712
2. ಎಲೆಕೋಸು	561	13464
3. ಮೆಣಸಿನಕಾಯಿ	92242	230605
4. ದ್ರಾಕ್ಷಿ	24	720
5. ದಾಳಿಂಬೆ	312	1809